ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 22 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 275 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಬಂಧುಗಳೇ,
ಅಸಾಧ್ಯವೆಂದು ತಿಳಿಯಲಾಗಿದ್ದ ಒಂದು ಮಹತ್ಕಾರ್ಯ ಸಮಸ್ತ ಭಾರತೀಯರ ಹೋರಾಟ, ತ್ಯಾಗ, ಹರಕೆ ಮತ್ತು ನಿಷ್ಕಳಂಕ ಭಕ್ತಿಯಿಂದ ಈಗ ನೆರವೇರುತ್ತಿದೆ. ಇದೊಂದು ಈ ಶತಮಾನದ ಸನಾತನ ಧರ್ಮದ ಸಾಧನೆಯ ಮೈಲಿಗಲ್ಲೆಂದರೆ ತಪ್ಪಲ್ಲ.

ರಾಮಾಯಣದಲ್ಲಿ ಉತ್ತರಪ್ರದೇಶದ ಸರಯೂ ನದಿ ತೀರದ ಅಯೋಧ್ಯೆಯಲ್ಲಿ ವಿಷ್ಣುವಿನ ಏಳನೇ ಅವತಾರವಾದ ಶ್ರೀರಾಮನ ಜನನವಾಯಿತೆಂದು ಉಲ್ಲೇಖಿಸಿದ್ದು, ಕಾಲಾನಂತರ ಇದು **"ಶ್ರೀರಾಮ ಜನ್ಮಭೂಮಿ"**ಯಾಗಿ ಪ್ರಸಿದ್ಧಿಯಾಯ್ತು. ನಂತರದ ಕಾಲಮಾನದಲ್ಲಿ ಶ್ರೀರಾಮನ ಜನ್ಮಭೂಮಿ ಒಂದು ಪವಿತ್ರ ಹಿಂದೂ ಯಾತ್ರಾಸ್ಥಳವಾಗಿ ಪರಿಣಮಿಸಿತು.

ಶತಶತಮಾನಗಳಿಂದ ರಾಮಜನ್ಮಭೂಮಿಯಲ್ಲಿ ಭಕ್ತ ಜನರಿಂದ ನಿರ್ಮಿಸಲಾದ ಶ್ರೀರಾಮ ದೇವಾಲಯದಲ್ಲಿ "ರಾಮಲಲ್ಲಾ"ನ ಪೂಜಾ ಕಾರ್ಯಗಳು ನಿರಂತರವಾಗಿ ನಡೆದುಕೊಂಡು ಬರುತ್ತಿವೆ. ಉತ್ತರ ಭಾರತದ ಆಡು ಭಾಷೆಯಲ್ಲಿ ಶ್ರೀರಾಮ **"ರಾಮಲಲ್ಲಾ"**ನಾದ. ಅವರು ಚಿಕ್ಕ ಮಕ್ಕಳನ್ನು ಮುದ್ದಿನಿಂದ ಲಲ್ಲಾ, ಲಲ್ಲನ್ ಎಂದು ಕರೆಯುತ್ತಾರೆ. ಹಾಗೆಯೇ ಅಯೋಧ್ಯೆಯಲ್ಲಿರುವ ಮೂರ್ತಿ ಕೂಡ ಎಳೆಯ ವಯಸ್ಸಿನ ಶ್ರೀರಾಮ **"ರಾಮಲಲ್ಲಾ"**ನಾದ.

ಇದೇ ಜನವರಿ ೨೨ರ ಸೋಮವಾರ ಶ್ರೀರಾಮಲಲ್ಲಾನು, ಭವ್ಯ ಸುಂದರ ರಾಮಮಂದಿರದ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆಗೊಳ್ಳುತ್ತಿರುವುದು ಪ್ರತಿಯೊಬ್ಬ ಭಾರತೀಯನ ಜೀವಿತಾವಧಿಯಲ್ಲಿ ಅದೃಷ್ಟ ಮತ್ತು ಮರೆಯಲಾಗದ ಮಧುರ ಕ್ಷಣವೇ ಸರಿ. ಒಟ್ಟಾರೆಯಾಗಿ ಶ್ರೀರಾಮಮಂದಿರದ ಇತಿಹಾಸ, ಪುರಾಣ–ಪುಣ್ಯಕಥೆಗಳು, ಚಾರಿತ್ರಿಕ ಘಟನೆಗಳು ಮತ್ತು ಸಾಮಾಜಿಕ–ರಾಜಕೀಯ ದಾರಗಳಿಂದ ನೇಯ್ದ ಭಕ್ತಿಪೂರ್ವಕ ವಸ್ತ್ರವೇ ಆಗಿದೆ.

ಬಂಧುಗಳೆ, ಈ ಮಹತ್ಕಾರ್ಯ ಸಾಮಾನ್ಯರಿಂದ ನೆರವೇರಿಸಲು ಸಾಧ್ಯವಿಲ್ಲ. ಈ ಘನ ಕಾರ್ಯಕ್ಕೆಂದೇ ಭರತ ಭೂಮಿಯಲ್ಲಿ ಒಬ್ಬ ಮಹಾಪುರುಷರು ಅವತರಿಸಿದರು. ಅವರೇ ನಿಷ್ಕಳಂಕ, ಪ್ರಾಮಾಣಿಕ, ದೃಢ ಹಾಗೂ ನಿರ್ಮಲ ಮನದ **"ಶ್ರೀ ನರೇಂದ್ರ ಮೋದಿ"**.

ಇವರಿಂದ ನೂರಾರು ಕೋಟಿ ಹಿಂದೂಗಳ ಕನಸು ನನಸಾಗುವ ಈ ಶುಭ ಸಂದರ್ಭದಲ್ಲಿ ನಮ್ಮೆಲ್ಲರ ಧೀಮಂತ ನಾಯಕ, ಅಜಾತಶತ್ರು, ಕರ್ನಾಟಕದ ರಾಜಕೀಯ ಮುತ್ಸದ್ದಿ ಹಾಗೂ ಧಾರ್ಮಿಕ ಚಿಂತಕರು, ಮಹಾದೈವ ಭಕ್ತರೂ ಆದ ಸನ್ಮಾನ್ಯ **ಶ್ರೀ ಹೆಚ್.ಡಿ.ದೇವೇಗೌಡರು**, ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಕೈ ಬಲಪಡಿಸುತ್ತಿರುವುದು ಶ್ರೀಕಾಲಭೈರವನ ಪ್ರೇರಣೆಯಾಗಿದೆ.

ಜನವರಿ ೨೨ರಂದು ಪ್ರತಿಷ್ಠಾಪನೆಯಾಗಲಿರುವ ರಾಮಲಲ್ಲಾ (ಬಾಲರಾಮ) ವಿಗ್ರಹಕ್ಕೆ ಕರುನಾಡಿನ ಶಿಲೆಯಲ್ಲಿ, ಮೈಸೂರಿನವರೇ ಆದ ಕನ್ನಡಿಗ ಶಿಲ್ಪಿ **ಅರುಣ್ ಯೋಗಿರಾಜ್** ಅವರು ಕೆತ್ತಿರುವ ವಿಗ್ರಹ ಪರಿಗಣಿತವಾಗಿರುವುದು ಆರೂವರೆ ಕೋಟಿ ಕನ್ನಡಿಗರಿಗೆ ಹೆಮ್ಮೆ ತಂದಿದೆ. ಈ ಪರಮಾತ್ಮನ ಮೂರ್ತಿಯ ಪವಿತ್ರ ಶಿಲೆ ನಾನು ಪ್ರತಿನಿಧಿಸುವ ಚಾಮುಂಡೇಶ್ವರಿ ಕ್ಷೇತ್ರದ ಹಾರೋಹಳ್ಳಿ–ಗುಜ್ಜೇಗೌಡನಪುರ ಪುಣ್ಯಭೂಮಿಯಲ್ಲಿ ದೊರೆತಿರುವುದು ನನ್ನ ಪಾಲಿಗೆ ಚಾಮುಂಡೇಶ್ವರಿ ಹಾಗೂ ಶ್ರೀರಾಮ ಪ್ರಭುವಿನ ವರಪ್ರಸಾದವೆಂದೇ ಭಾವಿಸುತ್ತೇನೆ.

ಕೆಲವು ತಿಂಗಳ ಹಿಂದೆ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಪ್ರಧಾನಿ ಮೋದಿಯವರು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ, ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು, ವಿಶೇಷ ಪ್ರಾರ್ಥನೆ ಸಲ್ಲಿಸಿದ್ದರು. ಅವರ ಭಕ್ತಿ ಸಂಕಲ್ಪದ ಸಾಕ್ಷಿಯಾಗಿ, ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಅವರ ಮಹದುದ್ದೇಶಿತ ಶ್ರೀರಾಮನ ಮೂರ್ತಿಗೆ ಶಿಲೆ ದೊರೆತಿರುವುದು ಚಾಮುಂಡೇಶ್ವರಿಯ ವರವಲ್ಲದೆ ಮತ್ತಿನ್ನೇನು ಎಂದು ಆಸ್ತಿಕ ಮಹಾಶಯರು ನಂಬಿದ್ದಾರೆ.

ಜನವರಿ 22, 2024ರ ಸೋಮವಾರ, ಬೆಳಗ್ಗೆ 11ರಿಂದ ಮಧ್ಯಾಹ್ನ 1ರ ವೇಳೆಗೆ ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ ನಡೆಯಲಿದೆ. ಈ ಸಂದರ್ಭದಲ್ಲಿ ಅಯೋಧ್ಯಾನಗರಿ ಶ್ರೀರಾಮ ಭಕ್ತಿಯ ಅಭೂತಪೂರ್ವ ಸಂಭ್ರಮಕ್ಕೆ ಸಾಕ್ಷಿಯಾಗಲಿದೆ.


ಈ ಒಂದು ಶುಭ ಸಮಯದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಗ್ರಾಮ, ಮೊಹಲ್ಲಾ, ಕಾಲೋನಿ, ಬಸ್ತಿಗಳಲ್ಲಿರುವ ಪೂಜಾ–ಪ್ರಾರ್ಥನಾ ಮಂದಿರಗಳಲ್ಲಿ ಪೂಜೆ, ಭಜನೆ, ಕೀರ್ತನೆ ಹೀಗೆ ಭಕ್ತಿ ಕಾರ್ಯಗಳನ್ನು ಕೈಗೊಳ್ಳಿ. **"ಶ್ರೀರಾಮ ಜಯರಾಮ, ಜಯಜಯರಾಮ"** ವಿಜಯ ಮಂತ್ರವನ್ನು ಸಾಮೂಹಿಕವಾಗಿ 108 ಬಾರಿ ಜಪ ಮಾಡುವ ಮೂಲಕ ಶ್ರೀರಾಮನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ. ಪ್ರಾಣ ಪ್ರತಿಷ್ಠಾಪನೆಯ ದಿನದಂದು ಸೂರ್ಯಾಸ್ತಮಾನದ ನಂತರ ತಮ್ಮ ತಮ್ಮ ಮನೆಗಳನ್ನು ಹಸಿರು ತೋರಣಗಳಿಂದ ಸಿಂಗರಿಸಿ, ರಂಗೋಲಿಯ ಚಿತ್ತಾರ ಮೂಡಿಸಿ, ದೀಪಾಲಂಕಾರಗಳಿಂದ ಇಡೀ ಗ್ರಾಮದಲ್ಲಿ ದೀಪೋತ್ಸವ ನಡೆಯಲಿ. ಇಡೀ ಜಗತ್ತು ಜ್ಯೋತಿರ್ಮಯವಾಗಿ ಶ್ರೀರಾಮನಿಗೆ ನಮ್ಮೆಲ್ಲರ ಭಕ್ತಿಯು ಸಲ್ಲಲಿ ಎಂದು ಆಶಿಸುತ್ತೇನೆ.ಭವಿಷ್ಯದ ದಿನಗಳಲ್ಲಿ ದೇಶದೆಲ್ಲೆಡೆ ಸರ್ವರೂ ಸರ್ವ ಧರ್ಮಗಳನ್ನು ಗೌರವಿಸಿ, ಆಚರಿಸಿ, ಐಕ್ಯಮತ್ಯದಿಂದ ನೆಮ್ಮದಿಯ ಬದುಕು ಕಾಣುವಂತಾಗಲಿ. ಇಂತಹ ಸೌಹಾರ್ದಯುತ ಧಾರ್ಮಿಕ ತಳಹದಿಯ ಮೇಲೆ ಸಮೃದ್ಧ ರಾಷ್ಟ್ರ ನಿರ್ಮಾಣವಾಗಲಿ. ರಾಮರಾಜ್ಯದ ಕನಸು ನನಸಾಗಿ, ಶಾಂತಿ, ಸಹಬಾಳು ನಮ್ಮದಾಗಲಿ ಎಂದು ಆಶಿಸುತ್ತೇನೆ.

ಬಂಧುಗಳೇ,

ಜನವರಿ 22ರಂದು ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಸಂದರ್ಭದಲ್ಲಿ ಶ್ರೀರಾಮ ಪ್ರಭುವಿನ ಮೂರ್ತಿಯ ಶಿಲೆ ದೊರೆತಂತಹ, ನನ್ನ ಚಾಮುಂಡೇಶ್ವರಿ ಕ್ಷೇತ್ರದ ಹಾರೋಹಳ್ಳಿಯ ಪವಿತ್ರ ಸ್ಥಳದಲ್ಲಿ ಬೆಳಿಗ್ಗೆ 6 ಗಂಟೆಯಿಂದ ವಿಶೇಷ ಪೂಜಾ–ವಿಧಿ–ವಿಧಾನಗಳು ನೆರವೇರಲಿವೆ. ಇದೇ ವೇಳೆ ಶಿಲೆಯ ನೆಲೆ ಮಾಲೀಕರಾದ ನಮ್ಮ ದಲಿತ ಬಂಧು, ಕೃಷಿಕ ರಾಮದಾಸ್ ಹಾಗೂ ಪವಿತ್ರ ಶಿಲೆಯ ಗುರುತಿಸಿ, ಯಶಸ್ವಿಯಾಗಿ ಭೂಮಿಯಿಂದ ಹೊರ ತಂದ ಶ್ರೀನಿವಾಸ ನೇತೃತ್ವದ ತಂಡವನ್ನು ಅಭಿನಂದಿಸಲಾಗುವುದು. ಆದರ್ಶ ಹಾಗೂ ಸರ್ವೋತ್ತಮ ಶ್ರೀರಾಮನ ಶಿಲಾ ಸ್ಥಾನದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಗೆ ಭಕ್ತ ಜನ ತಮ್ಮ ತನು–ಮನ–ಧನ ಸಮರ್ಪಣೆಗೆ ಮಹಾಪ್ರಭುವಿನ ಪ್ರೇರಣೆಯಾಗಲಿ ಎಂದು ಪ್ರಾರ್ಥಿಸುತ್ತೇನೆ.

ಇಂತಿ ನಿಮ್ಮ ಸೇವಕ
ಜಿ.ಟಿ.ದೇವೇಗೌಡ





ಸೋಮವಾರ ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ನಡೆಯಲಿರುವ ಹಿನ್ನೆಲೆಯಲ್ಲಿ ಮೂಲತಃ ಮಡಿಕೇರಿಯವರಾಗಿದ್ದು, ಹಾಲಿ ಪಾಂಡವಪುರ ತಾಲೂಕು ಪಟ್ಟಸೋಮನಹಳ್ಳಿಯ ಶಿವನ ದೇವಾಲಯದ ಅರ್ಚಕರಾಗಿರುವ ಎ.ಬಿ.ವಿಜಯಕುಮಾರ್, 'ಶ್ರೀರಾಮ' ಎಂಬ 1008 ಅಕ್ಷರಗಳನ್ನು ಬಳಸಿ ಶ್ರೀರಾಮನ ಸುಂದರವಾದ ಚಿತ್ರವನ್ನು ಬಿಡಿಸುವ ಮೂಲಕ ಶ್ರೀರಾಮನಿಗೆ ಭಕ್ತಿ ಸಮರ್ಪಿಸಿದ್ದಾರೆ.

ರಣಜಿ ಪಂದ್ಯ: ಕರ್ನಾಟಕ 9 ವಿಕೆಟ್‌ಗೆ 498 ಡಿಕ್ಲೇರ್

177 ರನ್ ಮುನ್ನಡೆ, ಗೋವಾ 2ನೇ ಇನ್ನಿಂಗ್ಸ್ 1 ವಿಕೆಟ್ ನಷ್ಟಕ್ಕೆ 93 ರನ್

ಮೈಸೂರು,ಜ.21(ಎಂಟಿವೈ)– ರಣಜಿ ಪಂದ್ಯದಲ್ಲಿ ಕರ್ನಾಟಕ ತಂಡದ ಬ್ಯಾಟ್ಸ್‌ಮನ್‌ಗಳ ಅಬ್ಬರ ಭಾನುವಾರವೂ ಮುಂದುವರೆದಿದ್ದು, 9 ವಿಕೆಟ್ ನಷ್ಟಕ್ಕೆ 498 ರನ್‌ಗಳಿಸಿ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡು ಗೋವಾ ವಿರುದ್ಧ 177 ರನ್‌ಗಳ ಇನ್ನಿಂಗ್ಸ್ ಮುನ್ನಡೆ ಸಾಧಿಸಿತು. ಇದೇ ಮೊದಲ ಬಾರಿಗೆ ರಣಜಿ ಪಂದ್ಯ ಆಡುತ್ತಿರುವ ಮೈಸೂರಿನ ಆಟಗಾರ ನಿಕಿನ್ ಜೋಶ್ 107 ರನ್ ಗಳಿಸುವ ಮೂಲಕ ತಂಡದ ಮೊತ್ತ 400 ರನ್ ಗಡಿ ದಾಟಲು ನೆರವಾದರು. 3ನೇ ದಿನದ ಅಂತ್ಯಕ್ಕೆ ಪ್ರವಾಸಿ ಗೋವಾ ತಂಡ 27 ಓವರ್‌ನಲ್ಲಿ 1 ವಿಕೆಟ್ ಕಳೆದುಕೊಂಡು 93 ರನ್‌ಗಳಿಸಿದೆ.

ಮಾನಸಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಶುಕ್ರವಾರ ಆರಂಭವಾದ 'ಸಿ' ಗ್ರೂಪ್‌ನ ರಣಜಿ ಪಂದ್ಯಾವಳಿಯ ಕರ್ನಾಟಕ–ಗೋವಾ ನಡುವಿನ ಪಂದ್ಯದ 3ನೇ ದಿನವಾದ ಇಂದು ಇನ್ನಿಂಗ್ಸ್ ಮುಂದುವರೆಸಿದ ಕರ್ನಾಟಕ ತಂಡದ ಆಟಗಾರರು ಉತ್ತಮ ಆಟ ಮುಂದುವರೆಸಿದರು. ಎರಡನೇ ದಿನದ ಅಂತ್ಯಕ್ಕೆ 64 ಓವರ್‌ನಲ್ಲಿ 4 ವಿಕೆಟ್ ಕಳೆದುಕೊಂಡು 253 ರನ್ ಗಳಿಸಿದ್ದ ಕರ್ನಾಟಕ ಇಂದು ಉತ್ತಮ ಆಟ ಪ್ರದರ್ಶಿಸಿತು.

ಶನಿವಾರ ಕ್ರೀಸ್ ಕಾಯ್ದುಕೊಂಡಿದ್ದ ಎಸ್.ಜೆ.ನಿಕಿನ್ ಜೋಸ್ ಹಾಗೂ ವಿಕೆಟ್ ಕೀಪರ್ ಎಸ್.ಶರತ್ ಇಂದು ಗೋವಾ ಬೌಲರ್‌ಗಳನ್ನು ಕಾಡಿದರು. ಉತ್ತಮ ಆಟ ಪ್ರದರ್ಶಿಸುತ್ತಿದ್ದ ಈ ಜೋಡಿ 5ನೇ ವಿಕೆಟ್ ಜೊತೆಯಾಟದಲ್ಲಿ 148ರನ್ ಕಲೆ ಹಾಕಿತು. ಈ ವೇಳೆ 4 ಬೌಂಡರಿಯೊಂದಿಗೆ 49 ರನ್ ಗಳಿಸಿದ್ದ ಎಸ್.ಶರತ್ ಭಾರಿ ಹೊಡೆತಕ್ಕೆ ಯತ್ನಿಸಿ ದರ್ಶನ್ ಮಿಶಲ್ ಬೌಲಿಂಗ್‌ನಲ್ಲಿ ಸ್ನೇಹಲ್ ಕೌತಂಕರ್‌ಗೆ ಕ್ಯಾಚ್ ನೀಡಿ ಅರ್ಧಶತಕ ದಾಖಲಿಸುವ ಅವಕಾಶದಿಂದ ವಂಚಿತರಾಗಿ ನಿರ್ಗಮಿಸಿದರು. ಬಳಿಕ ಶುಭಂಗ್ ಹೆಗ್ಡೆಯೊಂದಿಗೆ ಆಟ ಮುಂದುವರೆಸಿದ ನಿಕಿನ್ ಜೋಸ್ ತಂಡದ ಮೊತ್ತ ಹೆಚ್ಚಿಸಿದರು. 6ನೇ ವಿಕೆಟ್ ಜೊತೆಯಾಟದಲ್ಲಿ 72 ರನ್ ದಾಖಲಾಯಿತು. ಈ ವೇಳೆ ತಂಡದ ಮೊತ್ತ 473ರನ್ ಆಗಿದ್ದಾಗ 36ರನ್ ಗಳಿಸಿದ್ದ ಶುಭಂಗ್ ಹೆಗ್ಡೆ ದರ್ಶನ್ ಮಿಶಲ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದರು. ತಂಡದಲ್ಲಿ ಶತಕ ಸಿಡಿಸಿದ 3ನೇ ಆಟಗಾರ ಹೆಗ್ಗಳಿಕೆಗೆ ಪಾತ್ರವಾಗಿ ಆಟ ಮುಂದುವರೆಸುತ್ತಿದ್ದ ಎಸ್.ಜೆ.ನಿಕಿನ್ ಜೋಶ್ 13 ಬೌಂಡರಿಯೊಂದಿಗೆ 107 ರನ್ ಗಳಿಸಿದ್ದಾಗ ದರ್ಶನ್ ಮಿಶಲ್ ಬೌಲಿಂಗ್‌ನಲ್ಲಿ ಸ್ನೇಹಲ್ ಕೌತಂಕರ್‌ಗೆ ಕ್ಯಾಚ್ ನೀಡಿ ತಂಡದ 7ನೇ ವಿಕೆಟ್ ಒಪ್ಪಿಸಿದರು. ಆ ನಂತರ ಎಂ.ವೆಂಕಟೇಶ್ 3 ರನ್ ಗಳಿಸಿ ಮೋಹಿತ್ ರೆಡ್ಕರ್‌ಗೆ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದರೆ, 8ರನ್ ಗಳಿಸಿದ್ದ ವಿ.ವೈಶಾಕ್ ದರ್ಶನ್ ಮಿಶಲ್‌ಗೆ 6ನೇ ಬಲಿಯಾದರು. ಈ ವೇಳೆ ಕರ್ನಾಟಕ ತಂಡದ ಮೊತ್ತ 126.4 ಓವರ್‌ನಲ್ಲಿ 9 ವಿಕೆಟ್ ನಷ್ಟಕ್ಕೆ 498ರನ್ ಆಗಿತ್ತು. ಗೋವಾ ನೀಡಿದ 321 ರನ್‌ಗಳ ಗುರಿ ದಾಟಿ 177 ರನ್ ಮುನ್ನಡೆ ಸಾಧಿಸಿತು. ಈ ವೇಳೆ ನಾಯಕ ಮಾಯಾಂಕ್ ಅಗರ್‌ವಾಲ್ ಇನ್ನಿಂಗ್ಸ್ ಡಿಕ್ಲೇರ್ ಘೋಷಿಸಿದರು.



ಕರ್ನಾಟಕ–ಗೋವಾ ನಡುವಿನ ರಣಜಿ ಪಂದ್ಯದಲ್ಲಿ ಕರ್ನಾಟಕದ ಪರ ಶತಕ ಸಿಡಿಸಿದ ನಿಕಿನ್ ಜೋಶ್ ಸಂಭ್ರಮ.



ಗೋವಾ ತಂಡದ ಪರ ಆಡುತ್ತಿರುವ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ ಬೌಲಿಂಗ್‌ನ ವೈಖರಿ.

ಸಂಕ್ಷಿಪ್ತ ಸ್ಕೋರ್

ಗೋವಾ ಮೊದಲ ಇನ್ನಿಂಗ್ಸ್: 110.1 ಓವರ್‌ನಲ್ಲಿ 321 ರನ್‌ಗೆ ಆಲ್ ಔಟ್, 2ನೇ ಇನ್ನಿಂಗ್ಸ್ ದಿನದ ಅಂತ್ಯಕ್ಕೆ 27 ಓವರ್‌ನಲ್ಲಿ 1 ವಿಕೆಟ್ ನಷ್ಟಕ್ಕೆ 93 ರನ್.
ಕರ್ನಾಟಕ ಮೊದಲ ಇನ್ನಿಂಗ್ಸ್: 126.4 ಓವರ್‌ನಲ್ಲಿ 9 ವಿಕೆಟ್ ನಷ್ಟಕ್ಕೆ 498 ರನ್

ಗೋವಾ ತಂಡದ ಪರವಾಗಿ ದರ್ಶನ್ ಮಿಶಲ್ 47.4 ಓವರ್‌ನಲ್ಲಿ 134 ರನ್ ನೀಡಿ 6 ವಿಕೆಟ್ ಕಬಳಿಸಿದರೆ, ಮೋಹಿತ್ ರೆಡ್ಕರ್ 32 ಓವರ್‌ನಲ್ಲಿ 119 ರನ್ ನೀಡಿ 3 ವಿಕೆಟ್ ಪಡೆದರು. ಉಳಿದಂತೆ ಅರ್ಜುನ್ ತೆಂಡೂಲ್ಕರ್ 15 ಓವರ್‌ನಲ್ಲಿ 70 ರನ್, ಹೆರಂಬ್ ಪರಾಬ್ 18 ಓವರ್‌ನಲ್ಲಿ 63 ರನ್, ಫೆಲಿಕ್ಸ್ ಅಲೆಮೊ 13 ಓವರ್‌ನಲ್ಲಿ 69 ರನ್, ದೀಪ್ ರಾಜ್ ಗಾಂವ್‌ಕರ್ 1 ಓವರ್‌ನಲ್ಲಿ 10 ರನ್ ನೀಡಿದರು.

ಗೋವಾದ 2ನೇ ಇನ್ನಿಂಗ್ಸ್: ಅತಿಥೇಯ ಕರ್ನಾಟಕ ನೀಡಿದ ಮೊದಲ ಇನ್ನಿಂಗ್ಸ್‌ನಲ್ಲಿ ನೀಡಿದ 177 ರನ್‌ಗಳ ಮುನ್ನಡೆಯನ್ನು ಬೆನ್ನತ್ತಿದ ಗೋವಾ ತಂಡ ಆರಂಭಿಕ ಆಘಾತಕ್ಕೆ ಒಳಗಾಯಿತು. ಎರಡನೇ ಇನ್ನಿಂಗ್ಸ್ ಆರಂಭಿಸಿದ ಗೋವಾ ತಂಡ, 1.1 ಓವರ್‌ನಲ್ಲಿ ಆರಂಭಿಕ ಆಟಗಾರ ಇಶಾಂತ್ ಗಡೇಕರ್ ಕೇವಲ 1 ರನ್ ಗಳಿಸಿದ್ದಾಗ ವೈಶಾಕ್ ಬೌಲಿಂಗ್ ನಲ್ಲಿ ಕ್ಲೀನ್ ಬೋಲ್ಡ್ ಆದರು. ಈ ವೇಳೆ ಮತ್ತೊಬ್ಬ ಆರಂಭಿಕ ಆಟಗಾರ ಸುಯಾಸ್ ಪ್ರಭು ದೇಸಾಯಿ, 3ನೇ ಕ್ರಮಾಂಕದ ಆಟಗಾರ ಕೆ.ವಿ.ಸಿದ್ಧಾರ್ಥ್ ಜೊತೆಗೂಡಿ ರಕ್ಷಣಾತ್ಮಕ ಆಟ ಮುಂದುವರೆಸಿದರು. 3ನೇ ದಿನದ ಅಂತ್ಯಕ್ಕೆ ಮುರಿಯದ 2ನೇ ವಿಕೆಟ್‌ಗೆ ಈ ಜೋಡಿ 92 ರನ್ ಕಲೆ ಹಾಕಿದ್ದು, ಸಿದ್ಧಾರ್ಥ್ ಅಜೇಯ ಅರ್ಧ ಶತಕ (57 ರನ್), ಸುಯಾಸ್ ಪ್ರಭು ದೇಸಾಯಿ ಅಜೇಯ 34 ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದಾರೆ. ಗೋವಾ ತಂಡ ಇನ್ನೂ ಕರ್ನಾಟಕ ತಂಡದ ಮೊದಲ ಇನ್ನಿಂಗ್ಸ್‌ನ ಮುನ್ನಡೆಯ ಗುರಿ ಹಿಂದಿಕ್ಕಲು 84 ರನ್ ಬಾರಿಸಬೇಕಾಗಿದೆ. ದಿನದ ಆಟದ ಅಂತ್ಯಕ್ಕೆ ಗೋವಾ 27 ಓವರ್‌ನಲ್ಲಿ 1 ವಿಕೆಟ್ ಕಳೆದುಕೊಂಡು 93 ರನ್ ಗಳಿಸಿದೆ. ಕರ್ನಾಟಕ ತಂಡದ ಪರವಾಗಿ ವೈಶಾಕ್ 4 ಓವರ್‌ನಲ್ಲಿ 18 ರನ್ ನೀಡಿ 1 ವಿಕೆಟ್ ಪಡೆದರೆ, ಕೌಶಿಕ್ 7 ಓವರ್‌ನಲ್ಲಿ 27 ರನ್, ಎ.ಸಿ.ರೋಹಿತ್ ಕುಮಾರ್ 6 ಓವರ್‌ನಲ್ಲಿ 27 ರನ್, ಶುಭಂಗ್ ಹೆಗ್ಡೆ 7 ಓವರ್‌ನಲ್ಲಿ 17 ರನ್, ಎಂ.ವೆಂಕಟೇಶ್ 3 ಓವರ್‌ನಲ್ಲಿ 4 ರನ್ ನೀಡಿದ್ದಾರೆ.



ಕರ್ನಾಟಕದ 6 ವಿಕೆಟ್ ಪಡೆದ ಗೋವಾ ಬೌಲರ್ ದರ್ಶನ್ ಮಿಶಲ್.

ಜನಸಾಮಾನ್ಯರ ಪಡಸಾಲೆ ವೇದಿಕೆ ಅಸ್ತಿತ್ವಕ್ಕೆ



ಸುದ್ದಿಗೋಷ್ಠಿಯಲ್ಲಿ ಜೋಗನಹಳ್ಳಿ ಗುರುಮೂರ್ತಿ ಮಾತನಾಡಿದರು.

ಮೈಸೂರು,ಜ.21(ಜಿಎ)– ಸಂಸ್ಕೃತಿ, ವಿಜ್ಞಾನ ಮತ್ತು ವಿಚಾರ ಅರಿವಿಗಾಗಿ ಜನಸಾಮಾನ್ಯರ ಪಡಸಾಲೆ ಎಂಬ ವೇದಿಕೆಯನ್ನು ರಚಿಸಿಕೊಂಡಿದ್ದೇವೆ ಎಂದು ವೇದಿಕೆ ಕಾರ್ಯಾಧ್ಯಕ್ಷ ಜೋಗನಹಳ್ಳಿ ಗುರುಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ. ಈ ಬಗ್ಗೆ ಧ್ವನಿ ಎತ್ತಿದವರಿಗೆ ರಕ್ಷಣೆ ನೀಡುವುದು, ಸಾಹಿತ್ಯ, ಕಲೆ, ಸಾಂಸ್ಕೃತಿಕ ಚಟುವಟಿಕೆ, ವರ್ತಮಾನದ ಸಮಸ್ಯೆ ಬಗ್ಗೆ ಚರ್ಚೆ ಮತ್ತು ಹೋರಾಟ ಮಾಡುವುದು ಮತ್ತು ಯುವಕ ಯುವತಿಯರನ್ನು ನಿರಂಕುಶಮತಿ ನಾಯಕರನ್ನಾಗಿ ರೂಪಿಸುವುದು ವೇದಿಕೆ ಮುಖ್ಯ ಉದ್ದೇಶಗಳಾಗಿವೆ ಎಂದರು.

ವೇದಿಕೆಯಲ್ಲಿ ಗೌರವಾಧ್ಯಕ್ಷರಾಗಿ ಮಾಜಿ ಮೇಯರ್ ಪುರುಷೋತ್ತಮ್, ಅಧ್ಯಕ್ಷರಾಗಿ ಪ್ರೊ.ಕೆ.ಎಸ್.ಭಗವಾನ್, ಗೌರವ ಸಲಹೆಗಾರರಾಗಿ ನಿವೃತ್ತ ಅಸಿಸ್ಟೆಂಟ್ ಕಮಿಷನರ್ ಕೆ.ಎನ್.ಲಿಂಗಪ್ಪ, ಪ್ರಧಾನ ಕಾರ್ಯದರ್ಶಿ ನ್ಯಾಯಾವಾದಿ ಸಿ.ಎಸ್.ವೆಂಕಟೇಶ್, ಕಾರ್ಯದರ್ಶಿ ರಾಜೇಗೌಡ, ಸಿದ್ಧಸ್ವಾಮಿ ಮತ್ತು ಕೋಶಾಧಿಕಾರಿಯಾಗಿ ಚಿಕ್ಕತಮ್ಮೇಗೌಡ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎಸ್.ಎಲ್.ರಾಮಕೃಷ್ಣ ಶಿವಾರಗುಡ್ಡ ಪದಾಧಿಕಾರಿಗಳಾಗಿದ್ದಾರೆ ಎಂದರು.

ಈ ವೇಳೆ ವೇದಿಕೆ ಅಧ್ಯಕ್ಷ ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಬಸವೇಶ್ವರರನ್ನು ರಾಜ್ಯದ ಸಾಂಸ್ಕೃತಿಕ ನಾಯಕರೆಂದು ಸರ್ಕಾರ ಘೋಷಿಸಿರುವುದು ಸ್ವಾಗತಾರ್ಹವಾಗಿದೆ. ಇದೇ ವೇಳೆ ಅವರನ್ನು ಭಕ್ತಿ ಭಂಡಾರಿ ಎನ್ನುವ ಬದಲು ಜ್ಞಾನ ಭಂಡಾರಿ ಎನ್ನುವುದು ಸೂಕ್ತ ಎಂದರು.

ಬಸವಣ್ಣನವರು ಈ ಹಿಂದೆ ಜಾರಿಗೆ ತಂದಿದ್ದ ವಿಷಯಗಳೇ ಇಂದು ಮತ್ತೆ ಅನುಷ್ಠಾನಕ್ಕೆ ಬರಬೇಕಾಗಿದೆ. ಅವರ ಅನೇಕ ವಿಷಯಗಳು ಇಂದಿಗೂ ಸಂವಿಧಾನದಲ್ಲಿವೆ. ಈಗಿನ ಸಂವಿಧಾನದ ಆಶಯಗಳನ್ನು ಅಂದೇ ಬಸವಣ್ಣ ಪ್ರತಿಪಾದಿಸಿದ್ದಾರೆ ಎಂದ ಅವರು, ಇತರ ದೇವರುಗಳು ಒಡಕುಂಟು ಮಾಡುವರಾಗಿದ್ದರೆ, ಬಸವಣ್ಣನವರ ಕೂಡಲ ಸಂಗಮದೇವ ಒಲ್ಲರನ್ನೂ ಒಗ್ಗೂಡಿಸುವಂತದ್ದಾಗಿದೆ. ಹೀಗಾಗಿ ಬಸವಣ್ಣನವರ ನೀತಿಯಂತೆ ಎಲ್ಲರೂ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಅಯೋಧ್ಯೆಯ ರಾಮಮಂದಿರದ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ವಿಚಾರವಾಗಿ ಪ್ರತಿಕ್ರಿಯಿಸಲು ಹಿಂದೇಟು ಹಾಕಿದ ಅವರು, ಈಗ ಚರ್ಚೆಯಾಗುತ್ತಿರುವ ರಾಮನೇ ಬೇರೆ, ವಾಲ್ಮೀಕಿ ರಾಮಾಯಣದ ರಾಮನೇ ಬೇರೆ ಎಂದು ಉತ್ತರಿಸಿ, ಕೆಲವೇ ದಿನಗಳಲ್ಲಿ ನಾನು ಬರೆದಿರುವ ಒಂದು ಪುಸ್ತಕ ಬಿಡುಗಡೆಗೊಳ್ಳಲಿದೆ. ಆ ಕಾರ್ಯಕ್ರಮದಲ್ಲಿ ಎಲ್ಲಾ ವಿಚಾರವಾಗಿ ಮಾತನಾಡುತ್ತೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಲೇಖಕ ಸಿದ್ದಸ್ವಾಮಿ ಉಪಸ್ಥಿತರಿದ್ದರು.

ಫೆ.1ಕ್ಕೆ ಬೆಂಗಳೂರಲ್ಲಿ ಕಾರ್ಮಿಕರ ಪ್ರತಿಭಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಂ.ಜಯಮ್ಮ ಮಾತನಾಡಿದರು.

ಮೈಸೂರು,ಜ.21(ಜಿಎ)– ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಖಂಡಿಸಿ, ಕಾರ್ಮಿಕರಿಗೆ ಕನಿಷ್ಠ ವೇತನ, ಗೌರವಧನ ಹೆಚ್ಚಳ ಮಾಡಬೇಕು. ವಿವಿಧ ಬೇಡಿಕೆ ಈಡೇರಿಕೆಗಾಗಿ ಬರುವ ಫೆಬ್ರವರಿ 1ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬಹಿರಂಗ ಅಧಿವೇಶನ ಮತ್ತು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಜಯಮ್ಮ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಬಿಸಿಯೂಟ, ಅಂಗನವಾಡಿ, ಆಶಾ, ಕೈಗಾರಿಕಾ, ಕಟ್ಟಡ, ಸಾರಿಗೆ, ಬೀಡಿ, ಪ್ಲಾಂಟೇಷನ್, ಬ್ಯಾಂಕ್, ವಿಮೆ, ಗಣಿ ಕಾರ್ಮಿಕರು ಪಾಲ್ಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ಇದರಲ್ಲಿ ರಾಜ್ಯಾದ್ಯಂತದಿಂದ ಸುಮಾರು 30 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ. ಮೈಸೂರಿಂದ ಸುಮಾರು ಎರಡು ಸಾವಿರ ಮಂದಿ ಭಾಗವಹಿಸಲಿದ್ದಾರೆ ಎಂದರು.

ಕೇಂದ್ರದ ಎರಡನೇ ಅವಧಿಯಲ್ಲಿಯೂ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಜನವಿರೋಧಿ, ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿದೆ. ಹೀಗಾಗಿ ಇಂದು ದೇಶದ ದುಡಿಯುವ ಕಾರ್ಮಿಕರ ಬದುಕು ಅತ್ಯಂತ ಶೋಚನೀಯವಾಗಿದೆ. ಹೀಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಣ್ತೆರೆಸಲು ಈ ಬೃಹತ್ ಪ್ರತಿಭಟನೆ ಮತ್ತು ಅಧಿವೇಶನ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಈ ವೇಳೆ ಸ್ಕೀಂ ವರ್ಕರ್‌ಗಳಿಗಾಗಿ ಘೋಷಿಸಿದ ಆರನೇ ಗ್ಯಾರಂಟಿ ಜಾರಿಗೊಳಿಸಬೇಕು, ಕೈಗಾರಿಕಾ ಕಾರ್ಮಿಕರ ದುಡಿಮೆ ಅವಧಿ ಹೆಚ್ಚಳ ಮತ್ತು ಕನಿಷ್ಠ ವೇತನ ಸಮಸ್ಯೆ ಬಗೆಹರಿಸಬೇಕು. ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿರುವ ಹಣದ ದುರುಪಯೋಗ ತಡೆದು ನೈಜ ಕಾರ್ಮಿಕರ ಕುಟುಂಬಗಳಿಗೆ ಸೌಲಭ್ಯ ಒದಗಿಸಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಿ.ಜಗನ್ನಾಥ್, ಸುಮಾ, ಗಿರಿಜಾ, ಭಾಗ್ಯ ಉಪಸ್ಥಿತರಿದ್ದರು.

ನಿಧನ



ಶ್ರೀಮತಿ ಗುಣಾಬಾಯಿ

ಮೈಸೂರು,ಜ.21–ಮೈಸೂರಿನ ಜೆ.ಸಿ.ನಗರದ ನಿವಾಸಿ ಶ್ರೀಮತಿ ಗುಣಾಬಾಯಿ(95) ಅವರು ವಯೋಸಹಜ ಖಾಯಿಲೆಯಿಂದ ನಿನ್ನೆ (ಶನಿವಾರ) ಸಂಜೆ ವೇಳೆಗೆ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಇಂದು ಮಧ್ಯಾಹ್ನದ ವೇಳೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ಪ್ರಸಾದ ಹಂಚಿಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿ.ಎಲ್. ಭೈರಪ್ಪ ಮಾತನಾಡಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್, ವಾಸು, ನಾಗರಾಜು, ಮುರುಳಿ ಉಪಸ್ಥಿತರಿದ್ದರು.

ಮೈಸೂರು,ಜ.21(ಜಿಎ)–ಅಯೋಧ್ಯೆಯಲ್ಲಿನ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಜ.22ರಂದು ಎಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ನಗರದ ಕೆ.ಆರ್.ಕ್ಷೇತ್ರ ಮತ್ತು ಅದಕ್ಕೆ ಹೊಂದಿಕೊಂಡ ಪ್ರಮುಖ ಸ್ಥಳಗಳಲ್ಲಿ ಪ್ರಸಾದ ಹಂಚುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಳಗದ ಅಧ್ಯಕ್ಷ ಬಿ.ಎಲ್. ಭೈರಪ್ಪ ತಿಳಿಸಿ, ಅಂದು ಮಧ್ಯಾಹ್ನ 12 ರಿಂದ ಮಧ್ಯಾಹ್ನ 2ರವರೆಗೆ ಪ್ರದೇಶದ ದೇವಸ್ಥಾನ, ಪ್ರಮುಖ ವೃತ್ತ ಮತ್ತು ಆಟೋ ಸ್ಟ್ಯಾಂಡ್ ಮೊದಲಾದ 150ಕ್ಕೂ ಹೆಚ್ಚು ಕಡೆಗಳಲ್ಲಿ ಹಂಚಿಕೆ ನಡೆಯಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್, ವಾಸು, ನಾಗರಾಜು, ಮುರುಳಿ ಉಪಸ್ಥಿತರಿದ್ದರು.

ಇಂದು ಶ್ರೀ ಲೋಕಾಭಿರಾಮ ಮಂದಿರದಲ್ಲಿ ಮಹಾಮಂಗಳಾರತಿ ಸೇರಿ ವಿವಿಧ ಕಾರ್ಯಕ್ರಮ

ಮೈಸೂರು,ಜ.21(ಪಿಎಂ)–ಅಯೋಧ್ಯೆ ಭವ್ಯ ಶ್ರೀ ರಾಮಮಂದಿರದಲ್ಲಿ ಶ್ರೀರಾಮಲಲ್ಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಮೈಸೂರಿನ ದೇವರಾಜ ಮೊಹಲ್ಲಾದ ಬೆಳ್ಳಿಕಟ್ಟೆಗೆ ಮೇಗಲ ಮೀಸಲು ಹತ್ತು ಜನಗಳ ಶ್ರೀ ಲೋಕಾಭಿರಾಮ ಮಂದಿರ ಮತ್ತು ಶ್ರೀ ಲೋಕಾಭಿರಾಮ ಸಮುದಾಯ ಭವನದಲ್ಲಿ ಜ.22ರಂದು ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11.30ಕ್ಕೆ ಮಹಾಮಂಗಳಾರತಿ ನಡೆಯಲಿದ್ದು, ಇದಕ್ಕೂ ಮುನ್ನ ಶ್ರೀ ಗಣಪತಿ ಹೋಮ, ಶ್ರೀ ರಾಮ ತಾರಕ ಹೋಮ, ಪೂರ್ಣಾಹುತಿ ನಡೆಯಲಿದೆ. ಮಧ್ಯಾಹ್ನ 12ಕ್ಕೆ ಮಲ್ಲಿಗೆ ಕಲಾವಿದರಿಂದ ಭಕ್ತಿ ಗೀತೆಗಳು ಕಾರ್ಯಕ್ರಮ ಹಾಗೂ ಮಧ್ಯಾಹ್ನ 1ಕ್ಕೆ ಭೋಜನ ಕೂಟ ಏರ್ಪಡಿಸಲಾಗಿದೆ. ಸನಾತನ ಧರ್ಮ ಉಳಿಸಿ ಬೆಳೆಸಲು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಬೇಕೆಂದು ಸದರಿ ರಾಮಮಂದಿರದ ಪದಾಧಿಕಾರಿಗಳಾದ ಎಸ್.ನಾಗೇಶ್, ಎಂ.ಹೆಚ್.ಶಂಕರಪ್ಪ, ಡಿ.ಎಸ್.ನಾರಾಯಣ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.1.2024 ಸೋಮವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024ರಿಂದ 23.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮಾನಸ ಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಮೈಸೂರು ವಿವಿ ಸಂಜೆ ಕಾಲೇಜಿನ ಅತಿಥಿ ಉಪನ್ಯಾಸಕ ಡಾ.ತೇಜೋಮೂರ್ತಿ ಎಂ.ಬಿ. ಅವರಿಂದ 'ಭಾರತದ ಸಂವಿಧಾನ ಮತ್ತು ಸಾಮಾಜಿಕ ಬದಲಾವಣೆಗಳು' ವಿಷಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಹುಣಸೂರು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ನಿಲಯಪಾಲಕರಾದ ಸುಮಲತಾ ಬಿ.ಆರ್., ಸ್ಥಳ: ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಹುಣಸೂರು, ಸಂಜೆ 5.30ಕ್ಕೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ (ಶ್ರೀ ಸುಬ್ರಹ್ಮಣ್ಯಸ್ವಾಮಿ ಟೆಂಪಲ್ ಟ್ರಸ್ಟ್):** 58ನೇ ವರ್ಷದ ತೈಪೂಜಾ ಮಹೋತ್ಸವ–2024, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಯಕೃತ್ತಿನ ಸಮಸ್ಯೆಗಳ ಬಗ್ಗೆ (ಆಲ್ಕೋಹಾಲಿಕ್)' ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಬಿಕೆಪಿ ಕನ್ವೆನ್ಸನ್ ಹಾಲ್, ಗೀತಾ ಮಂದಿರ ರಸ್ತೆ, ಅಶೋಕ ರಸ್ತೆ ಕ್ರಾಸ್, ಲಷ್ಕರ್ ಮೊಹಲ್ಲಾ, ಬೆಳಗ್ಗೆ 10.30ರಿಂದ ಸಂಜೆ 6.30ರವರೆಗೆ.



ಶ್ರೀ ರಾಮೋತ್ಸವ ಕಾರ್ಯಕ್ರಮ

■ **ಸೈಕಲ್ ಪ್ಯೂರ್ ಅಗರ್‌ಬತ್ತಿ:** ಅಯೋಧ್ಯೆಯಲ್ಲಿ ಶ್ರೀ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಸೈಕಲ್ ಪ್ಯೂರ್ ಅಗರ್‌ಬತ್ತಿ ವತಿಯಿಂದ ಸಿದ್ದಪಡಿಸಿರುವ 111 ಅಡಿ ಉದ್ದದ ಅಗರಬತ್ತಿ ಬೆಳಗಿಸುವ ಕಾರ್ಯಕ್ರಮ, ಅಗರಬತ್ತಿ ಹಚ್ಚುವವರು: ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಶ್ರೀಮತಿ ಸರಸ್ವತಿ, ಮುಖ್ಯ ಅತಿಥಿ: ಸಂಸದ ಪ್ರತಾಪ್‌ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ರಂಗ ಕುಟುಂಬದ ಸದಸ್ಯರಾದ ಆರ್.ಗುರು, ಕಿರಣ್ ರಂಗ, ವಿಷ್ಣು ರಂಗ, ಅನಿರುದ್ಧ ರಂಗ ಮತ್ತು ನಿಖಿಲ್ ರಂಗ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ಅರಮನೆ ಮುಂಭಾಗ, ಬೆಳಗ್ಗೆ 9.30ರಿಂದ.

■ **ಆರ್ಯನಯನಜ ಕ್ಷತ್ರಿಯ ತೆಲಗುರೆಡ್ಡಿ ಸಂಘ, ಶ್ರೀ ರಾಮ ಮಂದಿರ:** ಶ್ರೀರಾಮನ ನೂತನ ವಿಗ್ರಹಗಳ ಪೂಜಾ ಕಾರ್ಯಕ್ರಮ, ಉದ್ಘಾಟನೆ: ಶ್ರೀಮತಿ ನಮ್ರತಾ ಮಹೇಶ್, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್‌ಸಿಂಹ, ಶಾಸಕ ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಎಂ.ಜೆ. ರವಿಕುಮಾರ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಜಿ.ಗುರುಪ್ರಸಾದ್, ಬೆಳಗ್ಗೆ 7 ಗಂಟೆಯಿಂದ ಗಣಪತಿ ಪೂಜೆ, ಶ್ರೀರಾಮನ ಬಿಂಬ ಶುದ್ಧಿ ಮತ್ತು ಸ್ಥಾಪನೆ, ಪಂಚಗವ್ಯ ಹೋಮ, ಗಣಪತಿ ಹೋಮ, ಸುಪ್ರಭಾತ, ಮಂಡಳಿಯವರಿಂದ ವಿಷ್ಣು ಸಹಸ್ರನಾಮ, ಭಕ್ತಿಗೀತೆಗಳು, ಸ್ಥಳ: ತೆಲುಗುರೆಡ್ಡಿ ಶ್ರೀರಾಮ ಮಂದಿರ, ಪುಲಿಕೇಶಿ ರಸ್ತೆ, ತಿಲಕ್‌ನಗರ.

■ **ವ್ಯವಸ್ಥಾಪಕರು:** ಕನ್ನಡ ಚಿತ್ರರಂಗದ ಕಲಾ ನಿರ್ದೇಶಕ ಪ್ರದೀಪ್‌ಚಂದ್ರ ಅವರ ನೇತೃತ್ವದಲ್ಲಿ ಬಣ್ಣ ಬಣ್ಣದ ರಂಗೋಲಿಯಲ್ಲಿ 100x80 ಅಡಿ ಶ್ರೀರಾಮರ ಕಲಾಕೃತಿ ರಚನೆ. ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಸೌಗಂಧಿಕ ಉದ್ಯಾನವನ, ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದ ಎದುರು, ಕುವೆಂಪುನಗರ, ಬೆಳಗ್ಗೆ 7.30ಕ್ಕೆ.

■ **ವ್ಯವಸ್ಥಾಪಕರು:** ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯ ಅಂಗವಾಗಿ ಪ್ರಭು ಶ್ರೀರಾಮನಿಗೆ ಸಪ್ತ ನದಿಗಳ ನೀರಿನಿಂದ ಜಲಾಭಿಷೇಕ, ಪಂಚಾಮೃತ ಅಭಿಷೇಕ್, 102 ಬಗೆಯ ಆರತಿ, ಒಂದು ಲಕ್ಷದ ಎಂಟು ಸಾವಿರ ತುಳಸಿ ಧಳದ ರಸದಿಂದ ಅಭಿಷೇಕ, ಹನುಮಾನ್ ಚಾಲಿಸ್, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ವಿದುಷಿ ಶ್ರೀಮತಿ ಡಾ.ರಶ್ಮಿ ಆದೀಶ್ ತಂಡದವರಿಂದ ಹನುಮ ತಾಂಡವ, ಹನುಮಾನ್ ಚಾಲಿಸ್, ಚಂಡೆವಾದ್ಯ, ಸಿಡಿಮದ್ದಿನ ಪ್ರದರ್ಶನ, ಸ್ಥಳ: ಆಲಮ್ಮನವರ ಛತ್ರ, ಶ್ರೀರಾಮಪೇಟೆ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಸತ್ಯಸುಂದರ್ ಪಿ., 6.15 ಮಕರ ಸಂಕ್ರಾಂತಿ ವಿಶೇಷ ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದ ಸಂಸ್ಕೃತಿ: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕ್ಷೇಮ ಕೇಂದ್ರಗಳು–ಪ್ರಾಯೋಜಿತ ಕಾರ್ಯಕ್ರಮ, 9.00 ನೆನಪಿನಂಗಳ–ಸಾಹಿತಿ ಡಾ.ಪ್ರಭುಶಂಕರ್ ಅವರೊಂದಿಗೆ ಡಾ.ಜಿ.ಹೆಚ್.ನಾಯಕ್ ಅವರು ನಡೆಸಿದ ಸಂದರ್ಶನ 10.00 ಭಕ್ತಿಗೀತೆ, 10.10 ಅಯೋಧ್ಯೆಯಲ್ಲಿ ನಡೆಯಲಿರುವ ಶ್ರೀ ರಾಮಲಲ್ಲಾನ ಪ್ರಾಣ ಪ್ರತಿಷ್ಠಾ ಸಮಾರಂಭದ ವೀಕ್ಷಕ ವಿವರಣೆ. **ಮಧ್ಯಾಹ್ನ:** 2.35 ರಾಮಾಯಣ ರಸ ಪ್ರಸಂಗಗಳು. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕಾವ್ಯದಿಂದ ಆಯ್ದ ಭಾಗಗಳ ವಾಚನಾಭಿನಯ. ಪ್ರಸ್ತುತಿ: ಶ್ರೀ ಗಜಾನನ ಯುವಕ ಮಂಡಲ. ನಿರ್ಮಾಣ ಟಿ.ವಿ.ವಿದ್ಯಾಶಂಕರ್, 3.00 ಡಿ.ಪಶುಪತಿ–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ: ವಿಷಯ–PCOD ಸಮಸ್ಯೆಗಳು ಮತ್ತು ಪರಿಹಾರ ಕುರಿತು ತಿಳಿಸುತ್ತಾರೆ ಡಾ. ಸನ್ಮತಿ ಪಿ.ರಾವ್. ಪ್ರಸ್ತುತಿ–ಎಂ.ಎಸ್.ಭಾರತಿ, 4.45 ಹಿಂದಿ ಪಾಠ: ಮಧುಬಾಲಾ ಅಗರ್‌ವಾಲ್, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು": ಹಣ್ಣು ತರಕಾರಿ ಬೆಳೆಗಳಲ್ಲಿ ಕೊಯ್ಲೋತ್ತರ ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ ಡಾ.ಹೆಚ್.ಬಿ. ರಶ್ಮಿ ಹಾಗೂ ಚೇತನ್. **ರಾತ್ರಿ:** 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ" ಗಾಯಕ, ಆಟೋ ಚಾಲಕ ರಂಗಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಅಬ್ದುಲ್ ರಶೀದ್, 10.00 "ರಾಮ ರಮಯ್ಯ ಗಾಯೇಜಾ" ಅಯೋಧ್ಯೆಯಲ್ಲಿ ಏರ್ಪಡಿಸಿದ್ದ ಸಂಗೀತ ಸಂಜೆಯ ಧ್ವನಿಮುದ್ರಣ.

■ **ಗೆಳೆಯರ ಬಳಗ ಅಭಿವೃದ್ಧಿ ಸಹಕಾರ ಸಂಘ:** ಅಯೋಧ್ಯೆಯಲ್ಲಿ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಲಾಡು ಪ್ರಸಾದ ವಿತರಣೆ, ಸ್ಥಳ: ಶ್ರೀ ಸಪ್ತಮಾತೃಕೆ ಚೌಡೇಶ್ವರಿ ಅಮ್ಮನವರ ದೇವಸ್ಥಾನ, ವಿಜಯನಗರ, 3ನೇ ಹಂತ, ಸಂಜೆ 6 ಗಂಟೆಯಿಂದ.

■ **ದಿ ಫೋರಮ್ ಆಫ್ ಬ್ಯುಸಿನೆಸ್ ಬೈ ಬ್ರಾಹ್ಮಿನ್ಸ್–ಬಿಬಿಬಿ ಟ್ರಸ್ಟ್, ಶ್ರೀರಾಮ ಸೇವಾ ಸಮಿತಿ:** ಅಖಂಡ ರಾಮನಾಮ ಜಪ ಮತ್ತು ಭಜನೆ, ದೊಡ್ಡ ಎಲ್‌ಇಡಿ ಸ್ಕ್ರೀನ್‌ನಲ್ಲಿ ಅಯೋಧ್ಯಾ ರಾಮಜನ್ಮ ಭೂಮಿಯಲ್ಲಿ ನಡೆಯುವ ಶ್ರೀರಾಮ ಪ್ರಾಣ ಪ್ರತಿಷ್ಠಾಪನದ ನೇರ ಪ್ರಸಾರ, ಸ್ಥಳ: ಸಮಗ್ರ ಸೂಪರ್ ಸ್ಟೋರ್ ಎದುರು, ಜಯರಾಮರಾಜೇಂದ್ರ ರಸ್ತೆ, ವಿಜಯನಗರ, ಬೆಳಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ.

■ **ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ. ಶ್ರೀ ಉತ್ತರಾದಿ ಮಠ:** ಅಯೋಧ್ಯೆಯಲಿ ಶ್ರೀರಾಮಮಂದಿರ ಉದ್ಘಾಟನಾ ಪರ್ವಕಾಲದ ನಿಮಿತ್ತ ಸಮಗ್ರ ರಾಮಾಯಣ ಕುರಿತು ಪ್ರವಚನ ಮಾಲಿಕೆ, ಪಂಡಿತ್ ಶ್ರೀ ಭೀಮಸೇನಾಚಾರ್ಯ ಆತನೂರು ಅವರಿಂದ ಉತ್ತರಕಾಂಡ ಕುರಿತು ಉಪನ್ಯಾಸ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6ರಿಂದ.

■ **ಜಿಲ್ಲಾ ಬ್ರಾಹ್ಮಣ ಮಹಾಸಭಾ, ಸಂಧ್ಯಾ ಸುರಕ್ಷಾ ಟ್ರಸ್ಟ್, ಜಿಲ್ಲಾ ಬ್ರಹ್ಮಣ ಮಹಾಸಭಾ, ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ:** ಅಯೋಧ್ಯೆಯಲ್ಲಿ ಮರ್ಯಾದ ಪುರುಷೋತ್ತಮ ಶ್ರೀರಾಮ ಪ್ರತಿಷ್ಠಾಪನ ಅಂಗವಾಗಿ ರಾಮನಾಮ ಜಪ, ಮಹಾಗಣಪತಿ ಪೂಜೆ, ಮಹಾ ಮಂಗಳಾರತಿ, ವಸಂತೋತ್ಸವ, ಸ್ಥಳ: ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ, ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ, ಬೆಳಗ್ಗೆ 8.30ರಿಂದ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಅಯೋಧ್ಯೆಯಲ್ಲಿ ಶ್ರೀರಾಮದೇವರ ಪ್ರತಿಷ್ಠಾಪನೆ ಅಂಗವಾಗಿ, ಬೆಳಗ್ಗೆ 9 ಗಂಟೆಗೆ ಶ್ರೀರಾಮ ದೇವರಿಗೆ ಪುಷ್ಪಾರ್ಚನೆ, ರಥೋತ್ಸವ, ಪ್ರಸಾದ ವಿನಿಯೋಗ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ.

■ **ಶ್ರೀ ರಾಮಾಭ್ಯುದಯ ಸಭಾ, ರಾಮಮಂದಿರ:** ಅಯೋಧ್ಯೆಯಲ್ಲಿ ಶ್ರೀರಾಮರ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಬೆಳಗ್ಗೆ 7 ಗಂಟೆಗೆ ರುದ್ರಾಭಿಷೇಕ, ಶ್ರೀರಾಮ ಸೀತಾ ಹನುಮ ಅಷ್ಟೋತ್ತರ, ರಾಮತಾರಕ ಹೋಮ, ರಾಮಭಜನೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮಮಂದಿರ ಆವರಣ, ಶ್ರೀರಾಮಪೇಟೆ.

■ **ಶ್ರೀರಾಮಮಂದಿರ, ಮಹಾಜನಸಭಾ:** ಬೆಳಗ್ಗೆ 9 ಗಂಟೆಯಿಂದ ವೇದ ಬಳಗದವರಿಂದ ಪಾರಾಯಣ, ಶ್ರೀರಾಮ ದೇವರಿಗೆ ಅಭಿಷೇಕ, ದೀಪೋತ್ಸವ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಜೆ.ಪಿ.ನಗರ ಶರಣ ವೇದಿಕೆ:** ಪರಮ ಪೂಜ್ಯ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳ ಸಂಸ್ಮರಣೋತ್ಸವ, ದಾಸೋಹ ದಿನ, ಶ್ರೀರಾಮ ಪ್ರಾಣ ಪ್ರತಿಷ್ಠಾಪನ ದಿನದ ಪ್ರಯುಕ್ತ ದೀಪ ಬೆಳಗುವ, ಭಕ್ತಿ ಸಮರ್ಪಣ ಕಾರ್ಯಕ್ರಮ, ಸ್ಥಳ: ಅಕ್ಕ ಮಹಾದೇವಿ ಪ್ರತಿಮಾ ಆವರಣ, ಸಂಜೆ 6 ಗಂಟೆಯಿಂದ.

■ **ಶ್ರೀರಾಮಮಂದಿರ:** ಅಯೋಧ್ಯೆಯಲ್ಲಿ ಶ್ರೀರಾಮ ದೇವರ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಬೆಳಗ್ಗೆ 7ಕ್ಕೆ ಧ್ವಜಾರೋಹಣ, ಶ್ರೀರಾಮ ದೇವರಿಗೆ 16 ದ್ರವ್ಯಗಳಿಂದ ಮಹಾಭಿಷೇಕ, ವಿಷ್ಣು ಸಹಸ್ರನಾಮ, ಶ್ರೀರಾಮ ತಾರಕ ಹೋಮ, ಪೂರ್ಣಾಹುತಿ, ರಾಮಭಜನೆ, ಎಲ್‌ಇಡಿ ಪರದೆ ಮೂಲಕ ಅಯೋಧ್ಯೆ ಶ್ರೀರಾಮರ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರ ಕಾರ್ಯಕ್ರಮ, ಸ್ಥಳ:ದೇವಸ್ಥಾನದ ಆವರಣ, ಜಯನಗರ.

■ **ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೋಟಿ, ಮೈಸೂರು, ನೈಮಿಷ ಫೌಂಡೇಷನ್ (ಬೆಂಗಳೂರು):** ಡಾ.ಎನ್.ಎಂ.ಗಿರಿಜಾಪತಿ ವಿರಚಿತ 'ಶ್ರೀ ರಾಮ ಭಾರತಂ' ಶ್ರೀ ಸಾಮಥ್ಯ ಭಾರತಂ ರಾಮಾಯಣ ಕಥಾಧಾರಿತ ಕಾವ್ಯ ಕೃತಿಯ ಕಾವ್ಯಾನು ಸಂಧಾನ, ಸ್ಥಳ: ಶ್ರೀ ಯೋಗನರಸಿಂಹ ದೇವಸ್ಥಾನ, ವಿಜಯನಗರ, ಸಂಜೆ 5 ಗಂಟೆಗೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 22 ಸೋಮವಾರ 2024

ಸಂಪುಟ: 44 | ಸಂಚಿಕೆ: 275 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಬಿಜಿಯವರ
ಛೂಮಂತ್ರ.. ಛೂಮಂತ್ರ..



ಅಯೋಧ್ಯೆಯ ರಾಮಮಂದಿರ ಒಂದು ಚಿಂತನೆ ಮತ್ತು ಡಾ.ಎಸ್.ಎಲ್.ಭೈರಪ್ಪನವರೊಂದಿಗೆ ನನ್ನ ಸಂವಾದ ■ ಪುಟ–4

ಮೈಸೂರಲ್ಲಿ ಅರ್ಥಪೂರ್ಣವಾಗಿ ನಡೆದ ಮೈಸೂರು ಲಿಟರರಿ ಫೆಸ್ಟ್ ಪುಟ–6

ಕೆಪಿಎಸ್‌ಸಿ ಎಡವಟ್ಟು: 190 ಅಭ್ಯರ್ಥಿಗಳಿಗೆ ಆತಂಕ ಪುಟ–4

ಇಂದು ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ

●ಮಧ್ಯಾಹ್ನ 12.15ರಿಂದ 12.45ರವರೆಗೆ ಪೂಜಾ ಕೈಂಕರ್ಯ ●ಮಧ್ಯಾಹ್ನ 12.20ಕ್ಕೆ ಪ್ರಾಣ ಪ್ರತಿಷ್ಠಾಪನೆ ●ಪ್ರಧಾನಿ ಮೋದಿಯವರಿಂದ ಪ್ರಥಮ ಆರತಿ



ಅಯೋಧ್ಯೆ,ಜ.21–ರಾಮ ಜನ್ಮಭೂಮಿ ಅಯೋಧ್ಯೆಯ ಭವ್ಯ ರಾಮ ಮಂದಿರದಲ್ಲಿ ಸೋಮವಾರ (ಜ.22) ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಾಣ ಪ್ರತಿಷ್ಠಾಪನೆಯ ನಂತರ ದೇಗುಲವನ್ನು ಸಾರ್ವಜನಿಕರ ದರ್ಶನಕ್ಕೆ ಮುಕ್ತಗೊಳಿಸಲಾಗುತ್ತದೆ.

ಪ್ರಾಣ ಪ್ರತಿಷ್ಠಾಪನೆ ಪೂಜಾ ಕೈಂಕರ್ಯಗಳು ಸೋಮವಾರ ಮಧ್ಯಾಹ್ನ 12.15ರಿಂದ 12.45ರವರೆಗೆ ನಡೆಯಲಿದ್ದು, ಈ ಮಧ್ಯೆ 12.20ಕ್ಕೆ ಪ್ರಾಣ ಪ್ರತಿಷ್ಠಾಪನೆ ನೆರವೇರುವುದು. ಪ್ರಧಾನಿ ನರೇಂದ್ರ ಮೋದಿಯವರು ಕಾಶಿಯ ಹೆಸರಾಂತ ಆಚಾರ್ಯ ಗಣೇಶ ದ್ರಾವಿಡ್ ಹಾಗೂ ಆಚಾರ್ಯ ಲಕ್ಷ್ಮೀಕಾಂತ ದೀಕ್ಷಿತ್ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಪ್ರಾಣ ಪ್ರತಿಷ್ಠಾಪನೆ ಮಾಡುವರು. ಈ ಧಾರ್ಮಿಕ ಕಾರ್ಯಕ್ರಮದಲ್ಲಿ 121 ವೈದಿಕ ಆಚಾರ್ಯರು ಭಾಗವಹಿಸಲಿದ್ದು, ಈ ವೇಳೆ 150ಕ್ಕೂ ಹೆಚ್ಚು ಸಂಪ್ರದಾಯಗಳು, 50ಕ್ಕೂ ಹೆಚ್ಚು ಕರಾವಳಿ, ಬುಡಕಟ್ಟು ಸಂಪ್ರದಾಯಗಳ ಸಂತರು, ಧಾರ್ಮಿಕ ಮುಖಂಡರು ಉಪಸ್ಥಿತರಿರುವರು. ●9ನೇ ಪುಟಕ್ಕೆ



ವರ್ಣರಂಜಿತ ಹೂಗಳಿಂದ ಕಂಗೊಳಿಸುತ್ತಿರುವ ರಾಮಮಂದಿರ

ಬಿಗಿ ಭದ್ರತೆ: ಡ್ರೋನ್, ಸಿಸಿಟಿವಿ ಕಣ್ಗಾವಲು

ಅಯೋಧ್ಯೆ: ಸೋಮವಾರ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ರಾತ್ರಿ ದೃಷ್ಟಿ ಸಾಧನಗಳಿಂದ ಹಿಡಿದು ಕೃತಕ ಬುದ್ಧಿಮತ್ತೆ (AI) ಹೊಂದಿರುವ ಸಿಸಿಟಿವಿ ಕ್ಯಾಮರಾಗಳವರೆಗೆ ಅಯೋಧ್ಯೆಯಲ್ಲಿ ಭಾರಿ ಬಿಗಿ ಭದ್ರತೆ ಏರ್ಪಡಿಸಲಾಗಿದೆ. ದೇವಾಲಯವನ್ನು ಟನ್‌ಗಟ್ಟಲೆ ಹೂವುಗಳು ಮತ್ತು ಬಣ್ಣಬಣ್ಣದ ದೀಪಗಳಿಂದ ಅಲಂಕರಿಸಲಾಗಿದೆ. ಕಣ್ಗಾವಲು ಡ್ರೋನ್‌ಗಳು ಅನುಮಾನಾಸ್ಪದ ಚಟುವಟಿಕೆಗಾಗಿ ಸ್ಕ್ಯಾನ್ ಮಾಡುತ್ತಿವೆ. ಅಯೋಧ್ಯೆಯ 'ಹಳದಿ ವಲಯ'ವು ಮುಖ ಗುರುತಿಸುವ ತಂತ್ರಜ್ಞಾನದೊಂದಿಗೆ 10,715 ಎಐ ಆಧಾರಿತ ಕ್ಯಾಮರಾಗಳನ್ನು ಹೊಂದಿದೆ.

ತುರ್ತು ಪ್ರತಿಕ್ರಿಯೆ ಸಾಮರ್ಥ್ಯಗಳನ್ನು ಹೆಚ್ಚಿಸಲು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ತಂಡಗಳನ್ನು ನಿಯೋಜಿಸಲಾಗಿದೆ. ಎಸ್‌ಡಿಆರ್‌ಎಫ್ ತಂಡಗಳು ಸರಯೂ ನದಿಯಲ್ಲಿ ದೋಣಿ ಗಸ್ತು ನಡೆಸಲಿವೆ. ಉತ್ತರ ಪ್ರದೇಶ ವಿಶೇಷ ಭದ್ರತಾ ಪಡೆ (SSF)ನಿಂದ ಡ್ರೋನ್–ವಿರೋಧಿ ವ್ಯವಸ್ಥೆಯನ್ನು ನಿಯೋಜಿಸಲಾಗಿದೆ, ಸಂಭಾವ್ಯ ವೈಮಾನಿಕ ಬೆದರಿಕೆಗಳ ವಿರುದ್ಧ ಭದ್ರತೆ ಹೆಚ್ಚಿಸಲಾಗಿದೆ. ದೇವಸ್ಥಾನದ ಪಟ್ಟಣದಲ್ಲಿ ಭದ್ರತೆಯನ್ನು ಹೆಚ್ಚಿಸುವ ಸಂಘಟಿತ ಪ್ರಯತ್ನಗಳ ಭಾಗವಾಗಿ ಅಯೋಧ್ಯೆಯು ಗಣಿ ವಿರೋಧಿ ಡ್ರೋನ್‌ಗಳ ಜೊತೆಗೆ ಎಐ ಹೊಂದಿದ ಡ್ರೋನ್‌ಗಳ ಕಣ್ಗಾವಲಿನಲ್ಲಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ಆಹ್ವಾನಿತರು ಭಾನುವಾರ ಸಂಜೆಯಿಂದಲೇ ಆಗಮಿಸಲಾರಂಭಿಸಿದ್ದಾರೆ. ಒಂದು ಕಾಲದಲ್ಲಿ ಶಾಂತವಾದ ●9ನೇ ಪುಟಕ್ಕೆ

ನಿಮಗೂ, ದೇಶದ ಜನರಿಗೂ ಶ್ರೀರಾಮ ಆಶೀರ್ವದಿಸಲಿ

ಪ್ರಧಾನಿ ಮೋದಿಗೆ ರಾಷ್ಟ್ರಪತಿ ಪತ್ರ

"ಶ್ರೀರಾಮಮಂದಿರದ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದೆ. ಸೋಮವಾರ ಪ್ರಧಾನಿ ಮೋದಿ ದೇಗುಲ ಉದ್ಘಾಟಿಸಲಿದ್ದಾರೆ. ರಾಮಲಲ್ಲಾ ಪ್ರಾಣ ಪ್ರತಿಷ್ಠೆ ಕುರಿತಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೋದಿಯವರಿಗೆ ಪತ್ರವೊಂದನ್ನು ಬರೆದಿದ್ದಾರೆ. ಪ್ರಾಣ ಪ್ರತಿಷ್ಠಾಪನೆಗಾಗಿ ಮೋದಿಯವರು ಕೈಗೊಂಡಿರುವ 11 ದಿನಗಳ ಕಠಿಣ ಅನುಷ್ಠಾನದ ಬಗ್ಗೆ ಬರೆದಿದ್ದಾರೆ. ನೀವು ಮಾಡಿದ ಪ್ರಯಾಸಕರ 11 ದಿನಗಳ ಆಚರಣೆ, ಪವಿತ್ರ ಧಾರ್ಮಿಕ ಆಚರಣೆಗಳಾಗಿವೆ. ಇದು ಕೇವಲ ಅನುಸರಿಸುವುದಲ್ಲ. ಆದರೆ ತ್ಯಾಗದ ಮನೋಭಾವದಿಂದ ಪ್ರೇರಿತವಾದ ಅತ್ಯುನ್ನತ ಆಧ್ಯಾತ್ಮಿಕ ಕಾರ್ಯವಾಗಿದೆ ಅಂತ ಪ್ರಶಂಸಿಸಿದ್ದಾರೆ.

ಇಂದು ಸರ್ಕಾರಿ ರಜೆ ಇಲ್ಲ

ತುಮಕೂರು: ರಾಮಮಂದಿರದಲ್ಲಿ ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆ ಕಾರ್ಯಕ್ರಮ ಜ.22ರಂದು ನಡೆಯಲಿದ್ದು, ಅಂದು ಕರ್ನಾಟಕದಲ್ಲಿ ಸರ್ಕಾರಿ ರಜೆ ಘೋಷಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸೋಮವಾರ ಸರ್ಕಾರಿ ರಜೆ ಘೋಷಿಸಬೇಕು ಎಂದು ಬಿಜೆಪಿ ಸೇರಿದಂತೆ ಹಿಂದೂ ಸಂಘಟನೆಗಳು ಹಾಗೂ ವಿವಿಧ ಸಂಘಟನೆಗಳು ಆಗ್ರಹಿಸಿದ್ದವು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಜೆ ಘೋಷಣೆ ಮಾಡುವುದಿಲ್ಲ ಎಂದು ಸಿಎಂ ಸ್ಪಷ್ಟಪಡಿಸಿದ್ದಾರೆ.

ತುಮಕೂರಲ್ಲಿ ಮಾತನಾಡಿದ ಸಿದ್ದರಾಮಯ್ಯ, ಸೋಮವಾರ ಮುಜರಾಯಿ ದೇಗುಲಗಳಲ್ಲಿ ವಿಶೇಷ ಪೂಜೆ ನಡೆಯುತ್ತೆ. ಆದರೆ ಸರ್ಕಾರಿ ರಜೆ ಇಲ್ಲ. ಸೋಮವಾರ ಮುಜರಾಯಿ ದೇಗುಲಗಳಲ್ಲಿ ದಾಸೋಹ, ಪಾನಕ–ಫಲಹಾರ ವ್ಯವಸ್ಥೆ ಬಗ್ಗೆ ನನಗೆ ಮಾಹಿತಿ ಇಲ್ಲ. ನಾಳೆ ಮಹದೇವಪುರದಲ್ಲಿ ●9ನೇ ಪುಟಕ್ಕೆ

ಮೈಸೂರಲ್ಲಿ ಇಂದು ಮೆರವಣಿಗೆ ನಿಷೇಧ

ಮೈಸೂರು,ಜ.21(ಜಿಎ)– ಅಯೋಧ್ಯೆ ರಾಮಮಂದಿರದಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪೊಲೀಸರು ಮೈಸೂರು ನಗರದಾದ್ಯಂತ ಕಟ್ಟೆಚ್ಚರ ವಹಿಸಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ರೀತಿಯ ಮೆರವಣಿಗಳನ್ನು ನಿಷೇಧಿಸಿದ್ದಾರೆ.

ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗದಂತೆ ರಾಜ್ಯಾದ್ಯಂತ ಪೊಲೀಸರು ಬಿಗಿ ಭದ್ರತೆ ಮಾಡಲಾಗಿದ್ದು, ಅದರಂತೆ ಮೈಸೂರಲ್ಲಿಯೂ ಪ್ರವಾಸಿ ತಾಣ, ಹೊಟೇಲ್‌ಗಳು ಮತ್ತು ವಾಹನಗಳನ್ನು ತಪಾಸಣೆ ನಡೆಸಲಾಗುತ್ತಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಮೈಸೂರು ನಗರಾದ್ಯಂತ ಎಲ್ಲಾ ರೀತಿಯ ಮೆರವಣಿಗೆಗಳನ್ನು



ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಪೊಲೀಸರು ಮೆಟಲ್ ಡಿಟೆಕ್ಟರ್ ಮೂಲಕ ತಪಾಸಣೆ ನಡೆಸಿದರು.

ಜ.21, 22ರಂದು ನಿಷೇಧಿಸಲಾಗಿದೆ. ಈಗಾಗಲೇ ಮೈಸೂರಿನ ಪ್ರಮುಖ ಸ್ಥಳ, ವಾಹನಗಳ ತಪಾಸಣೆ ನಡೆಸುತ್ತಿದ್ದು, ಮತ್ತೊಂದೆಡೆ ಹೊಟೇಲ್‌ಗಳಲ್ಲಿ ಉಳಿದುಕೊಂಡಿರುವವರ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದೆ. ಜ.23ರವರೆಗೂ ನಗರದಲ್ಲಿ ಬಿಗಿ ಭದ್ರತೆ ಒದಗಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಅತ್ತೆ : ಹಾಲಿನವನು, ಪೇಪರಿನವರು ಯಾಕೆ ಮನೆ ಕಡೆ ಬರುತ್ತಿಲ್ಲ?

ಸೊಸೆ : ನೀವು ತುಳಸಿ ಪೂಜೆ ಮಾಡಿ, ಕೆನ್ನೆ ತುಂಬಾ ಅರಿಶಿನ ಬಳ್ಕೊಬೇಡಿ. 'ಯಲ್ಲೋ ಫಂಗಸ್' ಅಂತ ಹೆದರಿಕೊಂಡಿದ್ದಾರೆ.

ಮೈಸೂರು ಮಿತ್ರ

ಸೋಮವಾರ, 22 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

'ಯಾರು ಏನಾದರೂ ಹೇಳಿಕೊಳ್ಳಲಿ ನೀವು ಸಮಾಧಾನದಿಂದಿರಿ. ಏಕೆಂದರೆ, ಸೂರ್ಯನ ಬಿಸಿಲು ಎಷ್ಟೇ ಜೋರಾಗಿದ್ದರೂ ಸಮುದ್ರ ಒಣಗುವುದಿಲ್ಲ'.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಓಣಿ ಮಕ್ಕಳಂತಾಗು, ಕೋಣೆ ಮಕ್ಕಳಂತಾಗದಿರು'

ನಿಮ್ಮ ಪತ್ರಗಳು

'ಮಲಗು ಕಂದ' ಕರ್ತೃ ಮಂಜುನಾಥ್‌ಗೆ ಅಭಿನಂದನೆ

ಮಾನ್ಯರೇ,

ಕೊಳ್ಳೇಗಾಲದ ಕವಿ ಬಿ.ಎಂ.ಮಂಜುನಾಥ್ ಮತ್ತು ಅವರ ಪತ್ನಿ ಪುಷ್ಪಲತಾ ಅವರು ನವದೆಹಲಿಯಲ್ಲಿ ನಡೆಯುವ ಈ ಬಾರಿಯ ಗಣರಾಜ್ಯೋತ್ಸವದ ಪಥಸಂಚಲನ ವೀಕ್ಷಿಸಲು ಆಹ್ವಾನಿತರಾಗಿರುವುದು ಸಂತಸದ ಸಂಗತಿ.



ಪ್ರೊ.ಸಿ.ನಾಗಣ್ಣ

ಕಳೆದ ವರ್ಷ ರಾಷ್ಟ್ರಮಟ್ಟದಲ್ಲಿ ಏರ್ಪಡಿಸಲಾಗಿದ್ದ 'ಲಾಲಿ ಪದ' ರಚನೆ ಸ್ಪರ್ಧೆಯಲ್ಲಿ ಮಂಜುನಾಥ್ ಪ್ರಥಮ ಬಹುಮಾನ ಗಳಿಸಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿಯರವರು ಕನ್ನಡದ ಈ ಲಾಲಿಪದ (ಮಲಗು ಕಂದ) ಮತ್ತು ಅದನ್ನು ರಚಿಸಿದ ಮಂಜುನಾಥರ ಬಗ್ಗೆ ತಮ್ಮ 'ಮನ್ ಕೀ ಬಾತ್'ನಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಮಂಜುನಾಥ್ ದಂಪತಿ ಗಣರಾಜ್ಯೋತ್ಸವದ ಪಥಸಂಚಲನ ವೀಕ್ಷಣೆಗೆ ಆಹ್ವಾನಿತರಾಗಿದ್ದಾರೆ. ಮಂಜುನಾಥ್ ಅವರು 6 ಲಕ್ಷ ರೂ. ಪ್ರಥಮ ಬಹುಮಾನ ಮತ್ತು ಪ್ರಶಂಸನೀಯ ಪತ್ರಕ್ಕೆ ಭಾಜನರಾಗಿದ್ದಾರೆ.

ಈ ಸ್ಪರ್ಧೆಯ ಅಂತಿಮ ಸುತ್ತಿನ ಆಯ್ಕೆ ಸಮಿತಿಯಲ್ಲಿ ನಾನು ಕನ್ನಡ ಭಾಷೆಯ ಪ್ರತಿನಿಧಿಯಾಗಿ ತೀರ್ಪುಗಾರನಾಗಿದ್ದೆ. ಆಗ ನಾನು ಮಂಜುನಾಥರ ಕವನವನ್ನು ಬರೇ ಓದಲಿಲ್ಲ, ನನ್ನ ಕೌಶಲ್ಯವನ್ನೆಲ್ಲ ಬಳಸಿ ಮಧುರವಾಗಿ ಹಾಡಿದೆ. ನಂತರ ಇಂಗ್ಲಿಷ್ ಭಾಷೆಯಲ್ಲಿ ಅದರ ತಾತ್ಪರ್ಯವನ್ನು ಹೇಳಿದೆ. ನನ್ನ ಹಾಡು ಮತ್ತು ತಾತ್ಪರ್ಯಕ್ಕೆ ಆ ತೀರ್ಪುಗಾರರೆಲ್ಲಾ ತಲೆದೂಗಿದರು. ಅಲ್ಲದೆ, ತಮ್ಮಲ್ಲೇ ಮೆಲುದನಿಯಲ್ಲಿ 'ಕನ್ನಡದ ಕವನ ಸೊಗಸಾಗಿದೆ. ಪ್ರೊಫೆಸರ್ ಚೆನ್ನಾಗಿಯೂ ಹಾಡಿದರೆಂದು ಮಾತನಾಡಿಕೊಂಡರು. ಮಂಜುನಾಥರ ಕವನವನ್ನು ನಾನಂದು ಸರಿಯಾಗಿ ಹಾಡದಿದ್ದರೆ, ತರ್ಜುಮೆ ಸಮರ್ಪಕವಾಗಿ ನೀಡದಿದ್ದರೆ ಫಲಿತಾಂಶ ಏನಾಗುತ್ತಿತ್ತೋ ಊಹಿಸಲಾಗದು. ಆದರೆ 'ಒಬ್ಬ ವ್ಯಕ್ತಿಯ ಯಶಸ್ಸಿನ ಘಳಿಗೆ ಕೂಡಿ ಬಂದಾಗ ಆ ವ್ಯಕ್ತಿಯ ಮುನ್ನಡೆಯನ್ನು ಯಾರಿಂದಲೂ ತಪ್ಪಿಸಲಾಗದು' ಎಂಬುದರಲ್ಲಿ ನನಗೆ ನಂಬಿಕೆ. ಮಂಜುನಾಥರು ಜಯಶಾಲಿಯಾಗಿದ್ದಾರೆ. ಅವರ ಸಾಹಿತ್ಯ ಸೇವೆ ನಿರಂತರವಾಗಿ ನಡೆಯುತ್ತಿರಲಿ. ಇನ್ನೂ ಹಲವು ಪ್ರಶಸ್ತಿ–ಪುರಸ್ಕಾರಗಳು ಅವರ ಕೊರಳನ್ನು ಅಲಂಕರಿಸಲಿ ಎಂದು ಹಾರೈಸುತ್ತೇನೆ.

–ಪ್ರೊ.ಸಿ.ನಾಗಣ್ಣ, ಮೈಸೂರು.

ರಾಜಕೀಯ ಪಕ್ಷಗಳ ತಿಕ್ಕಾಟದಲ್ಲಿ ದೇಶದ ಗೌರವ ಹಾಳು

ಮಾನ್ಯರೆ,

ದೇಶದ ಬಹುಜನರ ಹೃದಯಾರಾಧಕ ದೇವರು ಶ್ರೀರಾಮ. ರಾಮನನ್ನು ಭಕ್ತಿಯಿಂದ ಆರಾಧಿಸುತ್ತಲೇ ಅವನ ಆದರ್ಶಗಳನ್ನು ವಿನಮ್ರವಾಗಿ ಒಪ್ಪುತ್ತಲೇ ಸುಗುಣ ನಿರ್ಗುಣ ರಾಮನೆನ್ನುತ್ತಲೇ ಶಂಭೂಕ ಹತ್ಯೆ, ಸೀತಾಮಾತೆಯನ್ನು ಅನುಮಾನಿಸಿದ್ದನ್ನು ಧಿಕ್ಕರಿಸುವುದು ಸಹ ರಾಮನ ಮೇಲಿನ ಪ್ರೀತಿಯಿಂದಲೇ ಎನ್ನುವುದನ್ನು ಮರೆಯುವಂತಿಲ್ಲ. ಶತಮಾನದ ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಬಿಜೆಪಿ ರಾಜಕೀಯ ಪಕ್ಷಗಳಿಗೇನಾಗಿದೆ. ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳೇನೆ ಇರಲಿ, ಈ ಶ್ರದ್ಧೆ ಮತ್ತು ಭಕ್ತಿಯನ್ನು ಗೌರವಿಸಬಹುದಿತ್ತು. ಗುಜರಾತಿನ ಸೋಮನಾಥ ದೇವಾಲಯದ ಪುನರ್ ನಿರ್ಮಾಣವಾಗಿ ಉದ್ಘಾಟನೆಯ ಸಮಯದಲ್ಲಿ ನೆಹರು ಹೇಗೆ ಭಾರತೀಯರ ಭಾವನೆಗಳಿಗೆ ವಿರುದ್ಧವಾಗಿ ನಡೆದುಕೊಂಡರೋ, ಇಂದಿರಾ ಹೇಗೆ ಸಂವಿಧಾನವನ್ನು ಗಾಳಿಗೆ ತೂರಿ ತುರ್ತು ಪರಿಸ್ಥಿತಿ ಹೇರಿದರೋ ಆ ಪರಂಪರೆಯನ್ನು ಪ್ರಸ್ತುತ ಕಾಂಗ್ರೆಸ್ ಮುಂದುವರಿಸಿಕೊಂಡು ಹೋಗುತ್ತಿದೆ. ಎಡಪಕ್ಷಗಳ ನಡೆಯಂತೂ ಹೇಳತೀರದಾಗಿದೆ. ಬಿಜೆಪಿಯಂತೂ ರಾಮಮಂದಿರವನ್ನು ಎಂದಿನಂತೆ ತನ್ನ ಓಟ್‌ಬ್ಯಾಂಕ್ ರಾಜಕಾರಣಕ್ಕೆ ಬಳಸಿಕೊಂಡು ತನ್ನ ವಿರುದ್ಧದ ಅಪಸ್ವರಗಳನ್ನು ದೇಶದ್ರೋಹವೆಂದೇ ಬಿಂಬಿಸುತ್ತಿದೆ. ಕಾಂಗ್ರೆಸ್, ಎಡಪಕ್ಷಗಳ ಬಾಲಿಶತನ, ಬಿಜೆಪಿ ಮತ ರಾಜಕಾರಣದ ಹುನ್ನಾರ, ಪ್ರಾದೇಶಿಕ ಪಕ್ಷಗಳ ಬೆಂದ ಮನೆಯಲ್ಲಿ ಗಳ ಹಿರಿಯುವ ತವಕ ನಮ್ಮ ರಾಜಕೀಯ ಪಕ್ಷಗಳ ಕೊಳಕುತನವನ್ನು ಜಗಜ್ಜಾಹೀರುಗೊಳಿಸಿದೆ. ಮೀಡಿಯಾಗಳು ಹಾದಿ ತಪ್ಪಿರುವುದು ಸೈದ್ಧಾಂತಿಕ ರಾಜಕಾರಣದ ಹಿನ್ನಡೆಗೆ ಕಾರಣವಾಗಿದೆ.

–ಬ್ಯಾ.ರಾ. ಪ್ರಸನ್ನಕುಮಾರ್, ಬ್ಯಾಡರಹಳ್ಳಿ, ಕೃಷ್ಣರಾಜನಗರ ತಾಲೂಕು

ಬಜೆಟ್‌ನಲ್ಲಿಯೇ ಏಳನೇ ವೇತನ ಆಯೋಗ ವರದಿ ಜಾರಿಯಾಗಲಿ!

ಮಾನ್ಯರೆ,

ಈ ಹಿಂದಿನ ಬಿಜೆಪಿ ಸರ್ಕಾರ ಸರ್ಕಾರಿ ನೌಕರರ ವೇತನ ಹಾಗೂ ಭತ್ಯೆ ಪರಿಷ್ಕರಣೆಗಾಗಿ ಏಳನೇ ವೇತನ ಆಯೋಗವನ್ನು ರಚಿಸಿತ್ತು. ಪ್ರಸ್ತುತ ಕಾಂಗ್ರೆಸ್ ಸರ್ಕಾರ ಅದರ ಕಾರ್ಯ ಅವಧಿಯನ್ನು ಎರಡು ಬಾರಿ ವಿಸ್ತರಿಸಿ ಆದೇಶಿಸಿತ್ತು. ವೇತನ ಆಯೋಗವನ್ನು ರಚನೆ ಮಾಡಿ ಈಗಾಗಲೇ ಕಳೆದ ನವಂಬರ್ ತಿಂಗಳಿಗೆ ಒಂದು ವರ್ಷ ಕಳೆದಿದೆ. ಹೀಗಾಗಿ ಸರ್ಕಾರ ತಡಮಾಡದೇ ಇನ್ನಾದರೂ ಈ ಬಾರಿಯ ಬಜೆಟ್‌ನಲ್ಲಿಯೇ ಶೀಘ್ರವಾಗಿ ಏಳನೇ ವೇತನ ಆಯೋಗದ ವರದಿ ಪಡೆದು ಜಾರಿ ಮಾಡುವುದು ಅವಶ್ಯಕವಾಗಿದೆ.

ಸರಕಾರದ ಒಂದು ಪ್ರಮುಖ ಅಂಗವೇ ಆಗಿರುವ ಸರಕಾರಿ ನೌಕರರು ಬೆಳಗ್ಗೆಯಿಂದ ಸಂಜೆಯವರೆಗೆ ಸರಕಾರದ ಪ್ರತಿನಿಧಿಗಳಂತೆ ಪ್ರಜೆಗಳ ಸೇವೆ ಮಾಡುತ್ತಾರೆ. ಇಂಥ ಕರ್ತವ್ಯಕ್ಕೆ ಪ್ರತಿಯಾಗಿ ಸರಕಾರವೂ ಸಕಾಲಕ್ಕೆ ಸಂಬಳ ನೀಡುತ್ತ, ಕಾಲಾನುಕಾಲಕ್ಕೆ ಹೆಚ್ಚಿಸುತ್ತ ತನ್ನ ನೌಕರರ ಹಿತವನ್ನು ಕಾಪಾಡಿಕೊಂಡು ಬಂದಿದೆ. ಸರಕಾರಿ ಸೇವೆಯಲ್ಲೇ ಸಂತೃಪ್ತಿ ಮತ್ತು ಸಾರ್ಥಕತೆ ಪಡೆಯುವುದು ತಮ್ಮ ಧ್ಯೇಯವೆಂದು ನಂಬಿರುವ ನೌಕರರಿಗೆ ತೊಂದರೆ ಆಗದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯವಾಗಿದೆ.

ಲೋಕಸಭೆ ಚುನಾವಣೆಗಳು ಮುಂದಿನ ಏಪ್ರಿಲ್– ಮೇ ತಿಂಗಳಲ್ಲಿ ನಡೆಯಲಿದ್ದು, ಇದಕ್ಕೆ ಪೂರಕವಾಗಿ ಫೆಬ್ರವರಿಯಲ್ಲಿ ಮಂಡನೆಯಾಗಲಿರುವ 2024–25 ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯಸರ್ಕಾರ ತಮಗೆ ವೇತನ ಹೆಚ್ಚಳದ ಕೊಡುಗೆ ನೀಡಲಿದೆ ಎಂಬ ಆಶಾಭಾವನೆಯಲ್ಲಿ ರಾಜ್ಯದ ಸಮಸ್ತ ಸರ್ಕಾರಿ ನೌಕರರಿದ್ದು, ಸರ್ಕಾರ ಬಜೆಟ್ ಮಂಡನೆಯ ಸಮಯದಲ್ಲಿ ನೌಕರರಿಗೆ ಏಳನೇ ವೇತನ ಆಯೋಗದ ಸ್ಪಷ್ಟ ಜಾರಿಯನ್ನು ಮಾಡುವ ಬಗ್ಗೆ ಮಹತ್ವದ ಘೋಷಣೆ ಮಾಡುತ್ತಾರೆಂಬ ಆಶಾಭಾವನೆ ಪ್ರತಿಯೊಬ್ಬ ಸರ್ಕಾರಿ ನೌಕರರಲ್ಲೂ ಇದೆ. ಫೆಬ್ರವರಿ 16ರಂದು ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮಂಡಿಸುವ ದಾಖಲೆಯ ತಮ್ಮ 15 ನೇ ಬಜೆಟ್‌ನಲ್ಲಿ ಘೋಷಣೆ 7ನೇ ವೇತನ ಆಯೋಗದ ವರದಿ ಮಾಡಲಿ ಎಂಬುದು ಸಮಸ್ತ ಸರ್ಕಾರಿ ನೌಕರರ ಸದಾಶಯವಾಗಿದೆ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಅಯೋಧ್ಯೆಯ ರಾಮಮಂದಿರ ಒಂದು ಚಿಂತನೆ ಮತ್ತು ಡಾ.ಎಸ್.ಎಲ್.ಭೈರಪ್ಪನವರೊಂದಿಗೆ ನನ್ನ ಸಂವಾದ



ಎಸ್.ಎಲ್.ಭೈರಪ್ಪ



ಯೋಗಿ ಆದಿತ್ಯನಾಥ್



ಶ್ರೀರಾಮಚಂದ್ರ



ಪ್ರಧಾನಿ ಮೋದಿ

ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಶುಭ ಮುಹೂರ್ತ ನಿಗದಿಯಾಗಿದೆ. ಸೋಮವಾರ ಜನವರಿ 22, 2024 ಪ್ರಪಂಚದೆಲ್ಲೆಡೆ ನೆಲೆಸಿರುವ ಹಿಂದೂಗಳಿಗೆ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಏಕೆಂದರೆ, ಯಾವ ರಾಮನು 500 ವರ್ಷಗಳ ಹಿಂದೆ ಆಕ್ರಮಣಕಾರ ಬಾಬರ್‌ನಿಂದ ತನ್ನ ಜನ್ಮಸ್ಥಳದಿಂದಲೇ ಹೊರದೂಡಲ್ಪಟ್ಟಿದ್ದನೋ, ಅವನನ್ನು ಹಿಂದೂಗಳು ಬರಮಾಡಿಕೊಳ್ಳಲಿದ್ದಾರೆ. ಇದರೊಂದಿಗೆ ತಮ್ಮ ಆತ್ಮ ಗೌರವವನ್ನು ಮರು ಸ್ಥಾಪಿಸಲಿದ್ದಾರೆ.

ಭಾರತ ದೇಶ ಸ್ವಾತಂತ್ರ್ಯ ಪಡೆದು 76 ವರ್ಷಗಳಾಗಿದ್ದರೂ, ದೇಶದ ಶೇಕಡ 80ರಷ್ಟು ಜನಸಂಖ್ಯೆ ಹಿಂದೂಗಳೇ ಆಗಿದ್ದರೂ, ನಮ್ಮ ರಾಮನನ್ನು 1947ರಿಂದ ಇಲ್ಲಿಯವರೆಗೆ ಮರಳಿ ಮನೆಗೆ ಕರೆತರಲು ನಮ್ಮಿಂದಾಗಲಿಲ್ಲ. ಅತೀಯಾದ ರಾಜಕೀಯವೇ ಅದಕ್ಕೆಲ್ಲಾ ಕಾರಣ ಎಂದು ಬಿಡಿಸಿ ಹೇಳಬೇಕಿಲ್ಲ.

ನಮ್ಮ ದೇಶದ ಬಹುಮುಖ್ಯ ಬಳುವಳಿ ಮತ್ತು ಸಾಂಸ್ಕೃತಿಕ ಹಾಗೂ ಧಾರ್ಮಿಕ ಹೆಮ್ಮೆಯ ಸಂಕೇತವಾದ ಶ್ರೀರಾಮಚಂದ್ರನನ್ನು ಮತ್ತೆ ದಕ್ಕಿಸಿಕೊಳ್ಳುವುದು ಅಷ್ಟೇನು ಸುಲಭದ ಮಾತಾಗಿರಲಿಲ್ಲ. ಶಾಂತಿಯುತ ಆಂದೋಲನಗಳು, ಮಾತುಕತೆ, ಅಂತಿಮವಾಗಿ ನ್ಯಾಯಾಲಯದ ಮೂಲಕ ತಮ್ಮ ಇಷ್ಟದೈವ ಶ್ರೀರಾಮನನ್ನು ಜನವರಿ 22, 2024ರಂದು ಬರಮಾಡಿಕೊಳ್ಳಲಾಗುತ್ತಿದೆ. ಸಹಜವಾಗಿ, ಈ ಮೊದಲು ಕೆಲವು ಹಿಂಸಾತ್ಮಕ ಘಟನೆಗಳು ನಡೆದವು. ಆದರೆ ಅವು ರಾಜಕೀಯ ಕಾರಣಗಳಿಗಾಗಿ ನಡೆದವೇ ಹೊರತು ಅಯೋಧ್ಯೆಯ ಜಟಿಲ ಸಮಸ್ಯೆಯಲ್ಲಿ ಭಾಗವಹಿಸಿದವರ ಸಹಿಷ್ಣುತೆ ಮತ್ತು ತಿಳುವಳಿಕೆಯ ಕೊರತೆಯಿಂದ ಅಂತೂ ಅಲ್ಲ.

ಪ್ರಭು ರಾಮನ ಹೆಸರೇ ಹಿಂದುಗಳ ಭಾವನೆ ಮತ್ತು ಚಿಂತನೆಗಳನ್ನು ಎಚ್ಚರಿಸಿತು ಎಂಬ ವಿಷಯ ರಾಮನ ಜನ್ಮಸ್ಥಳವನ್ನು ಮರಳಿ ಪಡೆಯುವ ಹೋರಾಟ, ದೇವಾಲಯವನ್ನು ಕೆಡವಿದ ದಿನದಿಂದಲೇ ಪ್ರಾರಂಭವಾಯಿತು ಎಂಬ ಅಂಶದಿಂದ ಸ್ಪಷ್ಟವಾಗುತ್ತದೆ.

ಅದು ಹಾಗಿರಲಿ, ನಾವು ಈಗ ಹಿಂತಿರುಗಿ ನೋಡಿದರೆ, ನಡೆದದ್ದೆಲ್ಲ ಒಳ್ಳೆಯದಕ್ಕೆ ಎಂದು ಹೇಳಬಹುದು. ನಿಗದಿಯಾದಂತೆ ರಾಮ ಜನ್ಮಭೂಮಿಯಲ್ಲಿ ಬಹು ನಿರೀಕ್ಷಿತ ಬಾಲರಾಮನ ವಿಗ್ರಹಕ್ಕೆ ಪ್ರಾಣ ಪ್ರತಿಷ್ಠಾಪನೆಯಾಗುತ್ತಿದೆ.

ಈಶ್ವರನ ಮೂರು ಅಂಶಗಳಾದ ತ್ರಿಮೂರ್ತಿಗಳಲ್ಲಿ ಕ್ರಮವಾಗಿ ಸೃಷ್ಟಿ ಕರ್ತ, ಸಂರಕ್ಷಕ ಮತ್ತು ವಿನಾಶಕರಾದ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಒಬ್ಬನಾದ ವಿಷ್ಣುವಿನ ಅವತಾರ ಪುರುಷ ಶ್ರೀರಾಮನ ಚೈತನ್ಯ ಇಡೀ ದೇಶದಲ್ಲಿ ಮೊಳಗುತ್ತಿದೆ. ಭಗವದ್ಗೀತೆಯಲ್ಲಿ ಒಂದು ಮಾತಿದೆ. ಅಧರ್ಮವನ್ನು ಸರ್ವನಾಶ ಮಾಡಿ ಧರ್ಮವನ್ನು ಎತ್ತಿ ಹಿಡಿಯುವ ಸಲುವಾಗಿ ಸಮಯ ಬಂದಾಗಲೆಲ್ಲಾ ಭಗವಾನ್ ಶ್ರೀಕೃಷ್ಣ ಬೇರೆ ಬೇರೆ ಯುಗಗಳಲ್ಲಿ ಅವತಾರ ತಾಳುತ್ತಾನೆ ಎಂದು. ಇದು ಕಲಿಯುಗ, ದುಷ್ಟಶಕ್ತಿಗಳು ದೇವಸ್ಥಾನಗಳನ್ನು ನಾಶಪಡಿಸಿ, ಅವನ ಭಕ್ತರನ್ನು ಅಧೀರಗೊಳಿಸಿದ್ದರು. ಆಶ್ಚರ್ಯವೆಂದರೆ, ದುಷ್ಟ ಶಕ್ತಿಗಳು ಸಾವಿರಾರು ದೇವಸ್ಥಾನಗಳನ್ನು ವಶಪಡಿಸಿಕೊಂಡು, ಹಿಂದೂ ಧಾರ್ಮಿಕರ ಮೇಲೆ ದಬ್ಬಾಳಿಕೆಯ ಆಡಳಿತವನ್ನು ಸಾವಿರ ವರ್ಷಕ್ಕೂ ಹೆಚ್ಚು ಕಾಲ ನಡೆಸಿದರೂ, ಆ ಪರಮಾತ್ಮ ಏಕೆ ಅವತಾರ ತಾಳಿ ಬಂದು ಶತ್ರುವನ್ನು ಸದೆ ಬಡಿಯಲಿಲ್ಲ? ಕಾರಣ ಗೊತ್ತಿಲ್ಲ.

ಆದರೂ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಆಳ್ವಿಕೆಯಲ್ಲಿ ಶ್ರೀರಾಮನ ಅಯೋಧ್ಯೆ ಮತ್ತೆ ಹಿಂದೂಗಳ ಕೈವಶವಾಗಿದೆ. ಈಗ ಆಚರಣೆಗಳು ಭರದಿಂದ ಸಾಗಿವೆ. ಪ್ರಧಾನಿ ನರೇಂದ್ರ ಮೋದಿಯವರು ಶ್ರೀರಾಮಚಂದ್ರನ ಪವಿತ್ರ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಹನ್ನೊಂದು ದಿನಗಳ ಉಪವಾಸ ವ್ರತಾಚರಣೆ ಕೈಗೊಂಡಿದ್ದಾರೆ. ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಗೆ ತಲತಲಾಂತರಗಳಿಂದ ಹಿಂದೂಗಳು ಮಾಡಿದ ತ್ಯಾಗ, ಬಲಿದಾನಗಳು ಈಗ ಸಾರ್ಥಕತೆ ಪಡೆಯಲಿವೆ. ಉಪವಾಸ ವ್ರತವನ್ನು ಪ್ರಾರಂಭಿಸಿದ ನಂತರ ಮೋದಿಯವರು ಔಚಿತ್ಯಪೂರ್ಣವಾಗಿ ಹೀಗೆ ನುಡಿದಿದ್ದಾರೆ. "ದೇವರು ಭಾರತ ದೇಶದ ಎಲ್ಲಾ ಜನರನ್ನು ಪ್ರತಿನಿಧಿಸಲು ನನ್ನನ್ನು ಒಂದು ಸಾಧನವನ್ನಾಗಿ ಮಾಡಿದ್ದಾನೆ".

ಆಗಲೇ, ಅನೇಕ ಕುತೂಹಲಕಾರಿ ಐತಿಹ್ಯಗಳು, ಕತೆಗಳು ಮತ್ತು ಸತ್ಯಗಾಥೆಗಳು ಹರಿದಾಡುತ್ತಿವೆ. ಖಂಡಿತವಾಗಿ ಕೆಲವಂತೂ ನಂಬಲಸಾಧ್ಯವಾದವು. ಹತ್ತು ವರ್ಷ ವಯಸ್ಸಿನ ಒಬ್ಬ ಬಾಲಕ, ರಾಮಮಂದಿರ ನಿರ್ಮಾಣವಾಗುವವರೆಗೆ ನಾನು ಮೌನವ್ರತ ಪಾಲಿಸುತ್ತೇನೆ ಮತ್ತು ಯಾವುದೇ ಪಾದರಕ್ಷೆ ಧರಿಸದೇ ಬರಿಗಾಲಲ್ಲಿ ನಡೆಯುತ್ತೇನೆ ಎಂದು ಶಪಥಗೈಯ್ದ ಮೌನಿ ಬಾಬಾರ ಕಥೆಯಂತೂ ಬಹಳ ಶ್ಲಾಘನೀಯ ಮತ್ತು ಸೋಜಿಗ ಹುಟ್ಟಿಸುವಂತಹದ್ದು. ವರದಿಗಳ ಪ್ರಕಾರ, ಅವರು ಪ್ರತಿಷ್ಠಾಪನೆಯ ದಿನವಾದ ಜನವರಿ, 22ರಂದು ರಾಮ ನಾಮವನ್ನು ಜಪಿಸುವ ಮೂಲಕ ತಮ್ಮ ಮೌನ ಮುರಿಯಲಿದ್ದಾರೆ. ಮಧ್ಯಪ್ರದೇಶದವರಾದ ಅವರು ಅಯೋಧ್ಯೆಯ ಮಂದಿರದಲ್ಲಿ ಶ್ರೀರಾಮ ಪೀಠವನ್ನು ಅಲಂಕರಿಸಿದ ನಂತರ ಪಾದರಕ್ಷೆಯನ್ನು ಧರಿಸದ ವ್ರತವನ್ನು ಅಂತ್ಯಗೊಳಿಸಲಿದ್ದಾರೆ. ಅವರ ಮೂಲ ಹೆಸರು ಮೋಹನ್ ಗೋಪಾಲ್ ದಾಸ್. ಬಾಬರಿ ಮಸೀದಿಯನ್ನು ಧ್ವಂಸ ಮಾಡಿದಾಗ ಅವರು ಕರಸೇವಕರೊಂದಿಗೆ ಇದ್ದರು ಎಂಬ ವರದಿಗಳಿವೆ. ಅವರನ್ನು ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಗೆ ಆಹ್ವಾನಿಸಲಾಗಿರುವ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ.

ಇತ್ತೀಚೆಗೆ ಲಕ್ನೋ ಮತ್ತು ಅಯೋಧ್ಯೆ ಪ್ರವಾಸದಿಂದ ಹಿಂದಿರುಗಿದ ಪ್ರಖ್ಯಾತ ಕನ್ನಡದ ಕಾದಂಬರಿಕಾರರಾದ ಡಾ. ಎಸ್.ಎಲ್.ಭೈರಪ್ಪ ಅವರೊಡನೆ ಸಂವಾದ ನಡೆಸಿದೆ. ಮೊದಲಿಗೆ, ನಾನು ಅವರನ್ನು ಉತ್ತರಪ್ರದೇಶದ ಕಾನೂನು–ಸುವ್ಯವಸ್ಥೆ ಬಗ್ಗೆ ಕೇಳಿದಾಗ ಅವರ ಉತ್ತರ ಆಶ್ಚರ್ಯಕರ ಹಾಗೂ ಸಕಾರಾತ್ಮಕವಾಗಿತ್ತು. ಏಕೆಂದರೆ ಹಾಲಿ ಮುಖ್ಯಮಂತ್ರಿಗಳಾದ ಯೋಗಿ ಆದಿತ್ಯನಾಥರ ಪೂರ್ವದಲ್ಲಿ ಉತ್ತರಪ್ರದೇಶ ಸಾಕಷ್ಟು ಅವ್ಯವಸ್ಥೆ ಮತ್ತು ಹಿಂಸಾತ್ಮಕ ಸಾಮಾಜಿಕ ಸ್ಥಿತಿಯಲ್ಲಿತ್ತು.

ಹೌದು, ಅದನ್ನು ಲಾಲು ಪ್ರಸಾದ್ ಯಾದವ್‌ರ ಬಿಹಾರದಂತೆ ಕಾನೂನು ರಹಿತ ಪ್ರದೇಶ ಎಂದು ಕರೆಯಲಾಗುತ್ತಿತ್ತು. ಡಾ. ಭೈರಪ್ಪನವರ ಪ್ರಕಾರ, ಈಗ ಕಾನೂನು–ಸುವ್ಯವಸ್ಥೆ ಸಂಪೂರ್ಣ ಹಿಡಿತದಲ್ಲಿರುವಂತೆ ತೋರಿತು. ಕರ್ನಾಟಕ ಮೂಲದ ಹಿರಿಯ ಐಎಎಸ್ ಅಧಿಕಾರಿಗಳೊಡನೆ ಭೈರಪ್ಪನವರು ಮಾತನಾಡಿದಾಗ, ಅವರು ಕೂಡ ಸಾಕಷ್ಟು ವಿವರಣೆಯೊಂದಿಗೆ ಈ ಸಂಗತಿಯನ್ನು ಅನುಮೋದಿಸಿದರು. ಇದಕ್ಕೆ ಕಾರಣ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ಎಲ್ಲಾ ಅಧಿಕಾರಿಗಳಿಗೆ ಯಾವುದೇ ಎಂಎಲ್ಎ, ಎಂಎಲ್‌ಸಿ ಅಥವಾ ಎಂಪಿಗಳಿಗೆ ಮಣೆ ಹಾಕದೇ ಕಟ್ಟುನಿಟ್ಟಾಗಿ ಕಾನೂನು, ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಬೇಕೆಂದು ನಿಷ್ಠುರ ಎಚ್ಚರಿಕೆಯನ್ನು ಕೊಟ್ಟಿರುವುದು. ಮುಖ್ಯಮಂತ್ರಿಗಳಿಂದಲೇ ಈ ರೀತಿ ಆಜ್ಞೆ ಮತ್ತು ಮಾರ್ಗದರ್ಶನ ದೊರೆತ ಮೇಲೆ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳಿಗೆ ಹೆದರದೇ ಬಹಳ ಆತ್ಮವಿಶ್ವಾಸದಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಹಿಂದೆ, ಮಹಿಳೆಯರು ಮತ್ತು ಮಕ್ಕಳು ರಾತ್ರಿ ವೇಳೆ ಸಂಚರಿಸುವುದು ಕಷ್ಟಕರವಾಗಿತ್ತು. ಆದರೆ ಯೋಗಿ ಆದಿತ್ಯನಾಥರ ಆಡಳಿತದಲ್ಲಿ ಈಗ ಹಾಗಿಲ್ಲ ಎಂದು ಭೈರಪ್ಪನವರು ತಿಳಿಸಿದರು.

ಈ ಮಾತನ್ನು ನಾನು ಕೇಳಿದಾಗ, ನಮ್ಮ ಮುಖ್ಯಮಂತ್ರಿಗಳು ಕೂಡ ಇಂತಹ ಸೂಚನೆಗಳನ್ನು ನಮ್ಮ ಇಲ್ಲಿಯ ಅಧಿಕಾರಿಗಳಿಗೆ ಏಕೆ ನೀಡಬಾರದು ಎಂದು ಸೋಜಿಗಪಟ್ಟೆ.

ಇತ್ತೀಚೆಗೆ ಹಾನಗಲ್‌ನಲ್ಲಿ ನಡೆದ ಗ್ಯಾಂಗ್ ರೇಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಪತ್ರಿಕಾ ವರದಿಗಾರರ ಪ್ರಶ್ನೆಗೆ ಉತ್ತರಿಸುತ್ತಾ, "ತಾವು ಬ್ಯಾಡಗಿ ಕ್ಷೇತ್ರದ ಎಂಎಲ್ಎ ಶಿವಣ್ಣ ಅವರೊಂದಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಮಾತನಾಡಿರುವುದಾಗಿ ಹೇಳಿದರು..." ಎಂದು ವರದಿಯಾಗಿದೆ. ಅರೆ, ಎಂಎಲ್ಎಗೆ ಏಕೆ ಸೂಚನೆ ಕೊಟ್ಟರು? ಆರೋಗ್ಯ ಅಧಿಕಾರಿ ಅಥವಾ ಪೊಲೀಸ್ ಅಧಿಕಾರಿಗೆ ಹೇಳಬಹುದಿತ್ತಲ್ಲ!

ಕೆಲವು ವರ್ಷಗಳ ಹಿಂದೆ ಲಾಲು ಪ್ರಸಾದ್ ಯಾದವ್ ಮತ್ತು ಅವರ ಪತ್ನಿ ರಾಬ್ರಿ ದೇವಿಯವರ ಆಡಳಿತ ಕೊನೆಯಾದ ನಂತರ ನಾನು ಪಾಟ್ನಾಕ್ಕೆ ಭೇಟಿ ಕೊಟ್ಟಿದ್ದು ನನಗೆ ನೆನಪಾಯಿತು. ನನ್ನ ಸ್ನೇಹಿತ ಹಾಗೂ ನಾನು ಪಾಟ್ನಾದಿಂದ ಹೊರಗೆ ನಮ್ಮ ಮುಂದಿನ ಪ್ರಯಾಣಕ್ಕೆ ಒಂದು ಟ್ಯಾಕ್ಸಿಯನ್ನು ಸಂಜೆ 6 ಗಂಟೆಯಲ್ಲಿ ಗೊತ್ತು ಮಾಡಿಕೊಂಡಿದ್ದೆವು. ಪ್ರಯಾಣದ ವೇಳೆ ಅದರ ಚಾಲಕ, ಹಿಂದಿನ ಸರ್ಕಾರದ ವೇಳೆ ಈ ಮಾರ್ಗದಲ್ಲಿ ಕಾರುಗಳನ್ನು ಅಡ್ಡಗಟ್ಟಿ ಸಾಕಷ್ಟು ದರೋಡೆ ಪ್ರಕರಣಗಳು ನಡೆಯುತ್ತಿದ್ದವು. ಹಾಗಾಗಿ ಈ ರಸ್ತೆಯಲ್ಲಿ ಕತ್ತಲಾದ ನಂತರ ಯಾರೂ ಓಡಾಡುತ್ತಿರಲಿಲ್ಲ ಎಂದು ತಿಳಿಸಿದ. ಆದರೆ, ಈಗ ಉತ್ತರಪ್ರದೇಶದಲ್ಲಿ ಪರಿಸ್ಥಿತಿ ಹಾಗಿಲ್ಲ. "ಅದನ್ನು ಸ್ವರ್ಗ ಎಂದೇ ಕರೆಯಬಹುದು'' ಎಂದು ಭೈರಪ್ಪನವರು ತಿಳಿಸಿದರು.

ಡಾ. ಭೈರಪ್ಪನವರು ಪತ್ರಿಕಾ ವರದಿಗಳ ಬಗ್ಗೆ ಬಹಳ ಸ್ವಾರಸ್ಯಕರವಾದ ಒಂದು ವಿಚಾರವನ್ನು ಪ್ರಸ್ತಾಪಿಸಿದರು. ನಮ್ಮ ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳು ಮತ್ತು ಲಕ್ನೋದಲ್ಲಿ ಅವರು ಓದಿದಂತಹ ಸುದ್ದಿಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಅವರ ಪ್ರಕಾರ, ನಾವು ಇಲ್ಲಿನ ಪತ್ರಿಕೆಗಳಲ್ಲಿ ಹೆಚ್ಚಾಗಿ ಬಲಾತ್ಕಾರ, ಕೊಲೆ, ಸುಲಿಗೆ ಇತ್ಯಾದಿಗಳ ಬಗ್ಗೆ ನೋಡುತ್ತೇವೆ. ಜೊತೆಗೆ ಸರಗಳ್ಳತನ, ರಸ್ತೆ ಅಪಘಾತದ ಬಗ್ಗೆ ಓದುತ್ತೇವೆ. ಆದರೆ ಅವರು ಅಲ್ಲಿ ಈ ರೀತಿಯ ವರದಿಗಳನ್ನು ಬಹಳ ವಿರಳವಾಗಿ ಕಂಡರಂತೆ. ಅಲ್ಲಿನ ಪತ್ರಿಕೆಗಳಲ್ಲಿ ಹೆಚ್ಚು ಸಕಾರಾತ್ಮಕ ಮತ್ತು ಅಭಿವೃದ್ಧಿ ಪರ ಸುದ್ದಿಗಳನ್ನು ಓದಿದ್ದಾಗಿ ತಿಳಿಸಿದರು.

ಪತ್ರಿಕೆಗಳು ವಿವಾದಾತ್ಮಕ ಮತ್ತು ಸುಳ್ಳು ಸುದ್ದಿಗಳನ್ನು ಪ್ರಕಟಿಸುತ್ತವೆ ಎಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ, ಪತ್ರಿಕೆಗಳು ಸಮಾಜದಲ್ಲಿ ಏನು ನಡೆಯುತ್ತದೋ ಅದರ ಪ್ರತಿಬಿಂಬ ತಾನೇ. ಕನ್ನಡಿ ತನ್ನೆದುರಿಗೆ ಏನು ಇರುತ್ತದೋ ಅದನ್ನೇ ತೋರುತ್ತದೆ ಅಲ್ಲವೇ?

ಡಾ. ಎಸ್.ಎಲ್.ಭೈರಪ್ಪನವರಂತಹ ಹಿರಿಯ ಮುತ್ಸದ್ಧಿಗಳ ಬುದ್ಧಿವಂತಿಕೆಯ ಮಾತುಗಳನ್ನು ಕೇಳಿ, ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಸ್ವಲ್ಪ ಯೋಚಿಸುವ ವಿಷಯವಿದೆ ಎಂಬ ಅರಿವು, ವಿವೇಕ ಏನಾದರು ಬಂದರೆ ಅದುವೇ ನಮ್ಮ ಅದೃಷ್ಟ.

(ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

email:voice@starofmysore.com

ಕೆಪಿಎಸ್‌ಸಿ ಎಡವಟ್ಟು;190 ಅಭ್ಯರ್ಥಿಗಳಿಗೆ ಆತಂಕ

ಮೈಸೂರು,ಜ.21(ಎಸ್‌ಬಿಡಿ)–ವಾಣಿಜ್ಯ ತೆರಿಗೆ ನಿರೀಕ್ಷಕ ಹುದ್ದೆಗೆ ಮೈಸೂರಿನ ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು ಕೇಂದ್ರದಲ್ಲಿ ಪರೀಕ್ಷೆ ಬರೆದ 190 ಅಭ್ಯರ್ಥಿಗಳು ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ)ದ ಎಡವಟ್ಟಿನಿಂದ ತೀವ್ರ ಆತಂಕಕ್ಕೀಡಾಗಿದ್ದಾರೆ.

ಭಾನುವಾರ ಮಧ್ಯಾಹ್ನ ನಡೆದ ಪತ್ರಿಕೆ–2(ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲಿಷ್, ಕಂಪ್ಯೂಟರ್ ಸೈನ್ಸ್)ರ ಪರೀಕ್ಷೆಯಲ್ಲಿ ನೀಡಿದ ಓಎಂಆರ್ ಪ್ರತಿ ಹಾಗೂ ಅದರೊಳಗಿನ ಕಾರ್ಬನ್ ಕಾಪಿ(ಅಭ್ಯರ್ಥಿ ಪ್ರತಿ)ಯಲ್ಲಿ ಓಎಂಆರ್ ಸಂಖ್ಯೆ ಹಾಗೂ ನೋಂದಣಿ ಸಂಖ್ಯೆಯಲ್ಲಿ ವ್ಯತ್ಯಾಸವಾಗಿದೆ. ಅಭ್ಯರ್ಥಿಯ ಪ್ರವೇಶ ಪತ್ರ(ಹಾಲ್ ಟಿಕೆಟ್)ದಲ್ಲಿರುವ ನೋಂದಣಿ ಸಂಖ್ಯೆ ಕಾರ್ಬನ್ ಕಾಪಿಯಲ್ಲಿ ಸರಿಯಾಗಿ ಮುದ್ರಿತವಾಗಿದೆ. ಆದರೆ ಮೌಲ್ಯಮಾಪನಕ್ಕೆ ಹೋಗುವ ಓಎಂಆರ್‌ನಲ್ಲಿ ತಪ್ಪಾಗಿದೆ. ಅಲ್ಲದೆ ಓಎಂಆರ್ ಹಾಗೂ ಕಾರ್ಬನ್ ಕಾಪಿಯಲ್ಲಿರುವ ಕ್ರಮ ಸಂಖ್ಯೆಯಲ್ಲೂ ವ್ಯತ್ಯಾಸವಿದೆ.



ಮೈಸೂರಿನ ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು ಕೇಂದ್ರದ ಬಳಿ ಜಮಾಯಿಸಿರುವ ವಾಣಿಜ್ಯ ತೆರಿಗೆ ನಿರೀಕ್ಷಕ ಪರೀಕ್ಷಾರ್ಥಿಗಳು.

ಈ ಅಧ್ವಾನದ ನಡುವೆಯೂ ಪರೀಕ್ಷೆ ಬರೆದ 190 ವಿದ್ಯಾರ್ಥಿಗಳು, ಪರೀಕ್ಷೆ ಮುಗಿದ ಬಳಿಕ ಕಾಲೇಜು ಪ್ರಾಂಶುಪಾಲರ ಕಚೇರಿ ಬಳಿ ಜಮಾಯಿಸಿ, ಆತಂಕ ವ್ಯಕ್ತಪಡಿಸಿದರು. ಎಡವಟ್ಟು ಮಾಡಿರುವ ಕೆಪಿಎಸ್‌ಸಿ ವಿರುದ್ಧ ಹರಿಹಾಯ್ದರು. ಅಲ್ಲದೆ ಕೆಪಿಎಸ್‌ಸಿ ಅಧಿಕಾರಿಗಳನ್ನು ಕರೆಸಿ, ಸರಿಯಾದ ಸ್ಪಷ್ಟನೆ ಕೊಡಿಸದೆ ತಮ್ಮನ್ನು ಕೇಂದ್ರದಿಂದ ಸಾಗುಹಾಕಲು ಯತ್ನಿಸುತ್ತಿರುವುದಾಗಿ ಆರೋಪಿಸಿ ಪ್ರಾಂಶುಪಾಲರ ವಿರುದ್ಧವೂ ಬೇಸರ ಹೊರಹಾಕಿದರು.

ವಿಷಯ ತಿಳಿದ ವಿವಿ ಪುರಂ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಪರಿಸ್ಥಿತಿ ಕೈಮೀರದಂತೆ ಎಚ್ಚರ ವಹಿಸಿದರು. ಈ ಸಂಬಂಧ ಕಾಲೇಜು ಪ್ರಾಂಶುಪಾಲರು ಕೆಪಿಎಸ್‌ಸಿಗೆ ಬರೆದಿರುವ ಪತ್ರದ ಪ್ರತಿಯನ್ನು ಪೊಲೀಸರ ಸಮ್ಮುಖದಲ್ಲಿ ಅಭ್ಯರ್ಥಿಗಳಿಗೆ ನೀಡಿ, ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಭರವಸೆ ನೀಡಿದ ನಂತರ ಅಭ್ಯರ್ಥಿಗಳು ಅಲ್ಲಿಂದ ತೆರಳಿದರು.

ಈ ವೇಳೆ ಕೇಂದ್ರದ ಮುಂದೆ ಜಮಾಯಿಸಿದ ಅಭ್ಯರ್ಥಿಗಳು, ಕೆಪಿಎಸ್‌ಸಿ ಹಗರಣಕ್ಕೆ ಇದೊಂದು ಸಾಕ್ಷಿ. ಇಷ್ಟೆಲ್ಲಾ ಸಮಸ್ಯೆಯಾಗಿದ್ದರೂ ಕೆಪಿಎಸ್‌ಸಿಯಿಂದ ಯಾರೂ ಬರಲಿಲ್ಲ. ನಾಮಕಾವಸ್ತೆಗೆ ಪರೀಕ್ಷೆ ನಡೆಸಿ, ಉದ್ಯೋಗಾಕಾಂಕ್ಷಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ಈ ಬಗ್ಗೆ ತನಿಖೆ ನಡೆಸಬೇಕು. ಅಲ್ಲದೆ ಮರು ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿದರು.

ಏನೂ ಸಮಸ್ಯೆಯಾಗದು: ಈ ಗೊಂದಲದ ಬಗ್ಗೆ ಪ್ರತಿಕ್ರಿಯಿಸಿದ ಕಾಲೇಜಿನ ಪ್ರಾಂಶುಪಾಲ ಕೆ.ಟಿ.ಕುಮಾರ್, ನೋಂದಣಿ ಸಂಖ್ಯೆ 230143080ರಿಂದ 230143269 ರವರೆಗೆ ಒಟ್ಟು 190 ಅಭ್ಯರ್ಥಿಗಳ ಮೂಲ ಓಎಂಆರ್ ಶೀಟ್‌ನಲ್ಲಿ ಇರಬೇಕಾಗಿತ್ತು. ಆದರೆ ಇಷ್ಟು ಅಭ್ಯರ್ಥಿಗಳ 9 ಅಂಕಿಯ ನೋಂದಣಿ ಸಂಖ್ಯೆಯಲ್ಲಿ ನಾಲ್ಕನೇ ಅಂಕಿ 1ರ ಬದಲಾಗಿ 0 ಮುದ್ರಿತವಾಗಿದೆ. ಮೂಲ ಓಎಂಆರ್ ಶೀಟ್ ಹಾಗೂ ಕಾರ್ಬನ್ ಪ್ರತಿಯಲ್ಲಿಯ ಕ್ರಮಸಂಖ್ಯೆಗಳು ವ್ಯತ್ಯಾಸವಿರುತ್ತದೆ. ಈ ಬಗ್ಗೆ ಕೆಪಿಎಸ್‌ಸಿ ನಿಯೋಜಿಸಿರುವ ಮೇಲ್ವಿಚಾರಕರ ಸಮ್ಮುಖದಲ್ಲೇ ಕೆಪಿಎಸ್‌ಸಿಗೆ ವರದಿ ನೀಡಿ, ಪತ್ರವನ್ನು ರಿಜಿಸ್ಟರ್ ಪೋಸ್ಟ್ ಮಾಡಿದ್ದೇವೆ. ಸಿಸಿಟಿವಿ ಕ್ಯಾಮರಾದಲ್ಲಿ ಲೈವ್ ರೆಕಾರ್ಡ್ ಆಗಿದೆ. ಹಾಗಾಗಿ ಮೌಲ್ಯಮಾಪನದಲ್ಲಿ ಏನೂ ತೊಂದರೆಯಾಗುವುದಿಲ್ಲ ಎಂದು ತಿಳಿಸಿದರು.

7,900 ಮಂದಿ ಹಾಜರು

ಮೈಸೂರು, ಜ.21(ಎಂಟಿವೈ)– ಕೆಪಿಎಸ್‌ಸಿ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗಳಿಗೆ ಭಾನುವಾರ ಮೈಸೂರಿನ 22 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 7,900ಕ್ಕೂ ಹೆಚ್ಚು ಮಂದಿ ಹಾಜರಾದರೆ, 3,080ಕ್ಕೂ ಹೆಚ್ಚು ಮಂದಿ ಗೈರು ಹಾಜರಾದರು. ಇಂದು ನಡೆಸಿದ ಲಿಖಿತ ಪರೀಕ್ಷೆ ಬರೆಯಲು ಜಿಲ್ಲೆಯಲ್ಲಿ 10,918 ಮಂದಿ ಹೆಸರು ನೋಂದಾಯಿಸಿಕೊಂಡಿದ್ದರು. ಬೆಳಗ್ಗೆ 10ರಿಂದ 12ರವರೆಗೆ ನಡೆದ ಸಾಮಾನ್ಯ ಜ್ಞಾನ ಮತ್ತು ವಿಜ್ಞಾನ ಪರೀಕ್ಷೆಯಲ್ಲಿ 7,902 ಅಭ್ಯರ್ಥಿಗಳು ಹಾಜರಾಗಿ ಪರೀಕ್ಷೆ ಬರೆದರೆ, 3,016 ಅಭ್ಯರ್ಥಿಗಳು ಗೈರು ಹಾಜರಾದರು. ಮಧ್ಯಾಹ್ನ 2ರಿಂದ 4ರವರೆಗೆ ನಡೆದ 2ನೇ ಹಂತದ ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಕಮ್ಯುನಿಕೇಷನ್ ಪರೀಕ್ಷೆಯಲ್ಲಿ 7,838 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, 3,080 ಅಭ್ಯರ್ಥಿಗಳು ಗೈರು ಹಾಜರಾದರು. ಈ ವೇಳೆ ಪರೀಕ್ಷಾ ಕೇಂದ್ರದ ಸುತ್ತ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಎಡಿಸಿ ಲೋಕನಾಥ್, ಡಿಸಿ ಕಚೇರಿಯ ತಹಶೀಲ್ದಾರ್ ಶಿವಪ್ರಸಾದ್ ನೇತೃತ್ವದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಅಕ್ರಮ ನಡೆಯದಂತೆ ಕಟ್ಟೆಚ್ಚರ ವಹಿಸಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

'ದಿ ಗ್ರಾಜ್ಯುಯೇಟ್ಸ್ ಕೋ ಆಪರೇಟಿವ್ ಬ್ಯಾಂಕ್' ಚುನಾವಣೆ
ಎನ್.ಶ್ರೀನಿವಾಸ ಹಾಗೂ ಟಿ.ಎಸ್.ರವಿಶಂಕರ್ ಬಣ ಜಯಭೇರಿ



'ದಿ ಗ್ರಾಜ್ಯುಯೇಟ್ಸ್ ಕೋ ಆಪರೇಟಿವ್ ಬ್ಯಾಂಕ್'ನ 2024–29ರ ಅವಧಿಗೆ ನಡೆದ ಚುನಾವಣೆಯಲ್ಲಿ ಗೆಲುವಿನ ನಗೆ ಬೀರಿದ ಹಾಲಿ ನಿರ್ದೇಶಕರಾದ ಎನ್.ಶ್ರೀನಿವಾಸ ಹಾಗೂ ಟಿ.ಎಸ್.ರವಿಶಂಕರ್ ಅವರ ಬಣ

ಮೈಸೂರು, ಜ.21(ಎಂಕೆ)– ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ 'ದಿ ಗ್ರಾಜ್ಯುಯೇಟ್ಸ್ ಕೋ ಆಪರೇಟಿವ್ ಬ್ಯಾಂಕ್'ನ 2024–29ರ ಅವಧಿಗೆ ನಡೆದ ಚುನಾವಣೆಯಲ್ಲಿ ಹಾಲಿ ನಿರ್ದೇಶಕರಾದ ಎನ್.ಶ್ರೀನಿವಾಸ ಹಾಗೂ ಟಿ.ಎಸ್. ರವಿಶಂಕರ್ ಬಣ ಜಯಭೇರಿ ಬಾರಿಸಿದೆ.

ಹಾರ್ಡ್ವಿಕ್ ಪ್ರೌಢಶಾಲೆಯಲ್ಲಿ ಭಾನುವಾರ 11 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಆರ್.ಅನಂತರಾಮು–1275 ಮತಗಳು (ಸಾಮಾನ್ಯ), ಸಿ.ಕಮಲ್ಲಮ್ಮ–1006 (ಹಿಂದುಳಿದ ವರ್ಗ'ಎ'), ಎಸ್.ಎನ್. ಜಗದೀಶ್–1077(ಸಾಮಾನ್ಯ), ಪ್ರೊ.ಪಿ.ವಿ. ನರಹರಿ–1184(ಸಾಮಾನ್ಯ), ಟಿ.ಎಸ್. ರವಿಶಂಕರ–1180(ಸಾಮಾನ್ಯ), ಕೆ.ವಿ.ಲಕ್ಷ್ಮಿ ದೇವಿ–1056(ಮಹಿಳಾ ಮೀಸಲು), ಎನ್.ಶ್ರೀನಿವಾಸ್–1241(ಸಾಮಾನ್ಯ), ಕೆ.ಜಿ.ಸತೀಶ್–1099(ಸಾಮಾನ್ಯ), ಡಾ.ಸುಜಾತ ಶ್ರೀನಿವಾಸ್ ರಾವ್–988(ಮಹಿಳಾ ಮೀಸಲು), ಎಲ್.ಸೋಮಣ್ಣ–790(ಹಿಂದುಳಿದ ವರ್ಗ'ಬಿ') ಹಾಗೂ ಎಂ.ಎ.ಹೇಮಲತ –1179(ಸಾಮಾನ್ಯ) ಮತಗಳನ್ನು ಪಡೆದು ಜಯಶೀಲರಾಗಿದ್ದಾರೆ ಎಂದು ಬ್ಯಾಂಕ್‌ನ ರಿಟರ್ನಿಂಗ್ ಆಫೀಸರ್ ಮಂಜುನಾಥ್ ತಿಳಿಸಿದರು.

ಅವಿರೋಧ ಆಯ್ಕೆ: ಎಸ್‌ಸಿ ಮೀಸಲು ಅಭ್ಯರ್ಥಿಯಾಗಿ ಸುಜಾತ ವೆಂಕಟರಾಜು ಹಾಗೂ ಎಸ್‌ಟಿ ಮೀಸಲು ಅಭ್ಯರ್ಥಿಯಾಗಿ ಆರ್.ವರಲಕ್ಷ್ಮಿ ಅವಿರೋಧವಾಗಿ ಆಯ್ಕೆಯಾಗಿದ್ದರು. 13 ಸ್ಥಾನಗಳಲ್ಲಿ ಅವಿರೋಧ ಆಯ್ಕೆ ಹೊರತುಪಡಿಸಿ ಉಳಿದ 11 ಸ್ಥಾನಗಳಿಗೆ ನಡೆಯಿತು. ಚುನಾವಣೆ ಫಲಿತಾಂಶದ ಬಳಿಕ ವಿಜೇತರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಶ್ರೀ ರಾಮಾಯಣ ಕನ್ನಡ ಲಿಖಿತ ರಸಪ್ರಶ್ನೆ ಸ್ಪರ್ಧೆ

ಮೈಸೂರು, ಜ.21– ಶ್ರೀ ರಾಮನನ್ನು ನೆನೆಯುವುದು, ಭಜಿಸುವುದು, ಆರಾಧಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಲೇಖಕಿ ಗಾಯತ್ರಿ ಸುಂದರೇಶ್ ಅಭಿಪ್ರಾಯಿಸಿದರು.

ಅಯೋಧ್ಯೆ ಶ್ರೀರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಶ್ರೀ ರಾಮಾಯಣ ಕನ್ನಡ ಲಿಖಿತ ರಸಪ್ರಶ್ನೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಾಹಿತ್ಯ ಹಾಗೂ ಸಂಗೀತ ರೂಪದಲ್ಲಿ ಶ್ರೀರಾಮನನ್ನು ನಿತ್ಯವೂ ನೆನೆಯುವಂತೆ ಮಕ್ಕಳಿಗೆ ಉತ್ತೇಜಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಮಂಡ್ಯದ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್‌ನ ಡಾ.ಕೆ.ಎಸ್.ಕೃಷ್ಣಪ್ಪ ಮಾತನಾಡಿ, ನಮ್ಮ ಸನಾತನ ಸಂಸ್ಕೃತಿಯನ್ನು ಸ್ಮರಿಸುವ ಇಂತಹ ಕೆಲಸಗಳು ಶ್ಲಾಘನೀಯ. ಮಕ್ಕಳಿಗೆ ಬರವಣಿಗೆಯ ಮೂಲಕ ಶ್ರೀರಾಮನನ್ನು ಆರಾಧನೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದು ಪ್ರಶಂಸನೀಯ ಎಂದು ಬಣ್ಣಿಸಿದರು. ಶ್ರೀಮತಿ ನಳಿನಿ ಕೃಷ್ಣಪ್ಪ, ಅಮೇರಿಕಾದಲ್ಲಿನ ಮಕ್ಕಳು ಭಾರತೀಯ ಸಂಸ್ಕೃತಿ, ರಾಮ, ಶಿವ, ವಿಷ್ಣುವಿನ ಬಾಲ್ಯದ ಬಗ್ಗೆ ತಿಳಿಯಲು ಉತ್ಸುಕರಾಗಿರುತ್ತಾರೆ ಎಂದರು. ಇದೇ ವೇಳೆ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳ ವಿಭಾಗದಲ್ಲಿ ಭಾಮತಿ, ಶ್ರಾವ್ಯ ಆರ್.ಕಶ್ಯಪ್, ಜಿ.ಶರಧಿ, ಎಂ.ಶಶಾಂಕ್ ಹಾಗೂ ನವನಿಧ್ ಸೂರ್ಯ, ಹಿರಿಯರ ವಿಭಾಗದಲ್ಲಿ ಧ್ವನಿ, ಅನುರಾಧ, ಜಯಮಾಲ, ಸರೋಜಮ್ಮ ಹಾಗು ಯಶ್ವಂತ್‌ಗೆ ಬಹುಮಾನ ವಿತರಿಸಲಾಯಿತು. ಸಮಾರಂಭದಲ್ಲಿ ರಾಮಕೃಷ್ಣನಗರದ ಯುವ ಮುಖಂಡ ಆರ್.ಕೆ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.



ಅಯೋಧ್ಯೆ ಶ್ರೀರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಶ್ರೀ ರಾಮಾಯಣ ಕನ್ನಡ ಲಿಖಿತ ರಸಪ್ರಶ್ನೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಇಂದು ಶ್ರೀರಾಮನಿಗೆ ವಿಶೇಷ ಪೂಜೆ

ಮೈಸೂರು, ಜ.21– ಮೈಸೂರಿನ ಕೆ.ಜಿ.ಕೊಪ್ಪಲು, ಹೊಸ ಬೀದಿ, ಎರಡನೇ ಕ್ರಾಸ್‌ನ ಶ್ರೀರಾಮ ಸೇವಾ ಸಮಿತಿ ಹಾಗೂ 10 ಜನಗಳ ಗರಡಿ ಶ್ರೀರಾಮ ಮಂದಿರ ಸೇರಿದಂತೆ ಗ್ರಾಮದ ವಿವಿಧ ರಾಮ ಮಂದಿರಗಳಲ್ಲಿ ಸೋಮವಾರ ಶ್ರೀರಾಮದೇವರಿಗೆ ವಿಶೇಷ ಪೂಜೆ ಹಾಗೂ ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮವು ನಡೆಯಲಿದೆ ಎಂದು ಗರಡಿಯ ಯಜಮಾನರುಗಳು ಹಾಗೂ ಯುವಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮಲಲ್ಲಾ ಪ್ರತಿಷ್ಠಾಪನೆಗೆ ಅಪಸ್ವರ ಸಲ್ಲದು
ಸಂಸ್ಕೃತಿ ಚಿಂತಕ ಗ.ನಾ.ಭಟ್ಟ ವಿಷಾದ



ಡಾ.ಎನ್.ಎಂ.ಗಿರಿಜಾಪತಿ ವಿರಚಿತ ರಾಮಾಯಣ ಕಥಾದಾರಿತ ಕಾವ್ಯ 'ಶ್ರೀರಾಮಭಾರತಂ' (ಶ್ರೀಸಾಮಾನ್ಯ ಭಾರತಂ) ಕೃತಿಯ ಕಾವ್ಯಾನುಸಂಧಾನ ಎರಡು ದಿನದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಹಿರಿಯ ಸಾಹಿತಿ, ಸಂಸ್ಕೃತಿ ಚಿಂತಕ ಗ.ನಾ.ಭಟ್ಟ ಉದ್ಘಾಟಿಸಿದರು.

ಮೈಸೂರು, ಜ.21(ಎಸ್‌ಪಿಎನ್)– ಐನೂರು ವರ್ಷಗಳ ಸುದೀರ್ಘ ಸಾಮಾಜಿಕ, ರಾಜಕೀಯ ಮತ್ತು ಕಾನೂನು ಹೋರಾಟದ ನಂತರವೂ ಶ್ರೀರಾಮ ಮಂದಿರದಲ್ಲಿ 'ರಾಮಲಲ್ಲಾ' ಪ್ರತಿಷ್ಠಾಪನೆಗೆ ಕೆಲವರು ಅಪಸ್ವರ ತೆಗೆಯುವುದು ತರವಲ್ಲ ಎಂದು ಹಿರಿಯ ಸಾಹಿತಿ, ಸಂಸ್ಕೃತಿ ಚಿಂತಕ ಗನಾ.ಭಟ್ಟ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಜಿಲ್ಲಾ ಕಸಾಪ, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ನೈಮಿಷ ಫೌಂಡೇಷನ್ ಸಹಯೋಗದೊಂದಿಗೆ ಡಾ.ಎನ್.ಎಂ.ಗಿರಿಜಾಪತಿ ವಿರಚಿತ ರಾಮಾಯಣ ಕಥಾದಾರಿತ ಕಾವ್ಯ 'ಶ್ರೀರಾಮಭಾರತಂ' (ಶ್ರೀಸಾಮಾನ್ಯ ಭಾರತಂ) ಕೃತಿಯ ಕಾವ್ಯಾನುಸಂಧಾನ ಎರಡು ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮಚಂದ್ರ ಮಂದಿರ ಕಟ್ಟಲು ಸುಮಾರು 500 ವರ್ಷಗಳ ಸುದೀರ್ಘದ ಹೋರಾಟವೇ ನಡೆದದೆ. ಅದು ರಾಜಕೀಯ, ಸಾಮಾಜಿಕ ಹಾಗೂ ಕಾನೂನು ಹೋರಾಟದ ನಂತರವೂ ಕೆಲವರು ಅಪಸ್ವರ ತೆಗೆಯುವುದು ತರವಲ್ಲ. ಶ್ರೀರಾಮಮಂದಿರ ಉದ್ಘಾಟನೆಗೆ ಜಗತ್ತಿನ ವಿವಿಧ ದೇಶಗಳಲ್ಲಿ ನೆಲೆಸಿರುವ ಶ್ರೀರಾಮಭಕ್ತರು ಈ ಕ್ಷಣಕ್ಕಾಗಿ ತುದಿಗಾಲಿನಲ್ಲಿ ನಿಂತಿದ್ದಾರೆ ಎಂದರು.

ಇಂತಹ ಐತಿಹಾಸಿಕ ಕ್ಷಣಕ್ಕೆ ಈ ದೇಶವೇ ಒಂದು ಕುಟುಂಬವಾಗಿ ನೋಡುತ್ತಿರುವುದಾಗಿ ಕೆಲವರು, ಶ್ರೀರಾಮ ಹುಟ್ಟಿದ್ದು, ಥೈಲಾಂಡಿನಲ್ಲಿ, ಮಲೇಷಿಯಾದಲ್ಲಿ ಎಂದು ಅಸಂಬದ್ಧವಾಗಿ ಮಾತನಾಡುವುದು ತರವಲ್ಲ. ಮುಂದುವರೆದು ಕೆಲ ರಾಜಕೀಯ ನಾಯಕರು ರಾಮಲಲ್ಲಾ ಮೂರ್ತಿ ಸರಿಯಾಗಿ ಕೆತ್ತನೆ ಮಾಡಿಲ್ಲ. ಮೂರ್ತಿ ಬಾಲರಾಮನ ರೀತಿ ಕಾಣುತ್ತಿಲ್ಲ, ಮಂದಿರ ಉದ್ಘಾಟನಾ ಮೂರ್ತ ಸರಿಯಾಗಿಲ್ಲ. ದೇವಸ್ಥಾನ ಅಪೂರ್ಣವಾಗಿ ಎಂಬ ಕೊಂಕು ಮಾತು ಏಕೆ?. ಅಂದರೆ, ಐನೂರು ವರ್ಷದ ಹೋರಾಟದ ನಂತರವೂ ಕೆಲವರಿಗೆ ಶ್ರೀರಾಮಮಂದಿರ ಅಯೋಧ್ಯೆಯಲ್ಲಿ ನಿರ್ಮಾಣವಾಗುವುದು ಇಷ್ಟವಿಲ್ಲ ಎಂಬುದು ಈ ಮಾತಿಗಳಿಂದ ಗೋಚರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಎರಡು ದಿನ ಕಾಲ ಡಾ.ಎನ್.ಎಂ. ಗಿರಿಜಾಪತಿ ವಿರಚಿತ ಶ್ರೀರಾಮಭಾರತಂ ಕೃತಿಯ ಕಾವ್ಯಾನುಸಂದಾನ ಏರ್ಪಡಿಸಿರುವುದು ಈ ಸಂದರ್ಭಕ್ಕೆ ಔಚಿತ್ಯವಾಗಿದೆ ಎಂದರು.

ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಮಾತನಾಡಿದರು. ವೇದಿಕೆಯಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಇತರರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಕೃಷ್ಣಗಿರಿ ರಾಮಚಂದ್ರ, ವಸಂತ ವೆಂಕಟೇಶ್ ಅವರಿಂದ ಶ್ರೀರಾಮ ಭಾರತಂ ಕಾವ್ಯದ ಗಮಕ ವಾಚನ ನಡೆಸಿಕೊಟ್ಟರು.

4ನೇ ವರ್ಷದ ಪುಣ್ಯಸ್ಮರಣೆ



ಶ್ಯಾಮ್. ಪಿ

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದು:ಖತಪ್ತರು:
ಪತ್ನಿ: ಕಾವ್ಯಶ್ರೀ M.R.
ಮಗ: ಕೃತಿಕ್ S. ಗೌಡ
ಹಾಗೂ ಕುಟುಂಬವರ್ಗದವರು

2ನೇ ವರ್ಷದ ಪುಣ್ಯಸ್ಮರಣೆ



ಹೆಚ್.ಎನ್.ರವಿಕಿರಣ


ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿನ್ನ ನೆನಪಿನಲ್ಲಿರುವ ನಿನ್ನ ತಾಯಿ, ಅಣ್ಣ, ಅತ್ತಿಗೆ, ಮಾಮ ಹಾಗೂ ಪ್ರೀತಿಯ ಗೆಳೆಯರು





ಮೈಸೂರಿನಲ್ಲಿ ಅರ್ಥಪೂರ್ಣವಾಗಿ ನಡೆದ ಮೈಸೂರು ಲಿಟರರಿ ಫೆಸ್ಟ್

ಕೊಡಗಿನ ಐನ್‌ಮನೆಗಳು ನಶಿಸುತ್ತಿರುವ ಬಗ್ಗೆ ಲೇಖಕಿ ಡಾ.ನಂಜಮ್ಮ ಚಿನ್ನಪ್ಪ ಕಳವಳ

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ಮೈಸೂರು ಲಿಟರರಿ ಅಸೋಸಿಯೇಷನ್ ಆಯೋಜಿಸಿದ್ದ ಮೈಸೂರು ಲಿಟರರಿ ಫೆಸ್ಟ್–2024 ಅನ್ನು ಲೇಖಕಿ ಡಾ.ನಂಜಮ್ಮ ಚಿನ್ನಪ್ಪ ಉದ್ಘಾಟಿಸಿದರು. (ಎಡದಿಂದ) ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಗೌರವ ಕಾರ್ಯದರ್ಶಿ ರೆಜಿನಲ್ಡ್ ವೆಸ್ಲಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ.ಬಿ.ಎನ್.ಬಾಲಾಜಿ, ಪ್ರೊ.ನಿರ್ಮಲಾ ಚಂದ್ರಪ್ರಕಾಶ್, ಎ.ಕೆ.ಮೊನ್ನಪ್ಪ, ಪ್ರೊ.ಸಿ.ನಾಗಣ್ಣ ಹಾಗೂ ಅನಿತಾ ವಿಮಲಾ ಬ್ರ್ಯಾಗ್ಸ್ ಅವರನ್ನು ಚಿತ್ರದಲ್ಲಿ ಕಾಣಬಹುದು. (ಬಲಚಿತ್ರ) ಕಾರ್ಯಕ್ರಮ ಉದ್ಘಾಟಿಸಿ ಡಾ.ನಂಜಮ್ಮ ಚಿನ್ನಪ್ಪ ಮಾತನಾಡಿದರು.

ಮೈಸೂರು, ಜ.21(ಬಿಎಲ್‌ಯು)– ಕೊಡಗಿನ ಐನ್‌ಮನೆ (ಪುರಾತನ ಮನೆ)ಗಳು ನಶಿಸಿ ಹೋಗುತ್ತಿರುವ ಬಗ್ಗೆ ಲೇಖಕಿ ಡಾ.ನಂಜಮ್ಮ ಚಿನ್ನಪ್ಪ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ಮೈಸೂರು ಲಿಟರರಿ ಅಸೋಸಿಯೇಷನ್ ಆಯೋಜಿಸಿದ್ದ ಮೈಸೂರು ಲಿಟರರಿ ಫೆಸ್ಟ್– 2024(ಮೈಸೂರು ಸಾಹಿತ್ಯ ಉತ್ಸವ–2024) ಉದ್ಘಾಟಿಸಿ ಮಾತನಾಡಿದ ಅವರು, ಕೊಡಗಿನ ಶೇಕಡ 70 ರಷ್ಟು ಐನ್‌ಮನೆಗಳು ಈಗಾಗಲೇ ನಾಶವಾಗಿವೆ. ಈ ನಿಟ್ಟಿನಲ್ಲಿ ಕೊಡಗಿನ ಪಾರಂಪರಿಕ, ಸಾಂಸ್ಕೃತಿಕತೆಯನ್ನು ಉಳಿಸಿ ಸಂರಕ್ಷಿಸುವ ನಿಟ್ಟಿನಲ್ಲಿ ನಾವೆಲ್ಲಾ ಚಿಂತಿಸಬೇಕಾಗಿದೆ ಎಂದು ಸಲಹೆ ನೀಡಿದರು.

ಕೊಡಗಿನ ಐನ್‌ಮನೆಗಳ ಬಗ್ಗೆ ಪುಸ್ತಕ ಹೊರತಂದಿರುವ ಡಾ.ನಂಜಮ್ಮ ಚಿನ್ನಪ್ಪ, ನಶಿಸಿ ಹೋಗುತ್ತಿರುವ ಐನ್‌ಮನೆಗಳು ಹಾಗೂ ಕೊಡಗಿನ ಭಾಷೆಯ ಬಗ್ಗೆ ಸಮಗ್ರ ವಿವರ ನೀಡಿ, ಇದನ್ನು ಸಂರಕ್ಷಿಸುವ ಅವಶ್ಯವನ್ನು ಒತ್ತಿ ಹೇಳಿದರು.

ಐನ್‌ಮನೆಗಳ ಬಗ್ಗೆ ಪುಸ್ತಕ ಬರೆಯುವ ಸಮಯದಲ್ಲಿ ಕೊಡಗಿನ 800 ಐನ್‌ಮನೆಗಳಿಗೆ ಭೇಟಿ ನೀಡಿದ್ದೆ ಎಂದು ತಿಳಿಸಿದ ಡಾ.ನಂಜಮ್ಮ ಚಿನ್ನಪ್ಪ ಅವರು, ಅತ್ಯಾಕರ್ಷಕವಾದ ಐನ್‌ಮನೆಗಳಲ್ಲಿ ಕೇರಳದ ಮರಗೆಲಸದವರ ಕುಶಲತೆ ಎದ್ದುಕಾಣುತ್ತಿತ್ತು ಎಂದು ವಿವರಿಸಿದರು.

ಹಲವು ವರ್ಷಗಳ ಕಾಲ ಪತಿ ಜೊತೆ ಕೀನ್ಯಾ ದೇಶದಲ್ಲಿದ್ದ ಡಾ.ನಂಜಮ್ಮ ಚಿನ್ನಪ್ಪ ಅವರು, ಭಾರತಕ್ಕೆ ಹಿಂತಿರುಗಿದಾಗ ತಾತನ ಸಾಹಿತ್ಯ ಕೃಷಿ ಮುಂದುವರೆಸಲು ಚಿಂತನೆ ಹೊಂದಿದರು.

ಈ ಬಗ್ಗೆ ವಿವರಿಸಿದ ಅವರು, ತಾತನವರಾದ ನಡಿಕೇರಿಯಂಡ ಚಿನ್ನಪ್ಪನವರು ಕೊಡಗಿನ ಜಾನಪದ, ಸಾಂಸ್ಕೃತಿಕ ಕುರಿತಂತೆ 'ಪಟ್ಟೋಳೆ ಪಳಮೆ' ಎಂಬ ಕನ್ನಡ ಪುಸ್ತಕವನ್ನು ಹೊರತಂದಿದ್ದರು. ಈ ಪುಸ್ತಕವನ್ನು 1924 ರಲ್ಲಿ ನಮ್ಮ ತಾತನವರೇ ಪ್ರಕಟಿಸಿದ್ದರು. ನಂತರ ಮೈಸೂರು ವಿಶ್ವವಿದ್ಯಾನಿಲಯವು ಆ ಪುಸ್ತಕದ ಎರಡನೇ ಆವೃತ್ತಿ ಪ್ರಕಟಿಸಿತ್ತು ಎಂದು ತಿಳಿಸಿದರು.

ನಮ್ಮ ತಾತ ಬರೆದ ಪುಸ್ತಕವನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡಬೇಕೆಂಬ ಮಹತ್ವಾಕಾಂಕ್ಷೆ ನನ್ನ ಹಾಗೂ ನನ್ನ ಪತಿಯದ್ದಾಗಿತ್ತು. ಪಟ್ಟೋಳೆ ಪಳಮೆ ಪುಸ್ತಕ ಕುರಿತು ಆಗಿನ ಸಾಹಿತಿಗಳಾದ ಜೀ.ಶಂ. ಪರಮಶಿವಯ್ಯ ಅವರು ವಿವರಿಸುತ್ತಾ, ಇದೊಂದು ಯಾರೂ ಮಾಡದ ವಿಶೇಷ ಪ್ರಯತ್ನ ಎಂದು ಪ್ರಶಂಸೆ ವ್ಯಕ್ತಪಡಿಸಿದ್ದರು ಎಂದು ಹೇಳಿದರು.

ನಂತರ ಕೊಡವ ಭಾಷೆ ಕುರಿತು ಮಾತನಾಡಿದ ಡಾ.ನಂಜಮ್ಮ ಚಿನ್ನಪ್ಪ, ಕೊಡವ ಭಾಷೆಯನ್ನು ಕನ್ನಡ, ತುಳು, ಮಲೆಯಾಳಂ ಭಾಷೆಯಿಂದ ಎರವಲು ಪಡೆಯಲಾಗಿದೆ ಎಂಬ ವಾದವಿದೆ. ಆದರೆ ಕೊಡವ ಭಾಷೆ ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ ಎಂದು ಸ್ಪಷ್ಟಪಡಿಸಿದರು.

ಕೊಡವ ಭಾಷೆ ಈಗ ಅಳಿವಿನಂಚಿನಲ್ಲಿದೆ. ಅದರಲ್ಲೂ ಮುಖ್ಯವಾಗಿ ಭಾರತದಲ್ಲಿ ಅಳಿವಿನಂಚಿನಲ್ಲಿರುವ ಎರಡು ಭಾಷೆಗಳಲ್ಲಿ ಕೊಡವ ಭಾಷೆ ಕೂಡ ಒಂದಾಗಿದೆ. ಹಾಗೆಯೇ ಕರ್ನಾಟಕದಲ್ಲಿ ಅಳಿವಿನಂಚಿನಲ್ಲಿರುವ 5 ಭಾಷೆಗಳಲ್ಲಿ ಕೊಡವ ಭಾಷೆ ಕೂಡ ಒಂದಾಗಿದೆ. ಜೊತೆಗೆ ಕೊಡವರ ಜನಸಂಖ್ಯೆ 2 ಲಕ್ಷಕ್ಕಿಂತ ಕಡಿಮೆ ಇದೆ. ಆದ ಕಾರಣ ಕೊಡವ ಭಾಷೆಯನ್ನು ಉಳಿಸಿ ಬೆಳೆಸಬೇಕಾದ ಅವಶ್ಯವಿದೆ. ಇಲ್ಲವೆಂದರೆ ಕೊಡವ ಭಾಷೆಗೆ ಉಳಿಗಾಲವಿಲ್ಲ ಎಂದು ಡಾ.ನಂಜಮ್ಮ ಚಿನ್ನಪ್ಪ ಎಚ್ಚರಿಸಿದರು.

ಇದೇ ವೇಳೆ ಚಲನಚಿತ್ರ ಹಾಗೂ ಸಾಂಸ್ಕೃತಿಕ ವಿಮರ್ಶಕ ಪ್ರೊ.ಎನ್.ಮನು ಚಕ್ರವರ್ತಿ ವಿಚಾರ ಮಂಡಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ಉಪಾಧ್ಯಕ್ಷ ಪ್ರೊ.ಜಿ.ರಾಜಗೋಪಾಲ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷರೂ ಆದ ಅರುಣಾಚಲ ಪ್ರದೇಶದ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಅಸೋಸಿಯೇಷನ್ ಕುರಿತು ಮಾತನಾಡಿದರು. ಅಸೋಸಿಯೇಷನ್ ಕಾರ್ಯದರ್ಶಿ ರೆಜಿನಲ್ಡ್ ವೆಸ್ಲಿ ವಂದನಾರ್ಪಣೆ ಮಾಡಿದರು.

ಅತಿಯಾದ ಪ್ರವಾಸೋದ್ಯಮ ಅಭಿವೃದ್ಧಿಯಿಂದ ಪಶ್ಚಿಮಘಟ್ಟದ ಪರಿಸರದ ಮೇಲೆ ದುಷ್ಪರಿಣಾಮ

ಸಮಾಜಶಾಸ್ತ್ರಜ್ಞೆ ಪ್ರೊ.ಇಂದಿರಾ ಎಚ್ಚರಿಕೆ



ಸಮಾಜಶಾಸ್ತ್ರಜ್ಞೆ ಪ್ರೊ.ಇಂದಿರಾ ಮಾತನಾಡುತ್ತಿರುವುದು

ಮೈಸೂರು, ಜ.21(ಬಿಎಲ್‌ಯು)– ಪಶ್ಚಿಮ ಘಟ್ಟದಲ್ಲಿ ಆಗುತ್ತಿರುವ ಮಿತಿ ಮೀರಿದ ಪ್ರವಾಸೋದ್ಯದ ಅಭಿವೃದ್ಧಿಯಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಸಮಾಜಶಾಸ್ತ್ರಜ್ಞೆ ಪ್ರೊ.ಇಂದಿರಾ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಇಂದು ಮೈಸೂರು ಲಿಟರರಿ ಅಸೋಸಿಯೇಷನ್ ಆಯೋಜಿಸಿದ್ದ ಮೈಸೂರು ಲಿಟರರಿ ಫೆಸ್ಟ್– 2024ರಲ್ಲಿ "ಪಶ್ಚಿಮಘಟ್ಟದ ಪರಿಸರ ಪ್ರವಾಸೋದ್ಯಮ– ಯಾರಿಗೆ ಲಾಭ ಮತ್ತು ಯಾರಿಗೆ ನಷ್ಟ" ಎಂಬ ವಿಚಾರದ ಬಗ್ಗೆ ಮಾತನಾಡಿದ ಅವರು, ಪಶ್ಚಿಮಘಟ್ಟದ ಅತಿಯಾದ ಪ್ರವಾಸೋದ್ಯಮ ಬೆಳವಣಿಗೆಯಿಂದ ಸ್ಥಳೀಯರು ಭೂಮಿ ಕಳೆದುಕೊಳ್ಳುತ್ತಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆ ಎಂದು ಎಚ್ಚರಿಸಿದರು.

ಪಶ್ಚಿಮಘಟ್ಟದಲ್ಲಿರುವ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಹಾಗೂ ಜೋಯಿಡಾ ಪ್ರವಾಸಿಗರನ್ನು ಅತ್ಯಾಕರ್ಷಿಸುತ್ತಿದೆ. ವೀಕೆಂಡ್, ಹಬ್ಬಗಳು ಹಾಗೂ ಹೊಸ ವರ್ಷಾಚರಣೆ ವೇಳೆ ದಿನಕ್ಕೆ 50 ಸಾವಿರಕ್ಕೂ ಹೆಚ್ಚು ಜನರು ಇಲ್ಲಿನ ಪ್ರವಾಸಿತಾಣಗಳಿಗೆ ಭೇಟಿ ನೀಡುತ್ತಾರೆ. ಐಟಿ ಬಿಟಿಯವರು ಮೋಜು ಮಸ್ತಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿಗೆ ಹೋಗುತ್ತಿದ್ದಾರೆ ಎಂದು ಹೇಳಿದರು.

ಈ ಪ್ರದೇಶಗಳಲ್ಲಿ 2007 ರಲ್ಲಿ ಕೇವಲ ಒಂದೆರಡು ರೆಸಾರ್ಟ್‌ಗಳಿತ್ತು. ಆದರೆ ಈಗ ಅಲ್ಲಿ 200 ರಿಂದ 300 ರೆಸಾರ್ಟ್‌ಗಳಿವೆ. ಇದರಿಂದ ಅಲ್ಲಿ ಭೂಮಿ ಬೆಲೆ ಗಗನಕ್ಕೇರಿದೆ. ಹೊರ ರಾಜ್ಯದ ಸಿರಿವಂತರು ಅಲ್ಲಿ ಆಸ್ತಿ ಖರೀದಿಸಿ ಹೆಚ್ಚಿನ ರೆಸಾರ್ಟ್‌ಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಇದರಿಂದ ಸ್ಥಳೀಯರು ಭೂಮಿ ಕಳೆದುಕೊಳ್ಳುತ್ತಿದ್ದು, ಇದು ಆತಂಕಕಾರಿ ಬೆಳವಣಿಗೆಗೆಯಾಗಿದೆ ಎಂದು ಪ್ರೊ.ಇಂದಿರಾ ಕಳವಳ ವ್ಯಕ್ತಪಡಿಸಿದರು.

ರೆಸಾರ್ಟ್‌ಗಳಲ್ಲಿ ರಾತ್ರಿ ವೇಳೆ ರೈನ್ ಡ್ಯಾನ್ಸ್, ಎದೆ ಝಲ್ ಎನ್ನಿಸುವ ಕರ್ಕಶ ಸಂಗೀತದಿಂದ ಸುತ್ತಲಿನ ಪರಿಸರದ ಮೇಲೆ ಪರಿಣಾಮ ಬೀರುತ್ತಿದೆ ಇದರಿಂದ ಹುಲಿ ಸೇರಿದಂತೆ ಇತರೆ ಪ್ರಾಣಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸ್ಥಳೀಯರಿಂದ ಕಡಿಮೆ ಬೆಲೆಗೆ ಜೇನು ಖರೀದಿಸಿ ಅದನ್ನು ಹೊರಗೆ ದುಬಾರಿ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಈ ರೀತಿಯಾಗಿ ಸ್ಥಳೀಯರು ಶೋಷಣೆಗೊಳಗಾಗುತ್ತಿದ್ದಾರೆ ಎಂದು ಹೇಳಿದರು.

ದಟ್ಟ ಅರಣ್ಯ ಪ್ರದೇಶದಿಂದ ಆವೃತ್ತವಾಗಿರುವ ಹಸಿರಿನಿಂದ ಕಂಗೊಳಿಸುವ ಪಶ್ಚಿಮಘಟ್ಟಕ್ಕೆ ಯಾವುದೇ ರೀತಿಯಲ್ಲೂ ತೊಂದರೆ ಆಗಬಾರದು. ಅಲ್ಲಿನ ಪರಿಸರ ಸಂರಕ್ಷಣೆ ಮಾಡಬೇಕು. ಈ ನಿಟ್ಟಿನಲ್ಲಿ ಪಶ್ಚಿಮಘಟ್ಟ ಮತ್ತಷ್ಟು ಹಾಳಾಗುವುದನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅತ್ಯವಶ್ಯ ಎಂದು ಪ್ರೊ.ಇಂದಿರಾ ಒತ್ತಿ ಹೇಳಿದರು.

ಪರಿಸರದ ಮೇಲೆ ಆಗುತ್ತಿರುವ ಇಂತಹ ಅಪಾಯಕಾರಿ ಬೆಳವಣಿಗೆ ಬಗ್ಗೆ ಮಾತನಾಡಿದರೆ ಏನಪ್ಪಾ ಇವನು 50–100 ವರ್ಷದ ಭವಿಷ್ಯತ್ತಿನ ಬಗ್ಗೆ ಮಾತನಾಡುತ್ತಾನಲ್ಲ, ಇವನೇನು ಹುಚ್ಚಾನಾ ಎಂದು ಗೇಲಿ ಮಾಡುತ್ತಾರೆ. ಆದರೆ ಈಗಲೇ ಈ ಬಗ್ಗೆ ಎಚ್ಚೆತ್ತುಕೊಳ್ಳದಿದ್ದರೆ ಘೋರ ಪರಿಣಾಮ ಎದುರಿಸಬೇಕಾಗುತ್ತದೆ. ಈಗಾಗಲೇ ಹೆಚ್ಚಾಗುತ್ತಿರುವ ಜಾಗತಿಕ ತಾಪಮಾನ ಮತ್ತಷ್ಟು ದುಷ್ಪರಿಣಾಮ ಬೀರುತ್ತದೆ ಎಂದು ಪ್ರೊ.ಇಂದಿರಾ ಎಚ್ಚರಿಕೆ ನೀಡಿದರು.

ಅನುವಾದ ವಿಶಾಲ ಸಾಂಸ್ಕೃತಿಕ ಪರಿಕಲ್ಪನೆ ಹೊಂದಿದೆ: ಹಿರಿಯ ಕವಿ ಪ್ರೊ.ಹೆಚ್.ಎಸ್.ಶಿವಪ್ರಕಾಶ್



ಅನುರಾಧಾ ನಲಪಟ್



ಹೆಚ್.ಎಸ್.ಶಿವಪ್ರಕಾಶ್

ಮೈಸೂರು,ಜ.21(ಪಿಎಂ)– ಅನುವಾದ ಕೇವಲ ಭಾಷೆ ಮತ್ತು ಸಾಹಿತ್ಯ ವಿಚಾರದಲ್ಲಿ ರೂಪಾಂತರ ಪಡೆಯುವುದಕ್ಕೆ ಮಾತ್ರ ಸೀಮಿತವಲ್ಲ. ಇದು ವಿಶಾಲವಾದ ಸಾಂಸ್ಕೃತಿಕ ಪರಿಕಲ್ಪನೆ ಹೊಂದಿದೆ ಎಂದು ಹಿರಿಯ ಕವಿಯೂ ಆದ ನಾಟಕಕಾರ ಪ್ರೊ.ಹೆಚ್.ಎಸ್.ಶಿವಪ್ರಕಾಶ್ ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಡೆದ ಮೈಸೂರು ಲಿಟರರಿ ಅಸೋಸಿಯೇಷನ್‌ನ 5ನೇ ಆವೃತ್ತಿಯ ಲಿಟರರಿ ಫೆಸ್ಟ್–2024ರಲ್ಲಿ 'ಭಾರತೀಯ ಸಾಹಿತ್ಯ–ಸಂಸ್ಕೃತಿಗಳಲ್ಲಿ ಸೃಜನಶೀಲತೆಯಾಗಿ ಅನುವಾದ (ಟ್ರಾನ್ಸ್‌ಲೇಷನ್ ಆ್ಯಸ್ ಕ್ರಿಯೇಟಿವಿಟಿ ಇನ್ ಇಂಡಿಯನ್ ಲಿಟರರಿ ಕಲ್ಚರ್ಸ್)' ಕುರಿತು ಅವರು ವಿಚಾರ ಮಂಡಿಸಿದರು.

ಪತ್ಯ ಭಾಷಾಂತರ ಸೇರಿದಂತೆ ಅನುವಾದದಲ್ಲಿ ಅನೇಕ ವಿಧಗಳಿವೆ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಒಂದು ಬಗೆಯದಾದರೆ, ಒಂದೇ ಭಾಷೆಯೊಳಗೆ ಅನುವಾದ ಆಗುತ್ತದೆ. ಕುಮಾರವ್ಯಾಸ ಭಾರತವನ್ನು ಹೊಸಗನ್ನಡಕ್ಕೆ ಅನುವಾದ ಮಾಡುವುದನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು ಎಂದು ತಿಳಿಸಿದರು.

ಅದೇ ರೀತಿ ಒಂದು ಕಲಾ ಪ್ರಕಾರದಿಂದ ಮತ್ತೊಂದು ಕಲಾ ಪ್ರಕಾರದಲ್ಲಿ ವಿಷಯವೊಂದು ರೂಪ ಪಡೆಯುವುದು ಅನುವಾದದ ಮತ್ತೊಂದು ಪ್ರಕಾರವೇ ಆಗಿದೆ. ಚಿತ್ರಕಲೆ ಹಿನ್ನೆಲೆಯಲ್ಲಿರುವ ಕಥೆಯೊಂದು ಸಿನಿಮಾವಾದರೆ ಅದು ಒಂದು ಕಲಾ ಪ್ರಕಾರದಿಂದ ಇನ್ನೊಂದು ಕಲಾ ಪ್ರಕಾರಕ್ಕೆ ಆಗುವ ಅನುವಾದ ಆಗುತ್ತದೆ. ಒಂದು ಮಾಧ್ಯಮದಿಂದ ಮತ್ತೊಂದು ಮಾಧ್ಯಮಕ್ಕೂ ಅನುವಾದ ಇರುತ್ತದೆ. ಉದಾಹರಣೆಗೆ, ಅಕ್ಕಮಹಾದೇವಿಯವರ ವಚನದಲ್ಲಿ ಬರುವ ಒಂದು ಚಿತ್ರಣ ಸಿನಿಮಾದ ರೂಪ ಪಡೆದು, ಮಣಿಪುರಿ ಭಾಷೆಯಲ್ಲಿ ನಾಟಕದ ಮೂಲಕ ಅನಾವರಣಗೊಂಡಿತು. ಹೀಗೆ ವಿಶಾಲ ದೃಷ್ಟಿಕೋನ ಹೊಂದಿರುವುದು ಭಾಷಾಂತರದ ಹಿರಿಮೆಯಾಗಿದೆ ಎಂದು ವಿವರಿಸಿದರು.

'ಹೋಮಂಕ್ಯುಲಸ್ (ಲಿಟಲ್ ಮ್ಯಾನ್) ಅಂಡ್ ದಿ ಆರ್ಟ್ ಆಫ್ ಯೋ–ಯೋ ಇಂಗ್' ಕುರಿತು ಚಿತ್ರಕಲಾವಿದರೂ ಆದ ಕವಯತ್ರಿ ಅನುರಾಧಾ ನಲಪಟ್ ಮಾತನಾಡಿದರು. ತಮ್ಮ ಸ್ವರಚಿತ ಕಾವ್ಯ ವಾಚಿಸುತ್ತಲೇ ಸ್ವತಃ ರಚಿಸಿರುವ ಅಮೂರ್ತ ಚಿತ್ರಕಲೆಗಳ ವ್ಯಾಖ್ಯಾನ ಮಂಡಿಸಿದರು. ಆ ಮೂಲಕ ಚಿತ್ರಕಲೆ ಮತ್ತು ಕಾವ್ಯದಲ್ಲಿರುವ ಸೃಜನಶೀಲತೆಯ ಹಂತಗಳನ್ನು ತಿಳಿಸಿ, ಸಮಕಾಲೀನ ಪ್ರಪಂಚದ ಸಂಕೀರ್ಣತೆಯನ್ನೂ ಅನಾವರಣಗೊಳಿಸಿದರು.

ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮಿಗಳ ಪುಣ್ಯಾರಾಧನೆ



ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಪುಣ್ಯಾರಾಧನೆ ಅಂಗವಾಗಿ ಮೈಸೂರಿನ ವೀರನಗೆರೆಯಲ್ಲಿ ಏರ್ಪಡಿಸಿದ್ದ ಪ್ರಸಾದ ವಿನಿಯೋಗಕ್ಕೆ ಕುದೇರು ಮಠಾಧ್ಯಕ್ಷರಾದ ಶ್ರೀ ಗುರುಶಾಂತ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರು, ಜ.21(ಎಸ್‌ಬಿಡಿ)– ಮೈಸೂರಿನ ವೀರನಗೆರೆಯಲ್ಲಿ ತ್ರಿವಿಧ ದಾಸೋಹಿ, ನಡೆದಾಡುವ ದೇವರು ಡಾ.ಶಿವಕುಮಾರ ಸ್ವಾಮೀಜಿ ಪುಣ್ಯಾರಾಧನೆ ಆಚರಿಸಲಾಯಿತು.

ವೀರನಗೆರೆ ವೀರಶೈವ ಮಂಡಳಿ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಕುದೇರು ಮಠಾಧ್ಯಕ್ಷರಾದ ಶ್ರೀ ಗುರುಶಾಂತ ಸ್ವಾಮೀಜಿ ಪಾಲ್ಗೊಂಡು ಶ್ರೀ ಶಿವಕುಮಾರ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಪ್ರಸಾದ ವಿನಿಯೋಗಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಗುರುಶಾಂತ ಶ್ರೀಗಳು, ಶಿವಕುಮಾರ ಸ್ವಾಮೀಜಿಯವರ ಆರೋಗ್ಯಕ್ಕೆ ಅವರ ಜೀವನ ಕ್ರಮವೇ ಕಾರಣವಾಗಿತ್ತು ಮಠದ ಮಕ್ಕಳಿಗೆ ಮಜ್ಜಿಗೆ ಹಾಕದಿರುವುದನ್ನು ಗಮನಿಸಿ, ತಾವು ಹಾಲು ಸೇವಿಸದೆ ನಿರಾಕರಿಸಿದ್ದರು. ನನ್ನನ್ನು ನಂಬಿ ಇಲ್ಲಿರುವ ಸಾವಿರಾರು ಮಕ್ಕಳಿಗೆ ಮಜ್ಜಿಗೆಯೇ ಇಲ್ಲದಿರುವಾಗ ನಾನು ಹಾಲು ಕುಡಿಯಬೇಕೇ? ಎಂದು ನೊಂದು ನುಡಿದಿದ್ದರು. ಅವರು ದೈಹಿಕವಾಗಿ ನಮ್ಮೊಡನೆ ಇಲ್ಲವಾದರೂ ಅವರ ನೆನಪು, ಸೇವಾಕಾರ್ಯ ಎಲ್ಲರ ಮನಸ್ಸಿನಲ್ಲೂ ಅಜರಾಮರವಾಗಿದೆ ಎಂದರು.

ಪುಣ್ಯಾರಾಧನೆ ಅಂಗವಾಗಿ ನಡೆದ ಅನ್ನದಾನದಲ್ಲಿ ಸಾವಿರಾರು ಮಂದಿ ಪ್ರಸಾದ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ ಭಕ್ತಿಗೀತೆ ಕಾರ್ಯಕ್ರಮ ನಡೆಯಿತು. ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್, ಮಂಡಳಿಯ ಹಿರಿಯರಾದ ಸದಾಶಿವಪ್ಪ, ಅಧ್ಯಕ್ಷ ಶ್ರೀಕಂಠಮೂರ್ತಿ, ಬಸವಣ್ಣ, ಪ್ರಸನ್ನ, ಕಂಠಿ, ಷಡಕ್ಷರಿ ಮಲ್ಲಿಕಾರ್ಜುನ, ಬುದ್ಧಿ, ರೇವಣ್ಣ, ಸಿದ್ದಪ್ಪಣ್ಣ, ಮಹದೇವಪ್ಪ, ಪ್ರಕಾಶ್, ಚಂದ್ರಣ್ಣ, ಸತೀಶ್, ಕಿರಣ್, ಸೋಮು, ಚಿದಾನಂದ್, ಅಭಿ, ಶೇಖರ್, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಪರಿಮಳ ಬೀರಲಿದೆ 111 ಅಡಿ ಬೃಹತ್ ಅಗರ್‌ಬತ್ತಿ




ಮೈಸೂರು, ಜ.21– ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೊಂಡಿರುವ ಶ್ರೀ ರಾಮ ಲಲ್ಲಾ ವಿಗ್ರಹ ರೂಪಿಸಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕುಶಲತೆಯನ್ನು ಸೈಕಲ್ ಪ್ಯೂರ್ ಅಗರ್ ಬತ್ತಿ ಸಂಸ್ಥೆ ವಿಶಿಷ್ಟವಾಗಿ ಗೌರವಿಸುತ್ತಿದೆ.

ಇದಕ್ಕಾಗಿ ಸಿದ್ಧಪಡಿಸಿರುವ 111 ಅಡಿಯ ಬೃಹತ್ ಅಗರ್ ಬತ್ತಿಯನ್ನು ಸೋಮವಾರ ಬೆಳಗ್ಗೆ 9.30ಕ್ಕೆ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಬೆಳಗಿಸುವ ಮೂಲಕ ಶ್ರೀ ರಾಮ ಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಶುಭ ಸಂದರ್ಭದಲ್ಲೇ ಶಿಲ್ಪಿಯ ಕೌಶಲ್ಯವನ್ನು ಗೌರವಿಸಲಾಗುತ್ತಿದೆ.

ಅರುಣ್ ಯೋಗಿರಾಜ್ ಅವರ ತಾಯಿ ಶ್ರೀಮತಿ ಸರಸ್ವತಿ ಯೋಗಿರಾಜ್ ಅವರು 111 ಅಡಿ ಅಗರ್ ಬತ್ತಿಯನ್ನು ಬೆಳಗಿಸುವ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲಿದ್ದಾರೆ. ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಶಾಸಕ ಶ್ರೀವತ್ಸ ಮತ್ತಿತರರ ಗಣ್ಯರು ಭಾಗಿಯಾಗಲಿದ್ದಾರೆ. 18 ಮಂದಿ ಕುಶಲಕರ್ಮಿಗಳು ನಿರಂತರ 23 ದಿನ ಶ್ರಮಿಸಿ, ಅಖಂಡ ಜ್ಯೋತಿ ಮಾದರಿಯ ಈ ಬೃಹತ್ ಅಗರ್ ಬತ್ತಿ ಸಿದ್ಧಪಡಿಸಿದ್ದಾರೆ.

ಇಂದು ಸಾಮೂಹಿಕ ಹನುಮಾನ್, ವಿಷ್ಣು ನಮಸ್ಕಾರ

ಮೈಸೂರು, ಜ. 21– ಅಯೋಧ್ಯೆಯಲ್ಲಿ ಶ್ರೀ ರಾಮ ಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮೈಸೂರಿನ ಜೆ.ಸಿ.ಉಪನಗರದ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಗಂಗೋತ್ರಿ ಬಡಾವಣೆಯ ಮಾರುತಿ ದೇವಸ್ಥಾನದಲ್ಲಿ ಸೋಮವಾರ ಬೆಳಗ್ಗೆ 5.30ರಿಂದ 7ರವರೆಗೆ ಸಾಮೂಹಿಕ ಹನುಮಾನ್ ಹಾಗೂ ವಿಷ್ಣು ನಮಸ್ಕಾರ ಹಮ್ಮಿಕೊಳ್ಳಲಾಗಿದೆ.

ಮಹಾಯೋಗಿ ವೇಮನ, ಅಂಬಿಗರ ಚೌಡಯ್ಯ ಇಡೀ ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದ ಮಹಾಪುರುಷರು

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ನಡೆದ ಮಹಾಯೋಗಿ ವೇಮನ ಹಾಗೂ ಅಂಬಿಗರ ಚೌಡಯ್ಯನವರ ಜಯಂತಿಯಲ್ಲಿ ಈ ಇಬ್ಬರು ಮಹನೀಯರ ಫೋಟೋಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಇತರ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಮೈಸೂರು, ಜ. 21(ಎಸ್‌ಬಿಡಿ)– ಮಹಾಯೋಗಿ ವೇಮನ ಹಾಗೂ ನಿಜಶರಣ ಅಂಬಿಗರ ಚೌಡಯ್ಯನವರು ಯಾವುದೇ ಜಾತಿಗೆ ಸೀಮಿತರಾಗದೆ ಇಡೀ ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದ ಮಹಾಪುರುಷರು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಮೈಸೂರು ಜಿಲ್ಲಾಡಳಿತ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಕಲಾಮಂದಿರದಲ್ಲಿ ಭಾನುವಾರ ನಡೆದ ಮಹಾಯೋಗಿ ವೇಮನ ಹಾಗೂ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಹನ್ನೆರಡನೇ ಶತಮಾನದ ಅಂಬಿಗರ ಚೌಡಯ್ಯನವರು ಹಾಗೂ 15ನೇ ಶತಮಾನದ ವೇಮನರ ಚಿಂತನೆಗಳು ಒಂದೇ ಆಗಿದ್ದವು. ಇವರಿಬ್ಬರು ಜಾತಿ ವ್ಯವಸ್ಥೆ ಹಾಗೂ ಮೂಢನಂಬಿಕೆಗಳ ವಿರುದ್ಧ ವಚನ ಸಾಹಿತ್ಯದ ಮೂಲಕ ಅರಿವು ಮೂಡಿಸಿದರು. ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಜನರನ್ನು ಜಾಗೃತಗೊಳಿಸಿದರು. ಸಮಾನತೆ ಬರುವವರೆಗೂ ಸಮಾಜ ಉದ್ಧಾರವಾಗುವುದಿಲ್ಲ ಎಂಬುದನ್ನು ಮನದಟ್ಟು ಮಾಡಿದರು. ಮನುಷ್ಯನ ಮನಃಶುದ್ಧಿಗೆ ಇಂತಹ ಕಾರ್ಯಕ್ರಮಗಳಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು. ಮಹನೀಯರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಪ್ರಾಧ್ಯಾಪಕಿ ಡಾ.ಜ್ಯೋತಿ ಶಂಕರ್ ಮಾತನಾಡಿ, ಆಂಧ್ರದಲ್ಲಿ ಹುಟ್ಟಿದ ವೇಮನರು ಮನುಷ್ಯ ತನಗೆ ಎಷ್ಟು ಬೇಕೋ ಅಷ್ಟು ಸಂಪತ್ತನ್ನು ಮಾತ್ರ ಇಟ್ಟುಕೊಂಡು ಉಳಿದಿದ್ದನ್ನು ಬೇರೆಯವರಿಗೆ ದಾನ ಮಾಡಿ ಎಂದರು. ದೇವರನ್ನು ಏಕೆ ಹುಡುಕಿಕೊಂಡು ಹೋಗುತ್ತೀರಿ. ನಿಮ್ಮಲ್ಲಿಗೇ ದೇವರು ಬರುವ ಹಾಗೆ ಮಾಡಿ. ಉಸಿರಿರುವ ತನಕ ಮನುಷ್ಯನಿಗೆ ಗೌರವ ಸತ್ತಮೇಲೆ ನಮ್ಮ ಜೊತೆ ಯಾರೂ ಬರುವುದಿಲ್ಲ ನಮ್ಮಿಂದಾದ ಒಳ್ಳೆಯದು ಮಾತ್ರ ಉಳಿಯುತ್ತದೆ ಎಂದು ಹೇಳಿದರು.

ಪ್ರೊ.ಹೆಚ್.ಎಂ.ವಸಂತಮ್ಮ ಮಾತನಾಡಿದರು. ಸಮಾರಂಭದಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್, ನಗರಪಾಲಿಕೆ ಉಪ ಆಯುಕ್ತ ಜಿ.ಎಸ್.ಸೋಮಶೇಖರ, ತಹಶೀಲ್ದಾರ್ ಮಹೇಶ್, ಕನ್ನಡ ಚಳವಳಿಗಾರ ತಾಯೂರು ವಿಠಲಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅರುಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಡಿವೈಇಎಸ್ ಬೆಂಗಳೂರು ತಂಡಕ್ಕೆ 'ಹಾಕಿ ಮೈಸೂರು ಇನ್ವಿಟೇಷನ್ ಕಪ್'



'ಹಾಕಿ ಮೈಸೂರು ಇನ್ವಿಟೇಷನ್ ಕಪ್–2024' ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ ಡಿವೈಇಎಸ್ ಬೆಂಗಳೂರು ತಂಡಕ್ಕೆ ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ ಟ್ರೋಫಿ ಹಾಗೂ ನಗದು ಬಹುಮಾನ ನೀಡಿ ಅಭಿನಂದಿಸಿದರು. ಅಂತಾರಾಷ್ಟ್ರೀಯ ಹಿರಿಯ ಹಾಕಿ ಪಟು ಡಾ.ಎ.ಬಿ.ಸುಬ್ಬಯ್ಯ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ನಿವೃತ್ತ ನಿರ್ದೇಶಕ ಡಾ.ಪುಲಿಕೇಶಿ ವೈ ಶೆಟ್ಟಪ್ಪನವರ್, ಸೆಂಟ್ ಫಿಲೋಮಿನಾ ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಕ್ರಿಸ್ಟೋಫರ್, ಹಾಕಿ ಮೈಸೂರು ಅಸೋಸಿಯೇಷನ್ ಅಧ್ಯಕ್ಷ ಕೆ.ಬಿ.ದಿಲೀಪ್ ಮತ್ತಿತರರಿದ್ದರು.

ಮೈಸೂರು,ಜ.21(ಎಂಟಿವೈ, ಎಂಕೆ)– ಹಾಕಿ ಮೈಸೂರು ಅಸೋಸಿಯೇಷನ್ ವತಿಯಿಂದ ನಡೆದ ರಾಜ್ಯಮಟ್ಟದ ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಡಿವೈಇಎಸ್ ಬೆಂಗಳೂರು ತಂಡ 1–0 ಗೋಲುಗಳ ಅಂತರದಿಂದ ಎಜಿಒಆರ್‌ಸಿ ತಂಡವನ್ನು ಮಣಿಸಿ 'ಹಾಕಿ ಮೈಸೂರು ಇನ್ವಿಟೇಷನ್ ಕಪ್–2024' ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ಕಳೆದ ನಾಲ್ಕು ದಿನದಿಂದ ನಡೆಯುತ್ತಿದ್ದ ರಾಜ್ಯಮಟ್ಟದ ಪುರುಷರ ಹಾಕಿ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧೆಡೆಯಿಂದ 12 ತಂಡಗಳು ಪಾಲ್ಗೊಂಡಿದ್ದವು. ಶನಿವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೆಣಸಾಡಿದ್ದ 8 ತಂಡಗಳಲ್ಲಿ ನಾಲ್ಕು ತಂಡಗಳು ಸೆಮಿಫೈನಲ್ ಪ್ರವೇಶಿಸಿದ್ದವು. ಇಂದು ಬೆಳಗ್ಗೆ ನಡೆದ ಎರಡು ಸೆಮಿಫೈನಲ್ ಪಂದ್ಯದಲ್ಲಿ ಜಯಗಳಿಸಿದ ಡಿವೈಇಎಸ್ ಬೆಂಗಳೂರು ಹಾಗೂ ಎಜಿಒಆರ್‌ಸಿ ಬೆಂಗಳೂರು ತಂಡ ಫೈನಲ್ ಪ್ರವೇಶಿಸಿದ್ದವು.

ಭಾನುವಾರ ಮಧ್ಯಾಹ್ನ ನಡೆದ ಫೈನಲ್ ಪಂದ್ಯದಲ್ಲಿ ಜಿದ್ದಾಜಿದ್ದಿನ ಆಟ ಪ್ರದರ್ಶಿಸಿದ ಉಭಯ ತಂಡದ ಆಟಗಾರರು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿದರು. ಹಾಕಿ ಪ್ರಿಯರಲ್ಲಿ ಕುತೂಹಲ ಕೆರಳಿಸಿದ್ದ ಈ ಪಂದ್ಯದಲ್ಲಿ ಡಿವೈಇಎಸ್ ತಂಡದ ಪರವಾಗಿ ಬಿಪಿನ್, ಪಂದ್ಯದ 24ನೇ ನಿಮಿಷದಲ್ಲಿ ಒಂದು ಗೋಲು ಬಾರಿಸಿದರು. ಇದರಿಂದ ಡಿವೈಇಎಸ್ ತಂಡ ಮುನ್ನಡೆ ಸಾಧಿಸಿತು. ಬಳಿಕ ಪಂದ್ಯದ ಕಡೆ ಹಂತದವರೆಗೂ ಉಭಯ ತಂಡಗಳಿಂದ ಯಾವುದೇ ಗೋಲು ದಾಖಲಾಗಲಿಲ್ಲ. ಹೀಗಾಗಿ ಡಿವೈಇಎಸ್ ಬೆಂಗಳೂರು 1–0 ಗೋಲುಗಳ ಅಂತರದಲ್ಲಿ ಜಯಗಳಿಸಿ, 'ಹಾಕಿ ಮೈಸೂರು ಇನ್ವಿಟೇಷನ್ ಕಪ್–2024' ಚಾಂಪಿಯನ್‌ಶಿಪ್ ಪ್ರಶಸ್ತಿ ಪಡೆದುಕೊಂಡಿತು.

ಬಹುಮಾನ ವಿತರಣೆ: ಫೈನಲ್ ಪಂದ್ಯದ ಬಳಿಕ ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು. ಚಾಂಪಿಯನ್ ಆದ ಡಿವೈಇಎಸ್ ಬೆಂಗಳೂರು ತಂಡಕ್ಕೆ ಆಕರ್ಷಕ ಟ್ರೋಫಿ ಜೊತೆಗೆ 2 ಲಕ್ಷ ರೂ. ನಗದು ಬಹುಮಾನ ನೀಡಲಾಯಿತು. ರನ್ನರ್ ಅಪ್ ಆದ ಎಜಿಒಆರ್‌ಸಿ ತಂಡಕ್ಕೆ 1.50 ಲಕ್ಷ ರೂ.ನಗದು ಮತ್ತು ಟ್ರೋಫಿ, ತೃತೀಯ ಸ್ಥಾನ ಪಡೆದ ಹಾಕಿ ಹಾಸನ ತಂಡಕ್ಕೆ 1 ಲಕ್ಷ ರೂ. ಹಾಗೂ ಟ್ರೋಫಿ ಹಾಗೂ ನಾಲ್ಕನೇ ಸ್ಥಾನ ಪಡೆದ ಹಾಕಿ ಮೈಸೂರು ತಂಡಕ್ಕೆ 50 ಸಾವಿರ ರೂ.ನಗದು ಮತ್ತು ಟ್ರೋಫಿ ನೀಡಲಾಯಿತು. ಬೆಸ್ಟ್ ಡಿಫೆಂಡರ್ ಪ್ರಶಸ್ತಿಯನ್ನು ಡಿವೈಇಎಸ್ ಬೆಂಗಳೂರು ತಂಡದ ನಿಲೇಶ್ ಪಡೆದರೆ, ಬೆಸ್ಟ್ ಫಾರ್ವರ್ಡ್ ಪ್ಲೇಯರ್ ಪ್ರಶಸ್ತಿಯನ್ನು ಎಜಿಒಆರ್‌ಸಿ ತಂಡದ ಮೊಹಮ್ಮದ್ ನಯಿಮ್, ಪ್ಲೇಯರ್ ಆಫ್ ಟೂರ್ನಮೆಂಟ್ ಪ್ರಶಸ್ತಿಯನ್ನು ಹಾಕಿ ಮೈಸೂರಿನ ಯಶವಂತ್ ಹಾಗೂ ಬೆಸ್ಟ್ ಗೋಲ್ ಕೀಪರ್ ಪ್ರಶಸ್ತಿಯನ್ನು ಹಾಕಿ ಹಾಸನದ ಕೀರ್ತಿ ಪಡೆದುಕೊಂಡರು.

ಆಸ್ಟ್ರೋಟರ್ಫ್ ಮೈದಾನ ನಿರ್ಮಾಣ: ಈ ವೇಳೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಮೈಸೂರಿನಲ್ಲಿ ರಾಷ್ಟ್ರೀಯ ಕ್ರೀಡೆ ಹಾಕಿ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ಸಂಸದರೊಡಗೂಡಿ ಆಸ್ಟ್ರೋಟರ್ಫ್ ಮೈದಾನ ನಿರ್ಮಾಣ ಮಾಡಲಾಗುವುದು ಎಂದು ಭರವಸೆ ನೀಡಿದರಲ್ಲದೆ ತಾವು ಮಹಾರಾಜ ಕಾಲೇಜು ಪೆವಿಲಿಯನ್ ಮೈದಾನದಲ್ಲಿ ಕುಸ್ತಿ ಆಡುತ್ತಿದ್ದ ದಿನಗಳನ್ನು ಸ್ಮರಿಸಿದರು. ಅರ್ಜುನ ಪ್ರಶಸ್ತಿ ಪುರಸ್ಕೃತ ಅಂತಾರಾಷ್ಟ್ರೀಯ ಹಿರಿಯ ಹಾಕಿ ಪಟು ಡಾ.ಎ.ಬಿ.ಸುಬ್ಬಯ್ಯ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ನಿವೃತ್ತ ನಿರ್ದೇಶಕ ಡಾ.ಪುಲಿಕೇಶಿ ವೈ ಶೆಟ್ಟಪ್ಪನವರ್, ಸೆಂಟ್ ಫಿಲೋಮಿನಾ ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಕ್ರಿಸ್ಟೋಫರ್, ಹಾಕಿ ಮೈಸೂರು ಅಸೋಸಿಯೇಷನ್ ಅಧ್ಯಕ್ಷ ಕೆ.ಬಿ.ದಿಲೀಪ್, ಉಪಾಧ್ಯಕ್ಷ ಕೆ.ಎನ್. ಮುದ್ದಯ್ಯ, ಕಾರ್ಯದರ್ಶಿ ಸಿ.ಟಿ.ಸತೀಶ್, ಸಂತೋಷ್ ಮತ್ತಿತರರಿದ್ದರು.

7ನೇ ವೇತನ ಆಯೋಗದ ವರದಿ ಜಾರಿಗೊಳಿಸುವಂತೆ ಮನವಿ ಸಲ್ಲಿಕೆ



7ನೇ ವೇತನ ಆಯೋಗದ ವರದಿ ಜಾರಿಗೊಳಿಸುವಂತೆ ಒತ್ತಾಯಿಸಿ ವಿವಿಧ ಇಲಾಖೆಯ ಸರ್ಕಾರಿ ನೌಕರರು ವಿರಾಜಪೇಟೆಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಮನವಿ ಸಲ್ಲಿಸಿದರು.

ವಿರಾಜಪೇಟೆ, ಜ.21–7ನೇ ವೇತನ ಆಯೋಗ ಜಾರಿಗೊಳಿಸುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಿ ನೌಕರರ ಸಂಘ, ವಿರಾಜಪೇಟೆ ತಾಲೂಕು ಅನುದಾನಿತ ನೌಕರರು ಹಾಗೂ ವಿವಿಧ ಇಲಾಖೆಯ ಸರ್ಕಾರಿ ನೌಕರರು ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಮನವಿ ಸಲ್ಲಿಸಿದರು.

ವೇತನ ಆಯೋಗದಿಂದ ಶೀಘ್ರವಾಗಿ ವರದಿ ಪಡೆದು ರಾಜ್ಯ ಸರ್ಕಾರಿ ನೌಕರರ ವೇತನ ಭತ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಷ್ಕರಿಸಿ ಆದೇಶ ಹೊರಡಿಸಬೇಕು. ಸರ್ಕಾರ ಈಗಾಗಲೇ ನೀಡಿರುವ ಶೇ.17ರಷ್ಟು ಮಧ್ಯಂತರ ಪರಿಹಾರ ಭತ್ಯೆ ಸೇರಿದಂತೆ ಶೇ.40ರಷ್ಟು ಫಿಟ್‌ಮೆಂಟ್ ಸೌಲಭ್ಯವನ್ನು 2022ರ ಜುಲೈ 1ರಿಂದ ಜಾರಿಗೊಳಿಸಬೇಕು. ಹಳೇ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಬೇಕು. ಎನ್‌ಪಿಎಸ್ ನೌಕರರ ಜೀವನ ನಿರ್ವಹಣೆ ಹಾಗೂ ಸಂಧ್ಯಾಕಾಲದ ಬದುಕು ಅತ್ಯಂತ ಕಷ್ಟದಾಯಕವಾಗಿರುತ್ತದೆ. ಆದ್ದರಿಂದ ಎನ್‌ಪಿಎಸ್ ನೌಕರರನ್ನು ಓಪಿಎಸ್ ವ್ಯಾಪ್ತಿಗೆ ತರುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಮನವಿ ಮಾಡಿದ್ದಾರೆ.

ಈಗಾಗಲೇ ಪಂಜಾಬ್, ರಾಜಸ್ತಾನ, ಛತೀಸ್‌ಗಡ, ಜಾರ್ಖಂಡ್ ಮತ್ತು ಹಿಮಾಚಲಪ್ರದೇಶದ ರಾಜ್ಯಗಳಲ್ಲಿ ಹಳೇ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುವಂತೆ ಹಾಗೂ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಕರ್ನಾಟಕದಲ್ಲೂ ಎನ್‌ಪಿಎಸ್ ಯೋಜನೆಯನ್ನು ರದ್ದು ಪಡಿಸಿ, ಹಳೇ ಯೋಜನೆಯನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಬಿ.ಎಸ್.ಗುರುರಾಜ್, ಕಾರ್ಯದರ್ಶಿ ಬಿ.ಟಿ.ದೇಮಾಜ್, ಖಜಾಂಚಿ ಎ.ಬಿ.ಲಲಿತಾ, ರಾಜ್ಯ ಪರಿಷತ್ ಸದಸ್ಯ ಸುರೇಂದ್ರ, ಜಿಲ್ಲಾಧ್ಯಕ್ಷ ಶ್ರೀನಿವಾಸ್, ಮುಖ್ಯೋಪಧ್ಯಾಯರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಕೆ.ಕುಮಾರ್, ವಿರಾಜಪೇಟೆ ತಾಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೃಷ್ಣಚೈತನ್ಯ, ತಾಲೂಕು ಅನುದಾನಿತ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಧ್ಯಕ್ಷ ಲಾಲ್‌ಕುಮಾರ್ ಹಾಜರಿದ್ದರು.

ಮಡಿಕೇರಿಯಲ್ಲಿ ಗಾಂಧಿ ಸ್ಮಾರಕ ನಿರ್ಮಾಣ

1.60 ಕೋಟಿ ರೂ. ಯೋಜನೆ ಕಾಮಗಾರಿ ಆರಂಭ





ಮಡಿಕೇರಿ, ಜ.21–ರಾಷ್ಟ್ರಪಿತ ಮಹಾತ್ಮ ಗಾಂಧಿಜೀಯ ಚಿತಾಭಸ್ಮಕ್ಕೆ ಗೌರವದ ಸ್ಥಾನ ನೀಡಲು ಜಿಲ್ಲಾಡಳಿತ ನಗರದಲ್ಲಿ 'ಗಾಂಧಿ ಸ್ಮಾರಕ'ದ ನಿರ್ಮಾಣಕ್ಕೆ 1.60 ಕೋಟಿ ರೂ. ಯೋಜನೆ ಸಿದ್ಧಪಡಿಸಿ ಕಾಮಗಾರಿ ಆರಂಭಿಸಿದೆ.

ಮಹಾತ್ಮ ಗಾಂಧಿ ಹುತಾತ್ಮರಾಗಿ 75 ವರ್ಷ ಕಳೆದಿದ್ದು, ಗಾಂಧೀಜಿಯ ನೆನಪಿನ ಕುರುಹಾಗಿ ಅವರ ಚಿತಾಭಸ್ಮ ಮಡಿಕೇರಿಯಲ್ಲಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆಯ ದಿನಗಳನ್ನು ಭಾರತ ಕಂಡಿದ್ದರೂ ಇಲ್ಲಿಯವರೆಗೆ ಮಹಾತ್ಮ ಗಾಂಧಿಜೀಯ ಚಿತಾಭಸ್ಮಕ್ಕೆ ಶಾಶ್ವತ ನೆಲೆ ಸಿಕ್ಕಿಲ್ಲ ಎನ್ನುವ ಕೊರಗು ದೇಶಭಕ್ತರನ್ನು ಕಾಡಿತ್ತು. ಇದೀಗ ಜಿಲ್ಲಾಡಳಿತ 'ಗಾಂಧಿ ಸ್ಮಾರಕ'ದ ನಿರ್ಮಾಣ ಆರಂಭಿಸಿದೆ.

ದೆಹಲಿಯ ರಾಜ್‌ಘಾಟ್ ಮಾದರಿಯಲ್ಲಿ ಮಡಿಕೇರಿಯಲ್ಲೂ ಗಾಂಧಿ ಸ್ಮಾರಕ ನಿರ್ಮಿಸಬೇಕೆಂದು ಕೊಡಗು ಜಿಲ್ಲಾ ಸರ್ವೋದಯ ಸಮಿತಿ ಹಲವು ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದೆ. ಇದರ ಫಲವಾಗಿ ಕಳೆದ ಬಜೆಟ್‌ನಲ್ಲಿ ಸರ್ಕಾರ ನಗರದ ಗಾಂಧಿ ಮೈದಾನದ ಪ್ರದೇಶದಲ್ಲಿ 'ಗಾಂಧಿ ಸ್ಮಾರಕ ಉದ್ಯಾನ' ನಿರ್ಮಾಣಕ್ಕೆ 50 ಲಕ್ಷ ರೂ. ಘೋಷಿಸಿತ್ತು. ಇದಕ್ಕೆ ಪೂರಕವಾಗಿ ಕೆಲ ತಿಂಗಳುಗಳ ಹಿಂದಷ್ಟೇ ಜಿಲ್ಲೆಯಿಂದ ವರ್ಗಾವಣೆಗೊಂಡ ಅಂದಿನ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ 32 ಸೆಂಟ್ ಜಾಗವನ್ನು ಗಾಂಧಿ ಸ್ಮಾರಕಕ್ಕೆ ಮಂಜೂರು ಮಾಡಿದ್ದರು. ಸ್ಮಾರಕ ನಿರ್ಮಾಣಕ್ಕೆ ಅನುಕೂಲವಾಗುವಂತೆ ಕಂದಾಯ ಇಲಾಖೆ ವಶದಲ್ಲಿದ್ದ ಗಾಂಧಿ ಮಂಟಪದ ಜಾಗವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡಲಾಗಿದೆ. ಸರ್ಕಾರ ಬಿಡುಗಡೆ ಮಾಡಿರುವ 50 ಲಕ್ಷ ರೂ.ಅನ್ನು ನಿರ್ಮಿತಿ ಕೇಂದ್ರಕ್ಕೆ ಹಸ್ತಾಂತರಿಸಿ ಕಾಮಗಾರಿಯ ಜವಾಬ್ದಾರಿಯನ್ನು ವಹಿಸಲಾಗಿದೆ. ಈಗಾಗಲೇ ಯೋಜನೆಗೆ ಮಡಿಕೇರಿ ಶಾಸಕ ಡಾ.ಮಂತರ್‌ಗೌಡ ಶಂಕುಸ್ಥಾಪನೆ ನೆರವೇರಿಸಿದ್ದು, ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವ ಭರವಸೆ ನೀಡಿದ್ದಾರೆ.

ಖಜಾನೆಯಲ್ಲಿ ಚಿತಾಭಸ್ಮ: 1934ರ ಫೆ.21ರಿಂದ 3 ದಿನ ಕೊಡಗಿಗೆ ಭೇಟಿ ನೀಡಿದ್ದ ಮಹಾತ್ಮ ಗಾಂಧಿ, ಪ್ರಸ್ತುತ ಇರುವ ಗಾಂಧಿ ಮಂಟಪದ ದಿಬ್ಬದಲ್ಲಿ ಭಾಷಣ ಮಾಡಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಯುವ ಸಮೂಹಕ್ಕೆ ಕರೆ ನೀಡಿದ್ದರು. ಹಿಂದೆ ಈ ಜಾಗವನ್ನು 'ಗಾಂಧಿ ಗುಡ್ಡ' ಎಂದು ಕರೆಯುತ್ತಿದ್ದರು. 1948ರ ಜನವರಿಯಲ್ಲಿ ಗಾಂಧೀಜಿ ಹತ್ಯೆಯಾಗಿ ಅಂತಿಮ ಸಂಸ್ಕಾರವಾದ ನಂತರ ಅವರ ಚಿತಾಭಸ್ಮವನ್ನು ಕೊಡಗಿಗೂ ತರಲಾಗಿತ್ತು. ಸ್ವಾತಂತ್ರ್ಯ ಹೋರಾಟಗಾರ ಕೊಳ್ಳಿಮಾಡ ದೇವಯ್ಯ, ಚಿತಾಭಸ್ಮವನ್ನು ಕೊಡಗಿಗೆ ತಂದು ಒಂದು ಭಾಗವನ್ನು ಕಾವೇರಿ ನದಿಯಲ್ಲಿ ವಿಸರ್ಜಿಸಿದರು. ಉಳಿದ ಭಸ್ಮವನ್ನು ಅಂದಿನಿಂದ ಇಂದಿನವರೆಗೆ ಜಿಲ್ಲಾ ಖಜಾನೆಯಲ್ಲಿರಿಸಿ ಸಂರಕ್ಷಿಸಿಕೊಂಡು ಬರಲಾಗುತ್ತಿದೆ.

ಜಿಲ್ಲಾಡಳಿತ ಮತ್ತು ಕೊಡಗು ಜಿಲ್ಲಾ ಸರ್ವೋದಯ ಸಮಿತಿ ವತಿಯಿಂದ ಪ್ರತಿವರ್ಷ ಜ.30ರಂದು ನಡೆಯುವ ಹುತಾತ್ಮರ ದಿನಾಚರಣೆ ಸಂದರ್ಭ ಚಿತಾಭಸ್ಮವನ್ನು ಖಜಾನೆಯಿಂದ ಗಾಂಧಿ ಮಂಟಪಕ್ಕೆ ಮೆರವಣಿಗೆಯ ಮೂಲಕ ತಂದು ಗಾಂಧಿಜೀಗೆ ಸರ್ವಧರ್ಮ ಪ್ರಾರ್ಥನೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಗುತ್ತದೆ. ಆದರೆ, ಚಿತಾಭಸ್ಮಕ್ಕೆ ಇಷ್ಟು ವರ್ಷಗಳವರೆಗೆ ಶಾಶ್ವತ ನೆಲೆ ಅಥವಾ ಗೌರವದ ಸ್ಥಾನ ನೀಡದೆ ಇರುವ ಬಗ್ಗೆ ಹಲವರಲ್ಲಿ ವಿಷಾದವಿತ್ತು. ಈಗ ಸ್ಮಾರಕ ನಿರ್ಮಾಣಕ್ಕೆ ಕಾಲ ಕೂಡಿ ಬಂದಿದ್ದು, ನೀಲನಕ್ಷೆಯಂತೆ ಯೋಜನೆ ಪೂರ್ಣಗೊಂಡರೆ ಗಾಂಧಿ ಮೈದಾನ ಮತ್ತಷ್ಟು ಆಕರ್ಷಣೀಯಗೊಳ್ಳಲಿದೆ.

ಗಾಂಧಿ ಚಿತ್ರಪಟಗಳು

32 ಸೆಂಟ್‌ನಷ್ಟು ವಿಶಾಲ ಪ್ರದೇಶದಲ್ಲಿ ತಲೆ ಎತ್ತಲಿರುವ 'ಗಾಂಧಿ ಸ್ಮಾರಕ' ಮಹಾತ್ಮನ ಇತಿಹಾಸ ಹೇಳಲಿದೆ. ಆಕರ್ಷಕ ಉದ್ಯಾನ, ಗಾಂಧಿ ಚಿತ್ರಪಟಗಳು ಮತ್ತು ಗ್ರಂಥಾಲಯ ಕೂಡ ಇರಲಿದೆ. ಹೆಸರುವಾಸಿ ಪ್ರವಾಸಿತಾಣ ರಾಜಾಸೀಟ್ ಉದ್ಯಾನದ ರಸ್ತೆಯಲ್ಲೇ ಗಾಂಧಿ ಮೈದಾನವೂ ಇರುವುದರಿಂದ ರಾಜಾಸೀಟ್‌ಗೆ ಆಗಮಿಸುವ ಸಾವಿರಾರು ಪ್ರವಾಸಿಗರನ್ನು 'ಗಾಂಧಿ ಸ್ಮಾರಕ' ಆಕರ್ಷಿಸಲಿದೆ. ಅಲ್ಲದೆ ಭಾವಪೂರ್ಣ ಶ್ರದ್ಧಾಂಜಲಿಗೂ ಪಾತ್ರವಾಗಲಿದೆ.

ದೆಹಲಿಯ ರಾಜ್‌ಘಾಟ್‌ನಲ್ಲಿರುವಂತೆ ಅದ್ಭುತವಾದ ಸ್ಮಾರಕ ನಿರ್ಮಿಸಬೇಕು. ಆ ಮೂಲಕ ಕೊಡಗಿಗೆ ಬರುವ ಸಾವಿರಾರು ಜನರು ಬಾಪೂ ಅವರ ಚಿತಾಭಸ್ಮದ ದರ್ಶನ ಪಡೆದು ಅವರ ಆದರ್ಶಗಳನ್ನು ಪಾಲಿಸುವಂತೆ ಮಾಡಬೇಕಾಗಿದೆ. ಯಾವುದೇ ಕಾರಣಕ್ಕೂ ಕಾಮಗಾರಿ ಅರ್ಧಕ್ಕೆ ನಿಲ್ಲಬಾರದು.
–ಎಂ.ಸಿ.ನಾಣಯ್ಯ, ಮಾಜಿ ಸಚಿವ

ಸರ್ವೋದಯ ಸಮಿತಿಯ ಹಲವು ವರ್ಷಗಳ ಪ್ರಯತ್ನಕ್ಕೆ ಫಲ ಸಿಕ್ಕಿದೆ, ಅನುದಾನ ಕ್ರೋಢೀಕರಣಗೊಂಡು ಶೀಘ್ರ ಯೋಜನೆ ಪೂರ್ಣಗೊಳ್ಳಬೇಕು. ಸುಂದರ ಸ್ಮಾರಕ ನಿರ್ಮಾಣದ ಮೂಲಕ ರಾಷ್ಟ್ರಪಿತ ಮಹಾತ್ಮಗಾಂಧಿಗೆ ಗೌರವ ಅರ್ಪಿಸು ಕಾರ್ಯವಾಗಬೇಕು.
–ಟಿ.ಪಿ.ರಮೇಶ್, ಮಾಜಿ ಅಧ್ಯಕ್ಷ, ಕೊಡಗು ಜಿಲ್ಲಾ ಸರ್ವೋದಯ ಸಮಿತಿ

ಗಾಂಧಿ ಸ್ಮಾರಕ ನಿರ್ಮಾಣಕ್ಕೆ ಶಾಸಕರ ನಿಧಿಯಿಂದ ಅಗತ್ಯ ನೆರವನ್ನು ನೀಡಲಾಗುವುದು. ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು ಹಾಗೂ ನಗರಸಭೆಯ ನೆರವಿನಿಂದ ಆರ್ಥಿಕ ಕ್ರೋಢೀಕರಣದ ಮೂಲಕ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು.
–ಡಾ.ಮಂತರ್‌ಗೌಡ, ಮಡಿಕೇರಿ ಶಾಸಕ

36 ಲಕ್ಷ ಮೌಲ್ಯದ ವಸ್ತುಗಳನ್ನು ದೋಚಿದ್ದ ಖದೀಮನ ಬಂಧನ



36 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಕಳವು ಮಾಡಿದ್ದ ಆರೋಪಿ ಬಂಧಿಸಿರುವ ಅರಕೆರೆ ಪೊಲೀಸರು.

ಮಂಡ್ಯ, ಜ.21– ಸಾವಿನ ಮನೆಗಳನ್ನೇ ಗುರಿಯಾಗಿಸಿಕೊಂಡು 10 ಕಡೆಗಳಲ್ಲಿ 36 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ನಗದು, ಕಾರು ಸೇರಿದಂತೆ ಇನ್ನಿತರ ವಸ್ತುಗಳನ್ನು ಕಳವು ಮಾಡಿದ್ದ ಖದೀಮನನ್ನು ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಾಂಡವಪುರ ತಾಲೂಕಿನ ಅರಳಕುಪ್ಪೆ ಗ್ರಾಮದ ನಿವಾಸಿ, ಪ್ರಸ್ತುತ ಮೈಸೂರಿನಲ್ಲಿ ನೆಲೆಸಿದ್ದ ಮನು ಅಲಿಯಾಸ್ ಶಾಂಬು (23) ಬಂಧಿತ ಆರೋಪಿ. ಜ.6ರಂದು ಅರಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮಹದೇವಪುರದಲ್ಲಿ ಶಿವಕುಮಾರ್ ಮೃತಪಟ್ಟಿದ್ದರು. ಅವರ ಶವ ಸಂಸ್ಕಾರಕ್ಕೆಂದು ಮೃತ ಶಿವಕುಮಾರನ ಅಣ್ಣನ ಮನೆಯವರೆಲ್ಲರೂ ತೆರಳಿದ್ದಾಗ ಮನೆ ಬೀರುವಿನಲ್ಲಿದ್ದ ಒಟ್ಟು 135 ಗ್ರಾಂ ಚಿನ್ನದ ಒಡವೆಗಳು ಕಳ್ಳತನವಾಗಿರುವ ಬಗ್ಗೆ ಅದೇ ದಿನ ನಟರಾಜು ಎಂಬುವರು ಅರಕೆರೆ ಠಾಣೆಗೆ ದೂರು ನೀಡಿದ್ದರು. ಇದೇ ರೀತಿ ಪಾಂಡವಪುರ ವ್ಯಾಪ್ತಿಯ ಆರತಿ ಉಕ್ಕಡ, ಹರವು, ಡಾಮಡಹಳ್ಳಿ ಗ್ರಾಮದಲ್ಲಿ ಪ್ರಕರಣಗಳು ಸಾವಿನ ಮನೆಯಲ್ಲೇ ನಡೆದಿದ್ದವು.

ಈ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ ಎಎಸ್ಪಿ ಎಸ್.ಇ. ಗಂಗಾಧರಸ್ವಾಮಿ ಮಾರ್ಗದರ್ಶನದಲ್ಲಿ ಶ್ರೀರಂಗಪಟ್ಟಣ ಉಪ ವಿಭಾಗದ ಉಪಾಧೀಕ್ಷಕ ಮುರಳಿ ನೇತೃತ್ವದಲ್ಲಿ ಸಿಪಿಐ ಪುನೀತ್, ಅರಕೆರೆ ಎಸ್ಐ ಎಂ.ಆರ್. ಬ್ಯಾಳಿ ನೇತೃತ್ವದಲ್ಲಿ ತಂಡ ರಚಿಸಿ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿತ್ತು.

ಈ ತಂಡ ಕಾರ್ಯಾಚರಣೆ ನಡೆಸಿ ಜ.16ರಂದು ಪಾಂಡವಪುರ ರೈಲ್ವೆ ನಿಲ್ದಾಣದ ಬಳಿ ಆರೋಪಿ ಮನು ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆರೋಪಿಯು ಒಟ್ಟು 10 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿದ್ದಾನೆ. ಕಳ್ಳತನ ಮಾಡಿದ್ದ ಒಡವೆಗಳನ್ನು ಕೆಆರ್‌ಎಸ್ ಮುತ್ತೂಟ್ ಫಿನ್‌ಕಾರ್ಪ್, ಪಾಂಡವಪುರ ಟೌನ್‌ನ ಐಐಎಫ್‌ಎಲ್ ಫೈನಾನ್ಸ್ ಹಾಗೂ ಬನ್ನಂಗಾಡಿ ಗ್ರಾಮದ ಎಂಡಿಸಿಸಿ ಬ್ಯಾಂಕ್‌ನಲ್ಲಿ ಅಡವಿಟ್ಟಿರುವುದಾಗಿ ತಿಳಿಸಿದ್ದಾನೆ.

ಆರೋಪಿಯಿಂದ 521 ಗ್ರಾಂ ತೂಕದ 30.21 ಲಕ್ಷ ಮೌಲ್ಯದ ಚಿನ್ನಾಭರಣ, 3.50 ಲಕ್ಷ ಮೌಲ್ಯದ ಕ್ಯಾಮೆರಾ ಮತ್ತು ಲೆನ್ಸ್‌ಗಳು, 50 ಸಾವಿರ ಮೌಲ್ಯದ ಒಂದು ಬೈಕ್ ಹಾಗೂ 2 ಲಕ್ಷ ಮೌಲ್ಯದ 1 ಕಾರು ಸೇರಿದಂತೆ 36 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಸಿಪಿಐ ಪುನೀತ್, ಅರಕೆರೆ ಎಸ್ಐ ಎಂ.ಆರ್.ಬ್ಯಾಳಿ, ಎಎಸ್ಐ ನಟರಾಜು, ಸಿಬ್ಬಂದಿಗಳಾದ ಸತೀಶ್, ನಾಗೇಂದ್ರ ರಾಜೇಶ್, ಶಿವಪ್ರಸಾದ್, ನಂದಗೋಪಿ, ಶಿವಕುಮಾರ್, ರವೀಶ್, ರವಿಕಿರಣ್, ಲೋಕೇಶ್ ಭಾಗಿಯಾಗಿದ್ದರು.

ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳೆ ಶವಪತ್ತೆ

ಮಂಡ್ಯ, ಜ.21– ಮಹಿಳೆಯೊಬ್ಬರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಪೋಷಕರು ಕೊಲೆ ಶಂಕೆ ವ್ಯಕ್ತಪಡಿಸಿರುವ ಘಟನೆ ಮಂಡ್ಯದ ನೆಹರು ನಗರದ ಪೂರ್ವ ಬಡಾವಣೆಯಲ್ಲಿ ನಡೆದಿದೆ.

ವಿ.ಪದ್ಮ(36) ಮೃತಪಟ್ಟವರು. ರಾಮನಗರ ತಾಲೂಕಿನ ಅಂಕನಹಳ್ಳಿ ಗ್ರಾಮದ ಪದ್ಮ ಅವರನ್ನು 13 ವರ್ಷದ ಹಿಂದೆ ಮಂಡ್ಯದ ಬಣ್ಣ ಬಳಿಯುವ ಕೆಲಸ ಮಾಡುವ ಸಿದ್ದರಾಜು ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಒಂದು ಹೆಣ್ಣು ಹಾಗೂ ಒಂದು ಗಂಡು ಮಗುವಿದೆ. ಹಣಕ್ಕಾಗಿ ನಿತ್ಯ ಪತ್ನಿಗೆ ಸಿದ್ದರಾಜು ಕಿರುಕುಳ ನೀಡುತ್ತಿದ್ದ ಎಂದು ಆರೋಪಿಸಿರುವ ಪದ್ಮ ಕುಟುಂಬಸ್ಥರು ಕೊಲೆ ಮಾಡಿ ನೇಣು ಹಾಕಲಾಗಿದೆ. ಬಳಿಕ ನಿಮ್ಮ ಮಗಳಿಗೆ ಹೃದಯಾಘಾತವಾಗಿದೆ ಎಂದು ಸುಳ್ಳು ಮಾಹಿತಿ ನೀಡಿದ್ದಾನೆ ಎಂದು ಪೊಲೀಸರಿಗೆ ದೂರು ನೀಡಿದ್ದಾರೆ. ಪದ್ಮ ಅವರನ್ನು ತಾಯಿ ಮನೆಗೆ ಕಳುಹಿಸುತ್ತಿರಲಿಲ್ಲ. ಹಣಕ್ಕಾಗಿ ನಿತ್ಯ ಜಗಳವಾಗುತ್ತಿತ್ತು. ಆ ಹಿನ್ನೆಲೆಯಲ್ಲಿ ಕೊಲೆ ನಡೆದಿದೆ ಎಂದು ಆರೋಪಿಸಲಾಗಿದೆ. ಸ್ಥಳಕ್ಕೆ ಪೂರ್ವ ಠಾಣೆ ಪೊಲೀಸರು ಆಗಮಿಸಿ ಪತಿ ಸಿದ್ದರಾಜು ಅವರನ್ನು ವಶಕ್ಕೆ ಪಡೆದು ತನಿಖೆ ಆರಂಭಿಸಿದ್ದಾರೆ.

36.61 ಕೋಟಿ ವೆಚ್ಚದ ಪೈಪ್‌ಲೈನ್ ಕಾಮಗಾರಿಗೆ ಭೂಮಿಪೂಜೆ



36.61 ಕೋಟಿ ರೂ. ವೆಚ್ಚದ ಪೈಪ್‌ಲೈನ್ ಕಾಮಗಾರಿಗೆ ಸಚಿವ ಎನ್.ಚೆಲುವರಾಯಸ್ವಾಮಿ ಭೂಮಿಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ, ಜ.21– ಪಟ್ಟಣದ 23 ವಾರ್ಡ್‌ಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆಗಾಗಿ ಕೇಂದ್ರ ಸರ್ಕಾರದ ಅಮೃತ್–2 ಯೋಜನೆ ಯಡಿ 36.61 ಕೋಟಿ ರೂ. ವೆಚ್ಚದಲ್ಲಿ ಪೈಪ್‌ಲೈನ್ ಕಾಮಗಾರಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಪುರಸಭೆ ಪಕ್ಕದ ಮೈದಾನದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಕೆ.ಆರ್.ಪೇಟೆ ಪುರಸಭೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 36.61 ಕೋಟಿ ರೂ. ವೆಚ್ಚದ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಕೆ.ಆರ್.ಪೇಟೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪಟ್ಟಣವಾಗಿದ್ದು, ಹೊಸಹೊಳಲಿನ 6 ವಾರ್ಡ್‌ಗಳು ಸೇರಿದಂತೆ ಪಟ್ಟಣದಲ್ಲಿ 23 ವಾರ್ಡ್‌ಗಳಿವೆ. 31 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಪಟ್ಟಣದ ಜನತೆಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಅನುಕೂಲವಾಗುವಂತೆ ಹೊಸದಾಗಿ 508 ಮಿಮೀ ಮತ್ತು 273 ಮಿಮೀ ಅಳತೆಯ 5070 ಕಿಮೀ ಉದ್ದದ ಎಂಎಸ್ ಫೀಡರ್ ಕೊಳವೆ ಮಾರ್ಗ ನಿರ್ಮಿಸಲಾಗುವುದು. 90ಮಿಮೀ ನಿಂದ 300 ಮಿಮೀ ವ್ಯಾಸದವರೆಗೆ 73.72 ಕಿಮೀ ಉದ್ದದ ಹೆಚ್‌ಡಿಪಿಇ ಹಾಗೂ ಡಿಐ ವಿತರಣಾ ಮಾರ್ಗ ಅಳವಡಿಸುವ ಮೂಲಕ 5586 ಮನೆಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುವುದು. ಅಲ್ಲದೇ ಹೊಸಹೊಳಲು ಭಾಗದಲ್ಲಿ ಹೊಸದಾಗಿ 5 ಲಕ್ಷ ಲೀಟರ್ ಸಾಮರ್ಥ್ಯದ ಜಲ ಸಂಗ್ರಹಗಾರ ನಿರ್ಮಿಸಲಾಗುವುದು. ಒಂದೂವರೆ ವರ್ಷದೊಳಗೆ ಗುಣಮಟ್ಟದ ಪೈಪ್‌ಲೈನ್ ಕಾಮಗಾರಿ ಕೈಗೊಳ್ಳಬೇಕು ಎಂದು ಗುತ್ತಿಗೆದಾರನಿಗೆ ಸೂಚನೆ ನೀಡಿದರು.

ಹೇಮಾವತಿ ಬಡಾವಣೆ ನಿವೇಶನಗಳ ಸಮಸ್ಯೆ ಬಗೆಹರಿಸಲು ಕ್ರಮ: ಕಳೆದ 20 ವರ್ಷಗಳಿಂದ ಹೇಮಾವತಿ ಬಡಾವಣೆ ನಿವೇಶನಗಳ ಖಾತೆ ಮತ್ತು ಈ–ಸ್ವತ್ತು ಮಾಡುವ ಪ್ರಕ್ರಿಯೆ ಲೋಕಾಯುಕ್ತ ತನಿಖೆಯಿಂದಾಗಿ ನೆನಗುದಿಗೆ ಬಿದ್ದಿತ್ತು. ಮೊದಲ ಹಂತದಲ್ಲಿ 600 ನಿವೇಶನಗಳ ಈ–ಸ್ವತ್ತು ಮಾಡಲು ನಗರಾಭಿವೃದ್ಧಿ ಇಲಾಖೆ ಒಪ್ಪಿಗೆ ನೀಡಿದ್ದರೂ, ಜಿಲ್ಲಾಧಿಕಾರಿಗಳು ಈ–ಸ್ವತ್ತು ಮಾಡುವ ಕಡತಗಳಿಗೆ ಸಹಿ ಮಾಡದೇ ವಾಪಸ್ ಕಳುಹಿಸಿದ್ದಾರೆ. ಈ ಬಗ್ಗೆ ಡಿಸಿ ಅವರಿಗೆ ನಿರ್ದೇಶನ ನೀಡಿ ಹೇಮಾವತಿ ಬಡಾವಣೆ ನಿವೇಶನಗಳ ಖಾತೆ ಬದಲಾವಣೆ ಮತ್ತು ಈ–ಸ್ವತ್ತು ಮಾಡಲು ಕ್ರಮವಹಿಸುವಂತೆ ನಿರ್ದೇಶನ ನೀಡುವಂತೆ ಸದಸ್ಯರಾದ ಪ್ರೇಮಕುಮಾರ್, ಕೆ.ಸಿ.ಮಂಜುನಾಥ್ ಮತ್ತು ಬಸ್ ಸಂತೋಷ್‌ಕುಮಾರ್ ಸಚಿವರಿಗೆ ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕರಾದ ಕೆ.ಬಿ. ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಯುಐಡಿಎಫ್‌ಸಿ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ಕಾಂಗ್ರೆಸ್ ಮುಖಂಡ ವಿಜಯರಾಮೇಗೌಡ, ಜಿಪಂ ಮಾಜಿ ಸದಸ್ಯರಾದ ಬಿ.ನಾಗೇಂದ್ರಕುಮಾರ್, ದೇವರಾಜು, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಆರ್.ಲೋಕೇಶ್, ಪುರಸಭೆ ಮಾಜಿ ಅಧ್ಯಕ್ಷರಾದ ಮಹಾದೇವಿ, ಎನ್.ನಟರಾಜು, ಗಾಯತ್ರಿ, ಸದಸ್ಯರಾದ ಕೆ.ಎಸ್.ಪ್ರಮೋದ್, ಪದ್ಮಾ, ಶುಭಾ, ಇಂದ್ರಾಣಿ, ಗಿರೀಶ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಮೀನಾಕ್ಷಿ, ಶಿವಮ್ಮ, ಇಂಜಿನಿಯರ್ ಮಹದೇವಮೂರ್ತಿ, ಎಇಇ ಗೋವಿಂದ, ನದಾಫ್, ಪುರಸಭೆ ಮುಖ್ಯಾಧಿಕಾರಿ ಸತೀಶ್, ಸಹಾಯಕ ಇಂಜಿನಿಯರ್ ರಜನಿ, ಶಿವಣ್ಣ, ರಾಜಯ್ಯ, ರಾಮಕೃಷ್ಣೇಗೌಡ, ಶಶಿಧರ್, ಕೃಷ್ಣೇಗೌಡ ಸೇರಿದಂತೆ ಇನ್ನಿತರರಿದ್ದರು.

ಒಳಚರಂಡಿ ಯೋಜನೆ ಸಂಪೂರ್ಣಗೊಳಿಸಿ

ಪಟ್ಟಣದಲ್ಲಿ ನೆನಗುದಿಗೆ ಬಿದ್ದಿರುವ ಒಳಚರಂಡಿ ಯೋಜನೆ ಹಾಗೂ ಹಳ್ಳ ಹಿಡಿದಿರುವ ಹೊಸಹೊಳಲು ಮೇಲ್ಸೇತುವೆ ಕಾಮಗಾರಿಯನ್ನು ಸಂಪೂರ್ಣಗೊಳಿಸಿ ಜನರಿಗೆ ಅನುಕೂಲ ಮಾಡಿಕೊಡಿ. ತಾಲೂಕಿನಲ್ಲಿ ನೀರಾವರಿ ಯೋಜನೆಗಳನ್ನು ಮುಂದುವರೆಸಲು ತಕ್ಷಣ 100 ಕೋಟಿ ರೂ. ವಿಶೇಷ ಅನುದಾನ ಬಿಡುಗಡೆ ಮಾಡಿಸಿ ಕೊಡುವಂತೆ ಸಚಿವರಿಗೆ ಶಾಸಕ ಹೆಚ್.ಟಿ.ಮಂಜು ಮನವಿ ಮಾಡಿದರು.

ಕುಡಿತದಿಂದ ಕುಟುಂಬದ ನೆಮ್ಮದಿ ಹಾಳು


ಚಾಮರಾಜನಗರ, ಜ.21–ಕುಡಿತ ಚಟದಿಂದ ಮನೆಗಳಲ್ಲಿ ನೆಮ್ಮದಿ ಹಾಳಾಗುತ್ತದೆ ಎಂದು ನಗರದ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿ ನಿಲಯಪಾಲಕಿ ಸರಸ್ವತಿ ಹೇಳಿದರು.

ನಿಲಯದಲ್ಲಿ ನೆಹರು ಯುವ ಕೇಂದ್ರ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಶ್ರೀ ಏಳು ಮಲೈ ಮಹದೇಶ್ವರ ಜಾನಪದ ಮತ್ತು ರಾಮಸಮುದ್ರ ಸೋಬಾನೆ ಕಲಾವಿದರ ಸಂಘದ ವತಿಯಿಂದ ಜಾಗೃತಿ ದಿನದ ಪ್ರಯುಕ್ತ ಆಯೋಜಿಸಿದ್ದ ಕುಡಿತದ ದುಷ್ಪರಿಣಾಮ ಕುರಿತ ಬೀದಿ ನಾಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕುಡಿತ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ. ಇಂತಹ ಚಟದಿಂದ ಸಮಾಜದಲ್ಲಿ ಗೌರವ ಕಡಿಮೆಯಾಗುತ್ತದೆ. ಸಂಪಾದಿಸಿದ ಹಣವೆಲ್ಲ ಕುಡಿತಕ್ಕೆ ಹೋಗುತ್ತದೆ ಎಂದು ತಿಳಿಸಿದರು.

ನಿಲಯಪಾಲಕಿ ಮಮತಾ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಬ್ಯಾಡ್ಜ್ ವಿತರಿಸಲಾಯಿತು. ನಿಲಯಪಾಲಕಿ ಉಮೇರಾ ಖಾನಂ, ನಾಟಕ ಉಪನ್ಯಾಸಕ ಶ್ರೀಕಾಂತ್, ಕಲಾವಿದರಾದ ಸಂಘದ ಸಂಸ್ಥಾಪಕ ಅಧ್ಯಕ್ಷೆ ಸುಶೀಲಾ ರಾಮಸಮುದ್ರ, ಕಲಾವಿದರಾದ ರಾಜು ಡ್ರಾಮಾ, ಸಿದ್ದರಾಜು, ಆರ್.ಎಂ.ಅಭಿಷೇಕ, ಎಸ್.ಜ್ಯೋತಿ ಹಾಜರಿದ್ದರು.

ತಲಮಲೈನಲ್ಲಿ ಶ್ರೀರಾಮನ ಮಂಡಿ ಗುರುತು

ಮರ್ಯಾದಾ ಪುರುಷೋತ್ತಮ ಬಿಟ್ಟ ಬಾಣಕ್ಕೆ ಎರಡು ಭಾಗವಾದ ಬೆಟ್ಟ



ತಲಮಲೈ ಬೆಟ್ಟದಲ್ಲಿರುವ ಶ್ರೀರಾಮನ ಮಂಡಿಯ ಗುರುತು.



ಚಾಮರಾಜನಗರ ಜಿಲ್ಲೆಗೆ ಹೊಂದಿಕೊಂಡಂತಿರುವ ತಮಿಳುನಾಡಿನ ತಾಳವಾಡಿ ಬಳಿಯ ಶ್ರೀರಾಮರ ಪಾದದ ತಲಮಲೈ ಬೆಟ್ಟ.

● ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಜ.21–ಶ್ರೀರಾಮ ಬಿಟ್ಟ ಬಾಣಕ್ಕೆ ಎರಡಾಯ್ತು ಆ ಬೆಟ್ಟ, ಮರ್ಯಾದಾ ಪುರುಷೋತ್ತಮ ಬಂದು ಹೋದ ಕುರುಹಾಗಿ ಉಳಿಯಿತು ಆತನ ಮಂಡಿ ಗುರುತು. ಇಂದಿಗೂ ಅಲ್ಲಿ ಬೇಡಿದ್ದನ್ನು ಕರುಣಿಸುತ್ತಿದ್ದಾನಂತೆ ದಶರಥನ ಪುತ್ರ, ತಲೆ ಮರೆಯಾಗಿದ್ದು, ಈಗ ತಲಮಲೈಯಾಗಿ ಉಳಿದಿದೆ.

ಹೌದು.. ಗಡಿ ಜಿಲ್ಲೆ ಚಾಮರಾಜನಗರಕ್ಕೆ ಹೊಂದಿಕೊಂಡಂತಿರುವ ಪಕ್ಕದ ತಮಿಳುನಾಡಿನ ತಾಳವಾಡಿಯಿಂದ 10 ನಿಮಿಷದ ಹಾದಿಯಲ್ಲಿದೆ ಮರ್ಯಾದ ಪುರುಷನ ಕುರುಹು ರಾಮರ ಪಾದ. ಶ್ರೀರಾಮಚಂದ್ರ ತನ್ನ ವನವಾಸ ಕಾಲದಲ್ಲಿ ಒಂದು ದಿನ ಅಲ್ಲಿ ವಾಸ್ತವ್ಯ ಹೂಡಿ ನಂತರ ಅಲ್ಲಿಂದ ಮುಂದೆ ಹೊರಡುವ ವೇಳೆ ಶ್ರೀರಾಮನಿಗೆ ತಲ ಎಂಬ ರಾಕ್ಷಸ ಎದುರಾಗುತ್ತಾನೆ. ಆತನನ್ನು ಸಂಹರಿಸಲು ಶ್ರೀರಾಮನ ಹೂಡಿದ ಬಾಣ, ಆತನ ತಲೆಯನ್ನು ಕತ್ತರಿಸಿಕೊಂಡು ಹೋಗುವಾಗ ಅಡ್ಡ ಸಿಕ್ಕ ಬೆಟ್ಟವನ್ನು ಸೀಳಿದೆ ಎನ್ನುವುದು ಇಲ್ಲಿನ ಪ್ರತೀತಿ.

ಪುರಾಣದಲ್ಲಿ ಕೇಳಿ ಬಂದಂತೆ ಇಲ್ಲಿನ ಬೆಟ್ಟದ ಮಧ್ಯದ ಭಾಗ ಕತ್ತರಿಸಿದಂತೆ ಇದೆ. ಬಿಲ್ಲು ಹೂಡುವಾಗ ನೆಲಕ್ಕೆ ಶ್ರೀರಾಮನು ಮಂಡಿಯೂರಿದ ಕುರುಹಾಗಿ ಇಂದಿಗೂ ಅಲ್ಲಿ ಕಪ್ಪು ಶಿಲೆಯೊಂದರಲ್ಲಿ ಕುಳಿ ಬಿದ್ದಿರುವುದನ್ನು ಕಾಣಬಹುದು. ಪ್ರಸ್ತುತ ಅಲ್ಲಿ ಶ್ರೀರಾಮಚಂದ್ರನ ದೇಗುಲವಿದ್ದು, ಪ್ರತಿ ಶನಿವಾರ ಮತ್ತು ವಿಶೇಷ ದಿನಗಳಲ್ಲಿ ಪೂಜೆ ನಡೆಯುತ್ತಿದೆ. ಜಿಲ್ಲೆ ಸೇರಿದಂತೆ ವಿವಿಧ ಭಾಗಗಳಿಂದ ಶ್ರೀರಾಮನ ಭಕ್ತರು ಇಲ್ಲಿಗೆ ಆಗಮಿಸಿ ಶ್ರೀರಾಮ–ಸೀತಾ ಮಾತೆಯ ಪ್ರತಿಮೆಗೆ ಪೂಜೆ ಸಲ್ಲಿಸುತ್ತಾರೆ. ಯಾವುದೇ ಕಾರ್ಯ ಸಿದ್ಧಿಗಾಗಿ ವರ ಬೇಡಿದರೆ ಆತ ನೀಡುತ್ತಾನೆ ಎನ್ನುವುದು ಇಂದಿಗೂ ಇಲ್ಲಿನ ನಂಬಿಕೆ.

ಶ್ರೀರಾಮ ಬಿಟ್ಟ ಬಾಣಕ್ಕೆ ಎರಡಾದ ಬೆಟ್ಟ ರಾಮನ ಕಿಂಡಿ ಎಂದೇ ಹೆಸರಾಗಿದೆ. ಬಾಣ ಬಿಟ್ಟ ಸ್ಥಳವನ್ನು ಶ್ರೀರಾಮರ ಪಾದವೆಂತಲೂ ಕರೆಯುತ್ತಾರೆ. ಸ್ಥಳ ಪುರಾಣದ ಬಗ್ಗೆ ಹೇಳುವ ತಾಳವಾಡಿ ಭಾಗದ ಜನ ತಮ್ಮ ಬೇಕು–ಬೇಡಗಳಿಗಾಗಿ ಶ್ರೀರಾಮರ ಪಾದಕ್ಕೆ ಭೇಟಿ ಕೊಟ್ಟು ಪೂಜೆ ಸಲ್ಲಿಸುತ್ತಿದ್ದಾರೆ.

ಕಾಡಿನ ನಡುವೆ ಇರುವ ಶ್ರೀರಾಮರ ಪಾದದ ಕುರುಹು ಈ ಭಾಗದ ಜನರಿಗೆ ಬಲವಾದ ನಂಬಿಕೆಗೆ ಕಾರಣವಾಗಿದೆ. ಪ್ರತಿ ಶನಿವಾರ, ರಾಮನವಮಿ ಸೇರಿದಂತೆ ಅಮಾವಾಸ್ಯೆ, ಹುಣ್ಣಿಮೆ ದಿನಗಳು ಇಲ್ಲಿನ ವಿಶೇಷ ದಿನವಾಗಿದೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆ ಆಗುತ್ತಿರುವುದರಿಂದ ಜಿಲ್ಲೆಯ ಗಡಿಯಲ್ಲಿರುವ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ ಬಂದು ಹೋದ ಈ ಕುರುಹು ಈಗ ಆಕರ್ಷಣೆಯ ಕೇಂದ್ರ ಬಿಂದುವೂ ಆಗಿದೆ.

ಕಾಡಾನೆಗಳು ಹಾಗೂ ಹುಲಿ ಸಂಚಾರ ಇಲ್ಲಿ ಸಾಮಾನ್ಯವಾಗಿರುವುದರಿಂದ ಏಕಾಂಗಿಯಾಗಿ ತೆರಳಲು ಮತ್ತು ಮುಂಜಾನೆ ಹಾಗೂ ಸಂಜೆ 4 ಗಂಟೆ ಬಳಿಕ ದೇಗುಲ ಭೇಟಿ ಅಪಾಯಕಾರಿಯಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀರಾಮ ಪಾದ ಊರಿದ್ದರಿಂದಲೇ ಇದಕ್ಕೆ ರಾಮರಪಾದ ಅಂತ ಹೆಸರು ಬಂದಿದೆ. ಇಲ್ಲಿಗೆ ಬಂದು ಮಕ್ಕಳು ಹಾಗೂ ಮದುವೆ ಆಗದಿದ್ದವರು. ಹೀಗೆ ಯಾವುದೇ ಹರಕೆಯನ್ನು ಹೊತ್ತರೂ ಈಡೇರುತ್ತದೆ ಎಂಬುದು ಭಕ್ತರ ನಂಬಿಕೆಯಾಗಿದೆ. ಹೂವಿನ ಪ್ರಸಾದ ಕೇಳುವ ಪದ್ಧತಿ ಇದ್ದು, ಹೂ ಬಲಕ್ಕೆ ಬಿದ್ದರೆ ತಕ್ಷಣ ಹರಕೆ ಈಡೇರುತ್ತದೆ. ಎಡಕ್ಕೆ ಬಿದ್ದರೆ ತಡವಾಗುತ್ತದೆ ಎಂಬುದು ಭಕ್ತರ ನಂಬಿಕೆಯಾಗಿದೆ.
–ರಂಗನಾಥ್, ಶ್ರೀರಾಮ ಮಂದಿರದ ಅರ್ಚಕ

ಮರ್ಯಾದಾ ಪುರುಷೋತ್ತಮ ಶ್ರೀರಾಮ ಚಂದ್ರನ ಪಾದ ಈ ನೆಲವನ್ನು ಸ್ಪರ್ಶಿಸಿದೆ. ಇಲ್ಲಿರುವ ಶ್ರೀರಾಮನ ಪಾದ ಹಾಗೂ ಮಂಡಿಯೂರಿ ಬಾಣ ಬಿಟ್ಟ ಕುರುಹು, ಬೆಟ್ಟ ಹೋಳಾಗಿರುವ ದೃಶ್ಯಗಳು ಭಕ್ತರ ಪಾಲಿಗೆ ವಿಸ್ಮಯವಾಗಿದ್ದು. ಈ ಸ್ಥಳ ಪವಿತ್ರ ತಾಣವಾಗಿ ಮಾರ್ಪಟ್ಟಿದೆ.
–ಗೋಪಾಲ್, ಭಕ್ತ

ಕ್ರೀಡಾ ಸಾಧಕರು ವಿವರ ಸಲ್ಲಿಸಲು ಮನವಿ

ಚಾಮರಾಜನಗರ, ಜ.21– ಗಣರಾಜ್ಯೋತ್ಸವದ ಅಂಗವಾಗಿ ಜಿಲ್ಲೆಯಲ್ಲಿ 2023–24ನೇ ಸಾಲಿನಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾಗಿರುವ ಕ್ರೀಡಾಪಟುಗಳನ್ನು ಸನ್ಮಾನಿಸಲಾಗುತ್ತಿದ್ದು, ಸಾಧನೆ ಮಾಡಿರುವ ಜಿಲ್ಲೆಯ ಕ್ರೀಡಾ ಪಟುಗಳು ತಮ್ಮ ವಿವರಗಳನ್ನು ಸಲ್ಲಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮನವಿ ಮಾಡಿದೆ. ಸಾಧಕ ಕ್ರೀಡಾಪಟುಗಳು ತಮ್ಮ ವಿವರಗಳನ್ನು ಜ.23ರ ಸಂಜೆ 5 ಗಂಟೆಯೊಳಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗೆ ದೂ.ಸಂ: 08226–224932 ಅಥವಾ ಮೊ.9844160841 ಸಂಪರ್ಕಿಸಬಹುದು.

ಕಸ್ತೂರಿನಲ್ಲಿ ದೊಡ್ಡಮ್ಮತಾಯಿ ಬಂಡಿ ಜಾತ್ರೆ



ಚಾಮರಾಜನಗರ ತಾಲೂಕಿನ ಕಸ್ತೂರು ದೊಡ್ಡಮ್ಮ ತಾಯಿ ಬಂಡಿ ಜಾತ್ರೆ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಚಾಮರಾಜನಗರ, ಜ.21– ಹದಿನಾರು ಹಳ್ಳಿಗಳ ಬಂಡಿಗಳು ಸೇರುವ ಕಸ್ತೂರು ದೊಡ್ಡಮ್ಮ ತಾಯಿ ಬಂಡಿ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆಯ ಆವರಣದ ತುಂಬೆಲ್ಲಾ ಭಕ್ತರು ನೆರೆದಿದ್ದರು. ಒಂದೊಂದಾಗಿ ಬಂಡಿಗಳು ಜಾತ್ರೆಯಂಗಳಕ್ಕೆ ಆಗಮಿಸುತ್ತಿದಂತೆ ಜಯಘೋಷ ಮೊಳಗುತ್ತಿತ್ತು. ಜಾತ್ರೆಯ ಉದ್ದಕ್ಕೂ ಎತ್ತ ನೋಡಿದರೂ ಜನಜಂಗುಳಿ. ಜಾತ್ರೆಯಲ್ಲಿ ಒಟ್ಟು ಹದಿನಾರು ಹಳ್ಳಿಗಳ ಬಂಡಿಗಳು ಬಂದು ಸೇರಿದವು. ಆದರೆ, ಜಾತ್ರೆಯ ಸಂಭ್ರಮ ಕಸ್ತೂರು, ಮರಿಯಾಲ, ಮರಿಯಾಲದ ಹುಂಡಿ, ಕೆಲ್ಲಂಬಳ್ಳಿ, ಭೋಗಾಪುರ, ಕಿರಗಸೂರು, ದಾಸನೂರು, ಸಪ್ಪಯ್ಯನಪುರ, ಹನಹಳ್ಳಿ, ಮೂಕಹಳ್ಳಿ, ಚಿಕ್ಕಹೊಮ್ಮ, ದೊಡ್ಡಹೊಮ್ಮ, ಅಂಕುಶರಾಯನಪುರ, ತೊರವಳ್ಳಿ, ಪುಟ್ಟಯ್ಯನಹುಂಡಿ, ಹೊನ್ನೇಗೌಡನಹುಂಡಿ, ಬಸವನ ಪುರ ಸೇರಿದಂತೆ 23 ಗ್ರಾಮಗಳಲ್ಲೂ ಮನೆ ಮಾಡಿತ್ತು.

ಬಂಡಿಗಳಲ್ಲಿ ಬಾಳೆಹಣ್ಣು ಗೊನೆ, ಬೃಹತ್ ಗಾತ್ರದ ಹೂವಿನ ಹಾರಗಳನ್ನು ಕಟ್ಟಿ ಸಿಂಗಾರ ಮಾಡಲಾಗಿತ್ತು. ಬಂಡಿಗಳು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಹಾಕಿ, ತೀರ್ಥ ಸಂಪ್ರೋಕ್ಷಣೆ ಮಾಡಿಸಿಕೊಂಡು ಗ್ರಾಮಕ್ಕೆ ತೆರಳುವ ಸಂದರ್ಭದಲ್ಲಿ ನೆರೆದಿದ್ದ ಭಕ್ತರು ಬಂಡಿಗೆ ಕಾಯಿ ಒಡೆದು ಭಕ್ತಿ ಸಮರ್ಪಿಸಿದರು.

ಬಿಗಿ ಬಂದೋಬಸ್ತ್: ತಾಲೂಕು ಆಡಳಿತದಿಂದ ಸಿದ್ಧತೆ ಕೈಗೊಳ್ಳಲಾಗಿತ್ತು. ಜಾತ್ರೆಯ ಆಯಾಕಟ್ಟಿನ ಪ್ರದೇಶಗಳಲ್ಲಿ ಪೊಲೀಸರು ಕಾವಲಿದ್ದು, ದೇವಾಲಯದ ಸುತ್ತಮುತ್ತ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಇಂದು ಅಯೋಧ್ಯೆಯಲ್ಲಿ 50 ತಂಡಗಳಿಂದ ಮೊಳಗಲಿದೆ ಮಂಗಳ ವಾದ್ಯ; ಸಂಜೆ 10 ಲಕ್ಷ ದೀಪಗಳಿಂದ ಕಂಗೊಳಿಸಲಿದೆ ರಾಮ ಮಂದಿರ

ಅಯೋಧ್ಯೆ, ಜ.21– ಅಯೋಧ್ಯೆ ಶ್ರೀರಾಮ ಮಂದಿರ ನಾಳೆ ಲೋಕಾರ್ಪಣೆಗೊಳ್ಳಲಿದೆ. ಗರ್ಭಗುಡಿಯಲ್ಲಿ ಬಾಲರಾಮನ (ರಾಮಲಲ್ಲಾ) ಪ್ರಾಣ ಪ್ರತಿಷ್ಠಾಪನೆ ನಡೆಯಲಿದ್ದು, ಈ ಶುಭ ಸಮಯದಲ್ಲಿ 50 ತಂಡಗಳಿಂದ ಮಂಗಳ ವಾದ್ಯ ಮೊಳಗಲಿದೆ.

ರಾಮ ಮಂದಿರ ಲೋಕಾರ್ಪಣೆ ಹಿನ್ನೆಲೆ ಅಯೋಧ್ಯೆಯಲ್ಲಿ ಸಂಭ್ರಮದ ವಾತಾವರಣ ಮನೆ ಮಾಡಿದೆ. ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನಾ ಸಮಾರಂಭದಲ್ಲಿ ಬೆಳಿಗ್ಗೆ 10 ರಿಂದ ಮಂಗಳ ವಾದ್ಯ ಮೊಳಗಲಿದೆ. ಉತ್ತರ ಪ್ರದೇಶದ ಆದಿವಾಸಿ ಜನಾಂಗದವರ ಜಾನಪದ ವಾದ್ಯಮೇಳ, ಬುಡಕಟ್ಟು ಜನಾಂಗದವರು ಭಾರಿಸುವ ವಾದ್ಯ ಸೇರಿದಂತೆ ವಿವಿಧ ರಾಜ್ಯಗಳ 50ಕ್ಕೂ ಹೆಚ್ಚು ಮನಮೋಹಕ ಸಂಗೀತ ವಾದ್ಯ ತಂಡಗಳು ಭಾಗಿಯಾಗಲಿದ್ದು, ಸುಮಾರು 2 ಗಂಟೆಗಳ ಕಾಲ ಮಂಗಳ ವಾದ್ಯ ಮೊಳಗಲಿದೆ.

ಅಯೋಧ್ಯೆಯಲ್ಲಿ ಲಕ್ಷದೀಪ ವೈಭವ: ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆಯ ಬಳಿಕ ರಾಮಜ್ಯೋತಿ ಬೆಳಗುವ ಮೂಲಕ ದೀಪಾವಳಿ ಆಚರಣೆ ಮಾಡಲಾಗುತ್ತದೆ. ಸಂಜೆ 10 ಲಕ್ಷ ದೀಪಗಳಿಂದ ಅಯೋಧ್ಯೆ ಕಂಗೊಳಿಸಲಿದೆ. ಅಯೋಧ್ಯೆಯ ಮನೆಗಳು, ಅಂಗಡಿಗಳು ಮತ್ತು ಪೌರಾಣಿಕ ಸ್ಥಳಗಳಲ್ಲಿ 'ರಾಮ ಜ್ಯೋತಿ' ಬೆಳಗಿಸಲಾಗುತ್ತದೆ.

ಮಣ್ಣಿನಿಂದ ಮಾಡಿದ ದೀಪಗಳಿಂದ ಅಯೋಧ್ಯೆಯು ಬೆಳಗಲಿದ್ದು, ಸರಯೂ ನದಿಯ ದಡದ ರಾಮ್ ಕಿ ಪಾಡಿಯಲ್ಲಿ ದೀಪ ಬೆಳಗಲಾಗುತ್ತದೆ. ಕನಕ್ ಭವನ, ಹನುಮಾನ್ ಗಡಿ, ಗುಪ್ತರಘಾಟ್, ಸರಯು ಘಾಟ್, ಲತಾ ಮಂಗೇಶ್ಕರ್ ಚೌಕ್, ಮಣಿ ರಾಮ್‌ದಾಸ್ ಕಂಟೋನ್ಮೆಂಟ್ ಸೇರಿದಂತೆ 100 ದೇವಸ್ಥಾನಗಳಲ್ಲಿ ದೀಪ ಬೆಳಗಲಾಗುತ್ತಿದೆ

ಕರ್ನಾಟಕದವರು ಸೇರಿ ಪ್ರಾಣಪ್ರತಿಷ್ಠಾಪನೆಯಲ್ಲಿ 14 ದಂಪತಿ ಭಾಗಿ; ಇವರೇ ಯಜಮಾನರು

ಅಯೋಧ್ಯೆ, ಜ.21– ಭವ್ಯ ರಾಮಮಂದಿರದಲ್ಲಿ ಸೋಮವಾರ ರಾಮಲಲ್ಲಾನಿಗೆ ಪ್ರಾಣಪ್ರತಿಷ್ಠಾಪನೆ ನಡೆಯಲಿದೆ. ಇದಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ. ದೇಶ–ವಿದೇಶಗಳ ಗಣ್ಯರು, ಲಕ್ಷಾಂತರ ಭಕ್ತರು ರಾಮಮಂದಿರ ಉದ್ಘಾಟನೆಗೆ ಸಾಕ್ಷಿಯಾಗಲಿದ್ದಾರೆ. ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಪೂಜೆಯಲ್ಲಿ ಪಾಲ್ಗೊಳ್ಳಲು ದೇಶದ ನಾನಾ ಭಾಗಗಳಿಂದ 14 ದಂಪತಿಗಳಿಗೆ ವಿಶೇಷ ಆಹ್ವಾನ ನೀಡಲಾಗಿದೆ. ಕರ್ನಾಟಕದ ದಂಪತಿಯೂ ಇದ್ದಾರೆ ಎಂಬುದು ವಿಶೇಷವಾಗಿದೆ. ಪೂಜೆಯಲ್ಲಿ ಇವರೇ ಯಜಮಾನರಾಗಿ ಪಾಲ್ಗೊಳ್ಳಲಿದ್ದಾರೆ.

14 ಜೋಡಿಗಳ ಪಟ್ಟಿ ಇಲ್ಲಿದೆ:

ಲಿಂಗರಾಜ್ ಬಸವರಾಜ್ ದಂಪತಿ– ಕರ್ನಾಟಕ, ದಿಲೀಪ್ ವಾಲ್ಮೀಕಿ– ಲಖನೌ, ಅನಿಲ್ ಚೌಧರಿ–ಡೋಮ್ ರಾಜಾ ಕುಟುಂಬ (ಉತ್ತರ ಪ್ರದೇಶ), ಕೈಲಾಶ್ ಯಾದವ್–ಕಾಶಿ, ಅರುಣ್ ಚೌಧರಿ– ಹರಿಯಾಣ, ಕವಿಂದ್ರ ಪ್ರತಾಪ್ ಸಿಂಗ್–ಕಾಶಿ, ರಾಮಚಂದ್ರ ಖರಾಡಿ–ರಾಜಸ್ಥಾನ, ರಾಮ್ ಕುಯಿ ಜಮೀ–ಅಸ್ಸಾಂ, ಗುರುಚರಣ್ ಸಿಂಗ್–ಜೈಪುರ, ಕೃಷ್ಣ ಮೋಹನ್–ಹರ್ದೋಯಿ, ರಮೇಶ್ ಜೈನ್– ಮುಲ್ತಾನಿ, ಆದಲರಸನ್–ತಮಿಳುನಾಡು, ವಿಠಲ್ ಕಾಮನ್ಲೆ– ಮಹಾರಾಷ್ಟ್ರ, ಮಹಾದೇವ್ ರಾವ್–ಲಾತೂರ್

ಮೂರನೇ ಪುಟದಿಂದ

ಇಂದು ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ

ಪ್ರಾಣ ಪ್ರತಿಷ್ಠಾಪನೆ ಸಮಾರಂಭ ಮಧ್ಯಾಹ್ನ 12.15ಕ್ಕೆ ಪ್ರಾರಂಭವಾಗಿ 1 ಗಂಟೆಗೆ ಮುಕ್ತಾಯಗೊಳ್ಳುವ ನಿರೀಕ್ಷೆಯಿದೆ. ಪ್ರಾಣ ಪ್ರತಿಷ್ಠಾಪನೆಯ ಬಳಿಕ ಮೋದಿಯವರು ಆಹ್ವಾನಿತ 7 ಸಾವಿರಕ್ಕೂ ಹೆಚ್ಚು ಗಣ್ಯರು ಹಾಗೂ ಜನ ಸಮೂಹವನ್ನುದ್ದೇಶಿಸಿ ಮಾತನಾಡಲಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳು ದೃಶ್ಯ ಮಾಧ್ಯಮಗಳಲ್ಲಿ ನೇರ ಪ್ರಸಾರವಾಗಲಿದೆ. ರಾಜ ಜನ್ಮಭೂಮಿ ಸಂಕೀರ್ಣದಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳ ಭಾಗವಾಗಿ ನಾಳೆ ಬೆಳಗ್ಗೆಯೇ ಹವನ್ ಕುಂಡ್ ಅರ್ಪಣೆ ಮಾಡಲಾಗುತ್ತದೆ. ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಆಹ್ವಾನಿತರಿಗೆ ಬೆಳಗ್ಗೆ 9 ಗಂಟೆಗೆ ಸ್ಥಳಕ್ಕೆ ಬರಲು ಅವಕಾಶ ನೀಡಲಾಗಿದ್ದು, ಭದ್ರತೆ ಹಿನ್ನೆಲೆಯಲ್ಲಿ ಅತಿಥಿಗಳಿಗೆ ವಿವಿಧ ಸಾಲುಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಪ್ರಧಾನಿ ಮೋದಿಯವರು ಬೆಳಗ್ಗೆ 10.25ಕ್ಕೆ ಅಯೋಧ್ಯೆ ವಿಮಾನ ನಿಲ್ದಾಣ ತಲುಪಲಿದ್ದು, 10.55ಕ್ಕೆ ರಾಮಮಂದಿರಕ್ಕೆ ತಲುಪುವರು. ಪ್ರಾಣ ಪ್ರತಿಷ್ಠಾಪನೆ ಸಮಾರಂಭ 12.15 ರಿಂದ 12.45ರ ನಡುವೆ ನಡೆಯಲಿದ್ದು, 12.30ಕ್ಕೆ ಶ್ರೀರಾಮನಿಗೆ ಕಣ್ಣಿಗೆ ಕಟ್ಟಿರುವ ಬಟ್ಟೆಯನ್ನು ತೆಗೆದ ನಂತರ ಪ್ರಧಾನಿ ಮೋದಿ ಆರತಿ ಬೆಳಗುತ್ತಾರೆ. ಮಧ್ಯಾಹ್ನ 2.15ಕ್ಕೆ ಕುಬೇರ ತೀರದಲ್ಲಿ ಇರುವ ಶಿವ ದೇವಾಲಯದಲ್ಲಿ ಪ್ರಧಾನಿ ಮೋದಿ ಪೂಜೆ ಸಲ್ಲಿಸಲಿದ್ದು, ಸುಮಾರು 4 ಗಂಟೆಗಳ ಕಾಲ ಅಯೋಧ್ಯೆಯಲ್ಲಿ ತಂಗಲಿದ್ದಾರೆ.

ಶ್ರೀರಾಮನ ದರ್ಶನ: ಜ.23 ರಿಂದ ರಾಮ ಮಂದಿರದ ಬಾಗಿಲು ಭಕ್ತರಿಗಾಗಿ ತೆರೆಯಲಾಗುತ್ತಿದ್ದು, ಬೆಳಗ್ಗೆ 7 ರಿಂದ 11.30, ಮಧ್ಯಾಹ್ನ 2 ಗಂಟೆಯಿಂದ ಸಂಜೆ 7ರವರೆಗೆ ಭಕ್ತರ ದರ್ಶನಕ್ಕೆ ಸಮಯ ನಿಗದಿಪಡಿಸಲಾಗಿದೆ.

ಮೂರು ಬಾರಿ ಆರತಿ: ಶ್ರೀರಾಮನಿಗೆ ಪ್ರತಿ ದಿನ ಮೂರು ಬಾರಿ ಆರತಿ ಮಾಡಲಾಗುತ್ತದೆ. ಬೆಳಗ್ಗೆ 6.30ಕ್ಕೆ ಶೃಂಗಾರ ಆರತಿ, ಮಧ್ಯಾಹ್ನ 12ಕ್ಕೆ ಭೋಗ್ ಅರತಿ ಮತ್ತು ಸಂಜೆ 7.30ಕ್ಕೆ ಸಂಧ್ಯಾ ಆರತಿ ಮಾಡಲಾಗುತ್ತದೆ.

ಆರತಿಗೆ ಪಾಸ್ ಬುಕ್ ಮಾಡುವುದು ಹೇಗೆ?: ಲಭ್ಯತೆಯ ಆಧಾರದ ಮೇರೆಗೆ ಭಕ್ತರು ಆನ್‌ಲೈನ್ ಮೂಲಕ ಆರತಿ ಪಾಸ್‌ಗಳನ್ನು ಕೆಳ ಕಂಡಂತೆ ಬುಕ್ ಮಾಡಬಹುದು. ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ, ಪಾಸ್‌ಗಾಗಿ ಲಾಗಿನ್ ಆಗಲು ಮೊಬೈಲ್‌ಗೆ ಓಟಿಪಿ ಬರಲಿದೆ. ಆರತಿ ಅಥವಾ ದರ್ಶನಕ್ಕೆ ಸ್ಲಾಟ್ ಬುಕ್ ಮಾಡಲು 'ಮೈ ಪ್ರೊಫೈಲ್'ಗೆ ನ್ಯಾವಿಗೇಟ್ ಮಾಡಿ, ಬಯಸಿದ ದಿನಾಂಕ ಮತ್ತು ಆರತಿ ಸಮಯವನ್ನು ಆರಿಸಿಕೊಳ್ಳಬಹುದು. ಆರತಿ ಸಮಯಕ್ಕೆ ಮುನ್ನ ದೇವಾಲಯದ ಆವರಣದಲ್ಲಿರುವ ಕೌಂಟರ್‌ನಿಂದ ಪಾಸ್ ಪಡೆಯಬೇಕಾಗುತ್ತದೆ.

ಕಂಗೊಳಿಸುತ್ತಿರುವ ರಾಮಮಂದಿರ





ಹೂವಿನ ಮಾದರಿಗಳಲ್ಲಿ 'ಜೈ ಶ್ರೀ ರಾಮ್' ಅನ್ನು ಚಿತ್ರಿಸುವ ದ್ವಾರಗಳು ಮತ್ತು ರಾತ್ರಿಯಲ್ಲಿ ಗೋಚರಿಸುವ ಪ್ರಕಾಶವು ಪ್ರಾಚೀನ ನಗರದ ಅಂದವನ್ನು ಹೆಚ್ಚಿಸಿದೆ. ರಾಮ ಮಂದಿರ ನಿರ್ಮಾಣವು ಬೃಹತ್ ಮೂಲಸೌಕರ್ಯ ಬೆಳವಣಿಗೆಗೆ ಒಳಗಾಯಿತು. ದೇಶವೇ ರಾಮನ ಹೆಸರನ್ನು ಜಪಿಸುತ್ತಿದೆ ಎಂದು ಉತ್ತರ ಪ್ರದೇಶದ ಉಪ ಮುಖ್ಯ ಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಹೇಳಿದ್ದಾರೆ. ಅಯೋಧ್ಯೆಯ ಬೀದಿಗಳು ಮತ್ತು ಸಣ್ಣ ಮತ್ತು ದೊಡ್ಡ ಕಟ್ಟಡಗಳ ಮೇಲೆ ಕೇಸರಿ ಧ್ವಜಗಳು ರಾರಾಜಿಸುತ್ತಿವೆ. ಲತಾ ಮಂಗೇಶ್ಕರ್ ಚೌಕ್‌ನಲ್ಲಿ ರಾಮನ ಜೊತೆಗೆ ರಾಮಮಂದಿರದ ಕಟೌಟ್‌ಗಳನ್ನು ಹಾಕಲಾಗಿದೆ.

ಪಟ್ಟಣವಾಗಿದ್ದ ಅಯೋಧ್ಯೆ ಈಗ ಹೊಸ ಮೂಲಸೌಕರ್ಯ ಮತ್ತು ಧಾರ್ಮಿಕ ಕೇಂದ್ರ ವಾಗಿದೆ. ಬಹುವರ್ಣದ ಹೂವುಗಳಿಂದ ಅಯೋಧ್ಯೆ ಪಟ್ಟಣವನ್ನು ಅಲಂಕರಿಸಲಾಗಿದೆ ಮತ್ತು ಧ್ವನಿವರ್ಧಕಗಳಿಂದ ರಾಮನ ಭಕ್ತಿಗೀತೆಗಳನ್ನು ಹಾಕಲಾಗಿದೆ ಮತ್ತು ಭಗವಾನ್ ರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಾನ್ ವೇಷಗಳನ್ನು ಧರಿಸಿದ ಜನರು ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ, ಸಂಭ್ರಮಪಡುತ್ತಿದ್ದಾರೆ.

ಇಂದು ಸರ್ಕಾರಿ ರಜೆ ಇಲ್ಲ

ರಾಮನ ದೇವಸ್ಥಾನ ಉದ್ಘಾಟನೆ ಮಾಡುತ್ತಿದ್ದೇನೆ. ಕಾರ್ಯಕ್ರಮಕ್ಕೆ ನನಗೆ ಆಹ್ವಾನ ನೀಡಿದ್ದಾರೆ. ಹೀಗಾಗಿ ದೇಗುಲ ಉದ್ಘಾಟಿಸುತ್ತೇನೆ ಎಂದು ಹೇಳಿದರು.

ರಾಮಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಕೋಟ ಶ್ರೀನಿವಾಸ್ ಪೂಜಾರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದರು. ಅಲ್ಲದೇ ಹಿಂದೂಪರ ಸಂಘಟನೆಗಳು, ಬೆಂಗಳೂರು ವಕೀಲರ ಸಂಘವು ಸಹ ರಜೆ ನೀಡುವಂತೆ ಮನವಿ ಮಾಡಿತ್ತು. ಆದರೆ ಇದೀಗ ಅಂತಿಮವಾಗಿ ಸಿದ್ದರಾಮಯ್ಯನವರು ರಜೆ ಘೋಷಣೆ ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಮೈಸೂರು ಫೆಸ್ಟ್ ಪೋಸ್ಟರ್ ಬಿಡುಗಡೆ

ಡಿಸಿ, ಪೊಲೀಸ್ ಆಯುಕ್ತರಿಂದ ಸ್ಥಳ ಪರಿಶೀಲನೆ





ಮೈಸೂರು ಫೆಸ್ಟ್ ನಡೆಯುವ ಮೈಸೂರು ವಿಶ್ವವಿದ್ಯಾನಿಲಯದ ಆವರಣದ ಕ್ಲಾಕ್ ಟವರ್ ಹಾಗೂ ಬಯಲು ರಂಗಮಂದಿರದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪೊಲೀಸ್ ಆಯುಕ್ತ ಬಿ.ರಮೇಶ್ ನೇತೃತ್ವದಲ್ಲಿ ವಿವಿಧ ಅಧಿಕಾರಿಗಳ ತಂಡ ಭಾನುವಾರ ಭೇಟಿ ನೀಡಿ, ಸ್ಥಳ ಪರಿಶೀಲಿಸಿತು. ಮತ್ತೊಂದು ಚಿತ್ರದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ 'ಮೈಸೂರು ಫೆಸ್ಟ್' ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು, ಜ.21(ಎಂಟಿವೈ)– ಮೈಸೂರಿನ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನ ವಿವಿಧೆಡೆ ಪ್ರವಾಸೋದ್ಯಮ ಇಲಾಖೆ ಜ. 26ರಿಂದ 28ರವರೆಗೆ ಆಯೋಜಿಸಿರುವ 'ಮೈಸೂರು ಫೆಸ್ಟ್–2024' ಕಾರ್ಯಕ್ರಮದ ಸಿದ್ಧತೆಯನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಪೊಲೀಸ್ ಆಯುಕ್ತ ರಮೇಶ್ ಬಾನೂತ್ ಪರಿಶೀಲಿಸಿ, ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ಲಾಕ್ ಟವರ್ ಹಾಗೂ ಬಯಲುರಂಗ ಮಂದಿರಕ್ಕೆ ಭಾನುವಾರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ತೆರಳಿ ಸ್ಥಳ ಪರಿಶೀಲಿಸಿದರು. ಅಲ್ಲದೆ, ಜ.26ರಿಂದ 28ರವರೆಗೆ ನಡೆಯುವ ಕಾರ್ಯಕ್ರಮ ವೀಕ್ಷಣೆಗೆ ಬರುವವರು ವಾಹನ ನಿಲುಗಡೆ ಮಾಡಬೇಕಾದ ಸ್ಥಳ, ಯಾವ ಗೇಟ್‌ನಿಂದ ಪ್ರವೇಶ, ನಿರ್ಗಮನದ ಗೇಟ್, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸುವ ಸಂಬಂಧ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

- ಜ. 26ರಂದು ಬೆಳಗ್ಗೆ 8ರಿಂದ ರಾತ್ರಿ 8ವರೆಗೆ ಕ್ಲಾಕ್ ಟವರ್ ಬಳಿ 'ಚಿತ್ರಸಂತೆ'
- ಜ.27ರಂದು ಬೆಳಗ್ಗೆ 10ರಿಂದ 11.30ರವರೆಗೆ ಮೈಸೂರು ವಿವಿ ಗಣಿತ ವಿಭಾಗದ ಮುಂದೆ 'ಚಿತ್ರಕಲಾ ಸ್ಪರ್ಧೆ'
- ಜ.26ರಿಂದ 28ರವರೆಗೆ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಬಯಲು ರಂಗಮಂದಿರದ ಸುತ್ತಮುತ್ತ 'ಫ್ಲೀ ಮಾರುಕಟ್ಟೆ'
- ಜ.26ರಿಂದ 28ರವರೆಗೆ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಕ್ಲಾಕ್ ಟವರ್ ಪಕ್ಕದ ಮೈದಾನದಲ್ಲಿ 'ಮೈಸೂರು ಫುಡ್ ಫೆಸ್ಟ್'
- ಜ.26ರಿಂದ 28ರವರೆಗೆ ಬೆಳಗ್ಗೆ 10ರಿಂದ ರಾತ್ರಿ 9.30ರವರೆಗೆ ಕ್ಲಾಕ್ ಟವರ್ ಮುಂಭಾಗದ ರಸ್ತೆಯಲ್ಲಿ 'ಸಾಂಸ್ಕೃತಿಕ ವೈಭವ'

ಪೋಸ್ಟರ್ ಬಿಡುಗಡೆ: ಸ್ಥಳ ಪರಿಶೀಲನೆ ಬಳಿಕ ಕ್ಲಾಕ್ ಟವರ್ ಬಳಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಡಾ.ಕೆ.ವಿ.ರಾಜೇಂದ್ರ, ಮೈಸೂರು ಫೆಸ್ಟ್ –2024 ಕಾರ್ಯಕ್ರಮ ಯಶಸ್ವಿಯಾಗಿ ಜರುಗಲು ಅಗತ್ಯ ಕ್ರಮ ಕೈಗೊಳ್ಳಬೇಕು. ಸಣ್ಣಪುಟ್ಟ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು. ಚಿತ್ರಸಂತೆ, ಚಿತ್ರಕಲಾ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಗ್ರಾಮೀಣ ಕ್ರೀಡೆಗಳನ್ನು ನಡೆಸಬೇಕು. ಕಾರ್ಯಕ್ರಮ ವೀಕ್ಷಣೆಗೆ ಬರುವವರ ವಾಹನ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರು, ಮೊಬೈಲ್ ಶೌಚಾಲಯ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ ಎಂದರು.

ಅಗತ್ಯ ಭದ್ರತೆ: ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮಾತನಾಡಿ, ಕಾರ್ಯಕ್ರಮದ ಯಶಸ್ವಿಗೆ ಅಗತ್ಯ ಭದ್ರತೆ ಒದಗಿಸಲಾಗಿದೆ. ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತದೆ. ವ್ಯವಸ್ಥಿತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು. ವೇದಿಕೆ ಕಾರ್ಯಕ್ರಮ ಹಾಗೂ ಇತರೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕಟ್ಟೆಚ್ಚರ ವಹಿಸಲಾಗುವುದು. ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಅಗತ್ಯ ಪೊಲೀಸ್ ಬಂದೋಬಸ್ತ್ ಒದಗಿಸಲಾಗುವುದು ಎಂದರು.

ಚಾಲನೆ: ಮೈಸೂರು ವಿಶ್ವವಿದ್ಯಾನಿಲಯದ ಬಯಲು ರಂಗಮಂದಿರದಲ್ಲಿ ಜ.27ರಂದು ಸಂಜೆ 7ಕ್ಕೆ 'ಮೈಸೂರು ಫೆಸ್ಟ್'ನ ಸಾಂಸ್ಕೃತಿಕ ವೈಭವ ಆರಂಭವಾಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಪಶುಸಂಗೋಪನಾ ಇಲಾಖೆ ಸಚಿವ ಕೆ.ವೆಂಕಟೇಶ್ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮವನ್ನು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಜಿಲ್ಲೆಯ ಶಾಸಕರು, ಸಂಸದರು ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಪರಿಶೀಲನೆ ವೇಳೆ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ, ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್, ಬುಡಕಟ್ಟು ಸಂಶೋಧನಾ ಕೇಂದ್ರದ ಸಂಶೋಧನಾಧಿಕಾರಿ ಹೆಚ್.ಎಸ್.ಬಿಂದ್ಯಾ, ಮುಡಾ ಕಾರ್ಯದರ್ಶಿ ಶೇಖರ್, ಅಧಿಕಾರಿಗಳಾದ ಸತ್ಯಮೂರ್ತಿ, ರುದ್ರೇಶ್, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಬಯಲು ರಂಗಮಂದಿರದಲ್ಲಿ ಸಾಂಸ್ಕೃತಿಕ ವೈಭವ

- ಜ. 27ರಂದು ಸಂಜೆ 5ರಿಂದ 7ರವರೆಗೆ ಉಯಿರೆ ಉಯಿರೆ ಬಿಜಿಎಂ ಚೆಮನ್ ಬ್ಯಾಂಡ್– ವಾಯಿಲಿನ್‌ಫ್ಯೂಷನ್, ಚೆಂಡೆ ಮತ್ತು ನೃತ್ಯ ತಂಡ.
- ರಾತ್ರಿ 8ರಿಂದ 10ರವರೆಗೆ ಗಾನ ಮಾಧುರ್ಯ ಮಣಿಕಾಂತ್ ಕದ್ರಿ ಅವರಿಂದ ಕಾರ್ಯಕ್ರಮ, ಅಂತಾರಾಷ್ಟ್ರೀಯ ಗಾಯಕ ಪೃಥ್ವಿ, ಬಾಂಬೆ ಸಿಂಗರ್ ಅಂಶಿಕ ಅಯ್ಯರ್ ತಂಡದಿಂದ ಕಾರ್ಯಕ್ರಮ.
- ಜ. 28ರಂದು ಸಂಜೆ 6ರಿಂದ 8ರವರೆಗೆ ಸಿರಿಗನ್ನಡ ಟಿವಿ ಚಾನಲ್ ಹಾಸ್ಯ ದರ್ಬಾರ್. ಹಾಸ್ಯ ಕಲಾವಿದರಾದ ಹಿರೆಮಗಳೂರು ಕಣ್ಣನ್, ಸುಧಾ ಬರಗೂರು, ದುಂಡಿರಾಜ್, ಮುಖ್ಯಮಂತ್ರಿ ಚಂದ್ರು, ಮಿಮಿಕ್ರಿ ಗೋಪಿ, ಮಿಮಿಕ್ರಿ ದಯಾನಂದ್, ಪ್ರೊ.ಎಂ. ಕೃಷ್ಣೇಗೌಡ, ಎಂ.ಎಸ್.ನರಸಿಂಹಮೂರ್ತಿ, ರಿಚರ್ಡ್ ಲೂಯಿಸ್ ಅವರಿಂದ ಹಾಸ್ಯಗೋಷ್ಠಿ
- ರಾತ್ರಿ 8ರಿಂದ 10ರವರೆಗೆ ಲೈವ್ ಇನ್ ಕಾನ್ಸರ್ಟ್ ಸಂತೋಷ್ ವೆಂಕಿ ತಂಡದಿಂದ ಕಾರ್ಯಕ್ರಮ ಜರುಗಲಿದೆ.



ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ಸಭಾಂಗಣದಲ್ಲಿ ನೃತ್ಯ ಕಲಾ ಶಾಲೆ ವತಿಯಿಂದ ಆಯೋಜಿಸಿದ್ದ ಭರತನಾಟ್ಯ ಕಲಾವಿದೆ ಕುಮಾರಿ ಡಿ.ಐಸಿರಿ ಅವರ ರಂಗಪ್ರವೇಶ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ವಿದುಷಿ, ಗುರು ಅನುಷಾ ವರುಣ್, ಕಲಾವಿದೆ ಐಸಿರಿ ಪೋಷಕರಾದ ಜೆ.ವಿ.ಸವಿತಾ, ಎಸ್.ದೇವೇಗೌಡ, ವಿದುಷಿ ಮಿತ್ರ ನವೀನ್, ಡಾ.ಭುವನೇಶ್ವರಿ ಹಾಗೂ ಇನ್ನಿತರರನ್ನು ಕಾಣಬಹುದು.

ನಾಳೆಯಿಂದ 25ರವರೆಗೆ ಸಂಸದರ ಕಚೇರಿ ಎದುರು ಪ್ರತಿಭಟನೆ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಚ್.ಎಸ್. ಸುನಂದ ಮಾತನಾಡಿದರು.

ಮೈಸೂರು, ಜ.21(ಜಿಎ)–ಸ್ಕೀಂ ನೌಕರರ ಸಂಘಟನೆಗಳು ಮತ್ತು ಸಿಐಟಿಯು ವತಿಯಿಂದ ಜ.23, 24 ಮತ್ತು 25 ರಂದು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ಎಲ್ಲಾ ಸಂಸದ ಕಚೇರಿ ಎದುರು ಪ್ರತಿಭಟನೆ ಮತ್ತು ಧರಣಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾಧ್ಯಕ್ಷೆ ಎಚ್.ಎಸ್. ಸುನಂದ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಬ್ರವರಿಯಲ್ಲಿನ ಬಜೆಟ್‌ನಲ್ಲಿ ಐಸಿಡಿಎಸ್ ಅನುದಾನ ಹೆಚ್ಚಳ ಮಾಡಬೇಕು, ಕನಿಷ್ಠ ವೇತನ ಘೋಷಿಸಬೇಕು ಎಂದು ಸ್ಥಳೀಯ ಸಂಸದರ ಕಚೇರಿ ಎದುರು ಪ್ರತಿಭಟಿಸಿ ಆಗ್ರಹಿಸಲಾಗುವುದು.

ಜ. 24 ರಂದು ಇದೇ ವೇಳೆ ಗ್ರಾಪಂ ನೌಕರರು, ಎಲ್ಐಸಿ ಏಜೆಂಟರು, ಕೈಗಾರಿಕಾ ಕಾರ್ಮಿಕರು, 25 ರಂದು ಕಟ್ಟಡ ಕಾರ್ಮಿಕರು, ಹಮಾಲಿಗಳು, ಆಟೋ ಚಾಲಕರು ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಆಹಾರ, ಆರೋಗ್ಯ, ಶಿಕ್ಷಣಕ್ಕಾಗಿರುವ ಯೋಜನೆಗಳನ್ನು ಕಾಯಂಗೊಳಿಸಬೇಕು, ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಈ ಯೋಜನೆಗಳಲ್ಲಿ ದುಡಿಯುತ್ತಿರುವ ಸಿಬ್ಬಂದಿ ಸೇರಿದಂತೆ ಒಂದು ಕೋಟಿ ನೌಕರರಿಗೆ ಕನಿಷ್ಠ ವೇತನ, ನಿವೃತ್ತಿ ಸೌಲಭ್ಯ ನೀಡಿ, ಇವರನ್ನೂ ಕಾರ್ಮಿಕರೆಂದು ಪರಿಗಣಿಸಬೇಕು ಎಂದು ಒತ್ತಾಯಿಸಲಾಗುವುದು ಎಂದರು.

ಮೂರರಿಂದ ಆರು ವರ್ಷದೊಳಗಿನ ಮಕ್ಕಳಿಗೆ ಉಚಿತ, ಕಡ್ಡಾಯ ಮತ್ತು ಸಾರ್ವತ್ರಿಕ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲಿಯೇ ನೀಡಲು ಕಾನೂನು ರೂಪಿಸಬೇಕು. ಎನ್‌ಇಪಿ ರದ್ದುಗೊಳಿಸಬೇಕು, 49 ವರ್ಷಗಳಿಂದ ದುಡಿಯುತ್ತಿರುವ ಅಂಗನವಾಡಿ ನೌಕರರಿಗೆ 21 ವರ್ಷಗಳಿಂದ ದುಡಿಯುತ್ತಿರುವ ಬಿಸಿಯೂಟ ನೌಕರರಿಗೆ, ಆಶಾ ಮತ್ತು ಇತರೆ ಸಿಬ್ಬಂದಿಗೆ ಕ್ರಮವಾಗಿ 31 ಸಾವಿರ ಕನಿಷ್ಠ ವೇತನ, ನಿವೃತ್ತಿ ಸೌಲಭ್ಯ, ಕನಿಷ್ಠ 10 ಸಾವಿರ ಪಿಂಚಣಿ ನೀಡಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎನ್.ಕೆ. ಬಾಲಾಜಿರಾವ್, ಪುಷ್ಪಲತಾ, ಕಾವೇರಮ್ಮ ಲೀಲಾವತಿ, ಲತಾ, ಕಮಲಾಕ್ಷಿ ಹೇಮಾವತಿ, ಮಂಗಳಗೌರಮ್ಮ ಹುಣಸೂರು ಉಪಸ್ಥಿತರಿದ್ದರು.

ಜ.27, 28ಕ್ಕೆ ಬೆಳಗಾವಿಯಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದಿಂದ ಮಹಿಳಾ ಸಮಾವೇಶ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಹಾದೇವಪ್ಪ ಮಾತನಾಡಿದರು.

ಮೈಸೂರು,ಜ.21(ಜಿಎ)–ಜಾಗತಿಕ ಲಿಂಗಾಯತ ಮಹಾಸಭಾ ವತಿಯಿಂದ ಜ. 27 ಮತ್ತು 28 ರಂದು ಬೆಳಗಾವಿಯ ಶಿವಬಸವ ನಗರದ ಆರ್.ಎನ್. ಶೆಟ್ಟಿ ಪಾಲಿಟೆಕ್ನಿಕ್ ಆವರಣದಲ್ಲಿ ರಾಷ್ಟ್ರೀಯ ಪ್ರಥಮ ಮಹಿಳಾ ಸಮಾವೇಶ ಆಯೋಜಿಸಲಾಗಿದೆ ಎಂದು ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಮಹಾದೇವಪ್ಪ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಕೂಡಲ ಸಂಗಮದ ಬಸವ ಧರ್ಮ ಪೀಠದ ಪೀಠಾಧ್ಯಕ್ಷರಾದ ಡಾ. ಗಂಗಾ ಮಾತಾಜಿ ಅವರು ಸರ್ವಾಧ್ಯಕ್ಷರಾಗಿದ್ದಾರೆ. ಆ.27 ರ ಬೆಳಗ್ಗೆ 11ಕ್ಕೆ ಡಾ. ತೋಂಟದ ಸಿದ್ಧರಾಮೇಶ್ವರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಸಮಾವೇಶ ಉದ್ಘಾಟನೆಗೊಳ್ಳಲಿದೆ. ಶಿವಾನಂದ ಸ್ವಾಮೀಜಿ ಸ್ಮರಣ ಸಂಚಿಕೆ ಲೋಕಾರ್ಪಣೆಗೊಳಿಸುವರು, ಬಸವೇಶ್ವರಿ ತಾಯಿ ಆಶಯ ನುಡಿ ಆಡುವರು, ಶರಣಾಂಬಿಕಾ ತಾಯಿ, ಪ್ರಭುಶ್ರೀ ತಾಯಿ ಸಮ್ಮುಖ ವಹಿಸುವರು. ನಂತರ ಎರಡೂ ದಿನ ವಿವಿಧ ಗೋಷ್ಠಿಗಳು ನಡೆಯಲಿವೆ. ಜ.28 ರಂದು ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಗುರು ಮಹಾಂತ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು, ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಅತಿಥಿಗಳಾಗಿರಲಿದ್ದು, ಮೈಸೂರಿನಿಂದ ಸುಮಾರು 200ಕ್ಕೂ ಹೆಚ್ಚು ಮಂದಿ ಪ್ರಯಾಣಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಜ್ಯೋತಿ ರೇಚಣ್ಣ, ಉಷಾ ನಾಗೇಶ್, ಪುಷ್ಪಾ ಉಪಸ್ಥಿತರಿದ್ದರು.

ಅಯೋಧ್ಯೆಯಲ್ಲಿ ಕರ್ನಾಟಕ ಭವನ ನಿರ್ಮಿಸಲು ಮನವಿ

ಮೈಸೂರು: ಅಯೋಧ್ಯೆ ಶ್ರೀರಾಮ ಮಂದಿರಕ್ಕೆ ಭೇಟಿ ನೀಡುವ ರಾಜ್ಯದ ಕೋಟ್ಯಾಂತರ ಭಕ್ತರ ಅನುಕೂಲಕ್ಕಾಗಿ ರಾಜ್ಯ ಸರಕಾರ ಸುಸಜ್ಜಿತ ಕರ್ನಾಟಕ ಭವನ ನಿರ್ಮಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್ ಮನವಿ ಮಾಡಿದ್ದಾರೆ. ಶತಕಗಳಿಂದ ಕೋಟ್ಯಂತರ ಭಾರತೀಯರ ಕನಸು ಸಾಕಾರವಾಗುತ್ತಿದ್ದು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗುತ್ತಿದೆ. ಮುಂದಿನ ದಿನಗಳಲ್ಲಿ ಕೋಟ್ಯಂತರ ಭಕ್ತಾದಿಗಳ ಪಾಲಿಗೆ ಪ್ರಾಶಸ್ತ್ಯದ ಪುಣ್ಯ ಕ್ಷೇತ್ರವಾಗಿ ರೂಪುಗೊಳ್ಳಲಿದೆ. ಅಯೋಧ್ಯೆಯಲ್ಲಿ ಶ್ರೀರಾಮ ದೇವರ ದರ್ಶನ ಪಡೆಯಲು ದೇಶದ ಹಲವು ಕಡೆಗಳಿಂದ ಭಕ್ತರು ಆಗಮಿಸಲಿದ್ದಾರೆ. ವಿಶೇಷವಾಗಿ ಕರ್ನಾಟಕದಿಂದ ಬಹುದೊಡ್ಡ ಸಂಖ್ಯೆಯಲ್ಲಿ ಅಯೋಧ್ಯೆಗೆ ತೆರಳಲಿದ್ದಾರೆ. ಶ್ರೀರಾಮ ದೇವರ ದರ್ಶನ ಪಡೆಯಲು ತೆರಳುವ ಕನ್ನಡಿಗರ ವಿಶ್ರಾಂತಿಗೆ ಹಾಗೂ ವಾಸ್ತವ್ಯಕ್ಕೆ ಅನುಕೂಲವಾಗುವಂತೆ ಅಯೋಧ್ಯೆಯಲ್ಲಿ ಕರ್ನಾಟಕ ಭವನ ನಿರ್ಮಾಣದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಯೋಧ್ಯೆಯಲ್ಲಿಯೇ ಶೀಘ್ರವಾಗಿ ನಿರ್ಮಾಣ ಮಾಡಿ ಭಕ್ತರಿಗೆ ಹಾಗೂ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ.

ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಕಾಂಗ್ರೆಸ್ ಮುಂದು

ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ



ಮೈಸೂರು, ಜ.21(ಎಂಟಿವೈ)– ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳಿಗೆ ಒಳ ಮೀಸಲಾತಿ ಕಲ್ಪಿಸಲು ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಸಂಪುಟವನ್ನು ಅಭಿನಂದಿಸುವುದಾಗಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಕಾಂಗ್ರೆಸ್ ಸರ್ಕಾರ ಎಂದೆಂದಿಗೂ ಮುಂದಿದೆ. ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಹಲವು ಸೌಲಭ್ಯ ನೀಡಿ ಸಂಕಷ್ಟದಲ್ಲಿದ್ದ ದುರ್ಬಲ ಸಮುದಾಯಗಳನ್ನು ಸಬಲಗೊಳಿಸಲು ಕಾಂಗ್ರೆಸ್ ಕಟಿಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಹಿಂದೆ ಕಾಂಗ್ರೆಸ್‌ನಿಂದ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರ ಅಧಿಕಾರಾವಧಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ನ್ಯಾ. ಸದಾಶಿವ ಆಯೋಗವನ್ನು ರಚಿಸಿದ್ದರು. ಈಗ ರಾಜ್ಯ ಕಾಂಗ್ರೆಸ್ ಸರ್ಕಾರ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮುಂದಾಗಿರುವುದು ಪರಿಶಿಷ್ಟ ಜಾತಿಗೆ ಸೇರಿದ ಅಸ್ಪೃಶ್ಯ ವರ್ಗಗಳಲ್ಲಿ ಆಶಾಭಾವನೆ ಮೂಡಿದೆ ಎಂದರು.

ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಒಳ ಮೀಸಲು ಜಾರಿಗೆ ತರುವುದಾಗಿ ಭರವಸೆ ನೀಡಿ ಸದಾಶಿವ ಆಯೋಗದ ವರದಿಯನ್ನು ಮೂಲೆಗುಂಪು ಮಾಡಿದ್ದರು. ಜೆ.ಸಿ.ಮಾಧುಸ್ವಾಮಿ ನೇತೃತ್ವದ ಉಪ ಸಮಿತಿ ರಚಿಸಿ ಒಳ ಮೀಸಲು ಕಲ್ಪಿಸುವ ನಾಟಕ ಮಾಡಿದರು. ಆದರೆ, ವರದಿಯನ್ನು ಪ್ರಸ್ತಾವನೆಯನ್ನೇ ಮಾಡಲಿಲ್ಲ ಎಂದು ಆರೋಪಿಸಿದರು.

ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸಲು 2018ರಲ್ಲಿ ಸಿದ್ದರಾಮಯ್ಯ ಅವರು ನ್ಯಾ. ನಾಗಮೋಹನ್ ದಾಸ್ ಆಯೋಗ ರಚಿಸಿದ್ದರು. ಆಯೋಗವೂ ಪರಿಶಿಷ್ಟ ಜಾತಿಯ ಶೇ. 15ರಿಂದ 17, ಪರಿಶಿಷ್ಟ ವರ್ಗಗಳಿಗೆ ಶೇ. 3ರಿಂದ 7ರಷ್ಟು ಸೇರಿದಂತೆ ಮೀಸಲಾತಿ ಪ್ರಮಾಣ ಶೇ.18ರಿಂದ 24 ಮೀಸಲು ಹೆಚ್ಚಳಕ್ಕೆ ಶಿಫಾರಸ್ಸು ಮಾಡಿತು. ವರದಿ ಅನ್ವಯ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರು ಎಂದು ತಿಳಿಸಿದರು.

2023ರ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ನೀಡಿದ ಆಶ್ವಾಸನೆಯನ್ನು ಈಡೇರಿಸುವ ಮೂಲಕ ಮೀಸಲಾತಿ ವರ್ಗೀಕರಣ ನೀಡಿ ಬಹು ವರ್ಷಗಳ ದಲಿತರ ಬೇಡಿಕೆಯನ್ನು ಈಡೇರಿಸಿದ ಸಿದ್ದರಾಮಯ್ಯ ಅವರಿಗೆ ಪರಿಶಿಷ್ಟ ಜಾತಿಯ ಉಪ ಜಾತಿಗಳ ಪರವಾಗಿ ಅಭಿನಂದಿಸುವುದಾಗಿ ತಿಳಿಸಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಶೋಷಿತ ಸಮುದಾಯಕ್ಕೆ ನ್ಯಾಯ ಕೊಟ್ಟ ನಾಯಕರಾಗಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿ ಜನರ ಹಿತ ಕಾಯುವ ಪ್ರಯತ್ನ ಮಾಡಲಾಗಿದೆ. ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದ ಅಪಾರ ಸಂಖ್ಯೆಯ ಕುಟುಂಬಸ್ಥರಿಗೆ ನೆರವಾಗಿದೆ. ಅನೇಕರ ಜೀವನಮಟ್ಟ ಸುಧಾರಿಸಿದೆ. ರಾಜ್ಯ ಸರ್ಕಾರ ಸದಾಶಿವ ಆಯೋಗ ವರದಿ ಜಾರಿ ಮಾಡಿದೆ. ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಬೇಕು. ಎಂದು ಒತ್ತಾಯಿಸಿದರು.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲ್ಲ: ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಕುರಿತಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನು ರಾಜಕೀಯ ಕ್ಷೇತ್ರ ಬಯಸಿದವನಲ್ಲ. ನನ್ನ ತಂದೆಯ ಅಕಾಲಿಕ ನಿಧನದ ನಂತರ ಜನರ ಒತ್ತಾಯದ ಮೇರೆಗೆ ಅನಿವಾರ್ಯವಾಗಿ ರಾಜಕೀಯಕ್ಕೆ ಬಂದಿದ್ದೇನೆ. ನಂಜನಗೂಡಿನ ಕ್ಷೇತ್ರದ ಜನತೆ ನನ್ನ ಕೈ ಹಿಡಿದಿದ್ದಾರೆ. ಕಷ್ಟದ ಸಮಯದಲ್ಲಿ ನನ್ನ ಬೆನ್ನಿಗೆ ನಿಂತಿದ್ದಾರೆ. 5 ವರ್ಷಗಳ ಕಾಲ ನನ್ನ ಕ್ಷೇತ್ರದ ಜನತೆಯ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ರಾಮ ಮಂದಿರ ಉದ್ಘಾಟನೆ

ಆರೋಗ್ಯ ಲೆಕ್ಕಿಸದೇ ಕುಟುಂಬದ ಜತೆ ಅಯೋಧ್ಯೆಗೆ ತೆರಳಿದ ದೇವೇಗೌಡ



ಕುಟುಂಬದವರೊಂದಿಗೆ ವಿಶೇಷ ವಿಮಾನದಲ್ಲಿ ಅಯೋಧ್ಯೆಗೆ ಪ್ರಯಾಣಿಸಿದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ.

ಬೆಂಗಳೂರು, ಜ.21– ಅಯೋಧ್ಯೆಯಲ್ಲಿ ನಾಳೆ (ಜ.22) ನಡೆಯುವ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಾಜಿ ಪ್ರಧಾನ ಮಂತ್ರಿ ಎಚ್.ಡಿ.ದೇವೇಗೌಡ ಅವರು ಕುಟುಂಬ ಸಮೇತರಾಗಿ ಅಯೋಧ್ಯೆಗೆ ತೆರಳಿದ್ದಾರೆ. ದೇವೇಗೌಡರಿಗೆ ಪತ್ನಿ, ಪುತ್ರ ಹಾಗೂ ಮೊಮ್ಮಗ ಸಾಥ್ ನೀಡಿದ್ದಾರೆ.

ಇಂದು ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಜೆಟ್‌ನಲ್ಲಿ ದೇವೇಗೌಡ ಜೊತೆ ಪತ್ನಿ ಚನ್ನಮ್ಮ, ಪುತ್ರ ಎಚ್.ಡಿ. ಕುಮಾರಸ್ವಾಮಿ ಹಾಗೂ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ತೆರಳಿದರು.

ಅಯೋಧ್ಯೆಗೆ ತೆರಳುವ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಮಾಜಿ ಪ್ರಧಾನಿ ದೇವೇಗೌಡ ಅವರು, ನಾನು ನನ್ನ ಪತ್ನಿ, ಕುಮಾರಸ್ವಾಮಿ, ನಿಖಿಲ್ ಅಯೋಧ್ಯೆಗೆ ಹೋಗುತ್ತಿದ್ದೇವೆ. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಕಾರ್ಯಕ್ರಮ ಮಾಡ್ತಿರೋದು ಅವರ ಪೂರ್ವ ಜನ್ಮದ ಪುಣ್ಯವಾಗಿದೆ. ಅವರಿಗೆ ಈ ಕೆಲಸ ಮಾಡುವ ಶಕ್ತಿಯೂ ಕೂಡ ಪೂರ್ವ ಜನ್ಮದ ಪುಣ್ಯದಿಂದಲೇ ಸಿಕ್ಕಿದೆ. ಮಾಜಿ ಪ್ರಧಾನಿ ವಾಜಪೇಯಿ ಕೂಡ 6 ವರ್ಷ ಪ್ರಧಾನಿ ಆಗಿದ್ದರು. ಆದರೆ, ರಾಮ ಮಂದಿರದ ಮೊದಲ ಕಲ್ಲು ಸ್ವೀಕಾರ ಮಾಡುವುದಕ್ಕೂ ಅವತ್ತು ವಾಜಪೇಯಿ ಅವರಿಗೆ ಕಷ್ಟ ಆಯ್ತು. ಇದು ಮೋದಿ ಅವರ ಪೂರ್ವ ಜನ್ಮ ಪುಣ್ಯವಾಗಿದೆ ಎಂದರು.

ಮೋದಿ ಅವರು ಶಿವ, ವಿಷ್ಣು ಪ್ರಾರ್ಥನೆ ಮಾಡಿದ್ದಾರೆ. ಅವರಿಗೆ ಶಿವ, ವಿಷ್ಣು ವ್ಯತ್ಯಾಸ ಇಲ್ಲ. ಹಿಂದಿನ ಜನ್ಮದಲ್ಲಿ ದೊಡ್ಡ ದೈವ ಭಕ್ತರಾಗಿ ಜನ್ಮ ತಾಳಿದ್ದರು ಅನ್ನಿಸುತ್ತದೆ. ಈ ಸಂಧರ್ಭದಲ್ಲಿ ಆ ಯೋಗ ಮೋದಿ ಅವರಿಗೆ ಬಂದಿದೆ. 11 ದಿನ ವ್ರತ ಮಾಡಿದ್ದಾರೆ. ಪುಣ್ಯ ಕ್ಷೇತ್ರಗಳ ಸ್ನಾನ ಮಾಡ್ತಿದ್ದಾರೆ. ಇದು ತುಂಬಾ ವಿಶೇಷವಾಗಿದೆ. ನಾನು ದೈವಭಕ್ತ. ಒಂದು ದಿನ ವ್ರತ ಮಾಡಬಹುದು. ಆದರೆ, ಹೀಗೆ ಮಾಡಲು ಆಗೊಲ್ಲ. ತಮ್ಮ ನಿತ್ಯದ ಕೆಲಸ ಕಾರ್ಯಕ್ರಮಗಳ ಜೊತೆ ವ್ರತ ಮಾಡ್ತಾರೆ. ಇದೊಂದು ದೊಡ್ಡ ವಿಶೇಷವಾಗಿದೆ. ಮೋದಿ ಅವರಿಗೆ ಇದು ಪೂರ್ವ ಜನ್ಮದ ಪುಣ್ಯ. ವಿಶ್ವದಲ್ಲಿ ಇದೊಂದು ದಾಖಲೆ ಎಂದರು.

ರಾಮ ಮಂದಿರ ಉದ್ಘಾಟನೆ: ಇಂದು ರಜೆ ಘೋಷಿಸಿದ ಹಿಮಾಚಲ ಪ್ರದೇಶ ಕಾಂಗ್ರೆಸ್ ಸರ್ಕಾರ!

ಶಿಮ್ಲಾ: ಅಯೋಧ್ಯೆ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮಕ್ಕೆ ಬರುವುದಿಲ್ಲ ಎಂದು ಹೇಳಿದ್ದ ಕಾಂಗ್ರೆಸ್‌ಗೆ ತನ್ನದೇ ಪಕ್ಷದ ಸರ್ಕಾರ ಶಾಕ್ ನೀಡಿದ್ದು, ಜನವರಿ 22ರಂದು ರಜೆ ಘೋಷಣೆ ಮಾಡಿದೆ.

ಕಾಂಗ್ರೆಸ್ ಅಧಿಕಾರದಲ್ಲಿರುವ ಹಿಮಾಚಲ ಪ್ರದೇಶದಲ್ಲಿ ರಾಮಮಂದಿರ ಉದ್ಘಾಟನೆ ನಡೆಯಲಿರುವ ಸೋಮವಾರ ಸಾರ್ವಜನಿಕ ರಜೆ ಘೋಷಣೆ ಮಾಡಿದೆ. ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು ಅವರು ಭಾನುವಾರ ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆ ಸಮಾರಂಭದ ದೃಷ್ಟಿಯಿಂದ ಜನವರಿ 22 ರಂದು ಸಾರ್ವಜನಿಕ ರಜೆ ಘೋಷಿಸಿದ್ದಾರೆ. ಇಂದು ಶಿಮ್ಲಾದ ರಾಮ ಮಂದಿರಕ್ಕೆ ಭೇಟಿ ನೀಡಿದ್ದ ಸಿಎಂ ಸುಖು ಅವರು ರಾಮಮಂದಿರ ಉದ್ಘಾಟನಾ ಸಮಯದಲ್ಲಿ ಮನೆಯಲ್ಲಿ ಮಣ್ಣಿನ ದೀಪಗಳನ್ನು ಬೆಳಗಿಸುವಂತೆ ರಾಜ್ಯದ ಜನತೆಗೆ ಮನವಿ ಮಾಡಿದರು. ಅಂತೆಯೇ ರಾಮಮಂದಿರ ಉದ್ಘಾಟನೆಯಾದ ನಾಳೆ ಕೇಂದ್ರ ಸರ್ಕಾರ ಜನವರಿ 22ರಂದು ಅರ್ಧ ದಿನ ರಜೆ ಘೋಷಿಸಿದೆ.



ಅಯೋಧ್ಯೆಯಲ್ಲಿ ಶ್ರೀರಾಮ ಲಲ್ಲಾ ವಿಗ್ರಹ ಪ್ರಾಣ ಪ್ರತಿಷ್ಠಾನದ ಹಿನ್ನೆಲೆಯಲ್ಲಿ ಮೈಸೂರಿನ ನಜರಬಾದ್‌ನಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ದೀಪಕ್ ಪುಟ್ಟಸ್ವಾಮಿ, ಲೋಕೇಶ್, ರಾಕೇಶ್ ಗೌಡ, ದಿಲೀಪ್, ಪುನೀತ್ ಹಾಗೂ ಪುಟಾಣಿಗಳು ಪಾಲ್ಗೊಂಡಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಕೆ.ಆರ್.ನಗರ ಬಳಿ ಜೀತ ಪ್ರಕರಣ ಪತ್ತೆ

ತಂದೆಯೇ ಮಾರಾಟ ಮಾಡಿದ್ದ ಮಗನನ್ನು ರಕ್ಷಿಸಿದ ಅಧಿಕಾರಿಗಳು

3 ಲಕ್ಷ ರೂ.ಗೆ ಖರೀದಿ, ಕುರಿ, ದನ, ಮೇಯಿಸಲು, ಮನೆಗೆಲಸ ಮಾಡಲು ಬಾಲಕನ ಬಳಕೆ

ಭೇರ್ಯ,ಜ.21– ರಾಜ್ಯದಲ್ಲಿ ಜೀತ ಪದ್ಧತಿ ಇನ್ನೂ ಜೀವಂತವಾಗಿದೆ. ಎಷ್ಟೇ ಆಧುನಿಕತೆ ಬಂದರೂ, ಕಾನೂನು ಎಷ್ಟೇ ಬಲಿಷ್ಠವಾಗಿದ್ದರೂ, ಬಡತನ ಮತ್ತು ಹಸಿವು ಜೀತ ಮಾಡುವಂತಹ ಪರಿಸ್ಥಿತಿಯನ್ನು ತಂದು ಬಿಡುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಪದ್ಧತಿ ಈಗಲೂ ಸದ್ದಿಲ್ಲದೆ ನಡೆಯುತ್ತಿದೆ.

ತಂದೆಯೇ ತನ್ನ ಸ್ವಂತ ಮಗನನ್ನು ಜೀತ ಮಾಡುವ ಸಲುವಾಗಿ ಮಾರಾಟ ಮಾಡಿದ್ದ ಪ್ರಕರಣ ಬೆಳಕಿಗೆ ಬಂದಿದ್ದು, ಗ್ರಾಮಸ್ಥರ ದೂರಿನ ಮೇರೆಗೆ ಬಾಲಕನನ್ನು ರಕ್ಷಿಸಿ ಬಾಲ ಮಂದಿರಕ್ಕೆ ಬಿಡಲಾಗಿದ್ದು, ಬಾಲಕನನ್ನು ಖರೀದಿಸಿದ್ದ ಇಬ್ಬರು ಮಹಿಳೆಯರು ಹಾಗೂ ಮಗನನ್ನು ಮಾರಾಟ ಮಾಡಿದ್ದ ತಂದೆಯನ್ನು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ ಗ್ರಾಮದ ವಾಸಿ ಶರಣಪ್ಪಗೌಡರ 9 ವರ್ಷದ ಪುತ್ರ ಬಸವನಗೌಡ ಶರಣಪ್ಪಗೌಡ ಜೀತದಿಂದ ಪಾರಾದ ಬಾಲಕ.

ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಬೆಟ್ಟಹಳ್ಳಿ ಗ್ರಾಮದ ರುಕ್ಮಿಣಿ ಮತ್ತು ಮಹದೇವಮ್ಮ ಅವರುಗಳು ಕಳೆದ ಎರಡು ವರ್ಷಗಳ ಹಿಂದೆ ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ ಗ್ರಾಮದ ಶರಣಪ್ಪ ಗೌಡರ ಮಗನಾದ ಬಸವನಗೌಡ ಶರಣಪ್ಪ ಗೌಡನನ್ನು ಮೂರು ಲಕ್ಷ ಹಣ ಕೊಟ್ಟು ತಮ್ಮ ಮನೆಯ ಜೀತಕ್ಕೆ ಖರೀದಿಸಿ, ಗ್ರಾಮಕ್ಕೆ ಕರೆತಂದು ಕುರಿ, ಮೇಕೆ ಮೇಯಿಸಲು, ಮನೆ ಕೆಲಸ ಮಾಡಲು ಬಳಸಿಕೊಳ್ಳುತ್ತಿದ್ದರು. ಬಾಲಕ ಬೆಳಗ್ಗೆಯಿಂದ ರಾತ್ರಿಯವರೆಗೂ ವಿಶ್ರಾಂತಿ ಇಲ್ಲದೆ ಗಾಣದ ಎತ್ತಿನಂತೆ ಜೀತ ಮಾಡುತ್ತಿದ್ದನಂತೆ.


ಬಾಲಕನನ್ನು ರಕ್ಷಿಸಿದ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಮತ್ತು ತಹಸೀಲ್ದಾರ್ ಪೂರ್ಣಿಮಾ.

ಇದನ್ನು ಕಂಡ ಗ್ರಾಮಸ್ಥರು ಬಾಲಕನ ಬಗ್ಗೆ ಕನಿಕರ ಉಂಟಾಗಿ ರುಕ್ಮಿಣಿ ಹಾಗೂ ಮಹದೇವಮ್ಮ ಅವರನ್ನು ಪ್ರಶ್ನಿಸಿದಾಗ ಆ ಹುಡುಗ ನಮ್ಮ ಸಂಬಂಧಿಕರ ಹುಡುಗ ಎಂದು ಹೇಳಿಕೊಳ್ಳುತ್ತಿದ್ದರು. ಇವರ ಮಾತುಗಳಿಂದ ಅನುಮಾನಗೊಂಡ ಗ್ರಾಮಸ್ಥರು ಸ್ಥಳೀಯ ಪೊಲೀಸರಿಗೆ ದೂರು ಕೊಟ್ಟರು. ಆದರೆ ಇದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಕೊನೆಗೆ ಬೇರೆ ದಾರಿ ಕಾಣದೆ ಮೈಸೂರಿನ ಮಕ್ಕಳ ಸಹಾಯವಾಣಿ ಕೇಂದ್ರಕ್ಕೆ ದೂರು ನೀಡಿದರು. ತಕ್ಷಣವೇ ಕಾರ್ಯ ಪ್ರವೃತ್ತರಾದ ಮಕ್ಕಳ ಸಹಾಯವಾಣಿ ಕೇಂದ್ರದವರು ಮೈಸೂರಿನ ಸಹಾಯಕ ಕಾರ್ಮಿಕ ಆಯುಕ್ತೆ ನಾಜೀಯ ಸುಲ್ತಾನ್ ಅವರಿಗೆ ಕರೆ ಮಾಡಿ ಬಾಲಕ ಮಾರಾಟವಾಗಿ ಹಳ್ಳಿಯೊಂದರಲ್ಲಿ ಜೀತ ಮಾಡುತ್ತಿರುವ ಬಗ್ಗೆ ತಿಳಿಸಿದರು. ಕೂಡಲೇ ಸಹಾಯಕ ಕಾರ್ಮಿಕ ಆಯುಕ್ತೆ ನಾಜೀಯ ಸುಲ್ತಾನ್ ಅವರು ತಮ್ಮ ಕೆ.ಆರ್.ನಗರ ತಹಸೀಲ್ದಾರ್ ಸಿ.ಎಸ್. ಪೂರ್ಣಿಮಾ ಹಾಗೂ ಪಟ್ಟಣದ ಕಾರ್ಮಿಕ ಇಲಾಖೆಯ ಕಾರ್ಮಿಕ ನಿರೀಕ್ಷಕ ಗೋವಿಂದರಾಜು ಅವರಿಗೆ ವಿಷಯ ತಿಳಿಸಿದರು.

> ಮಾರಾಟವಾದ ಬಾಲಕನನ್ನು ರಕ್ಷಿಸಿ ಬಾಲಮಂದಿರಕ್ಕೆ ಬಿಟ್ಟಿದ್ದೇವೆ, ಈ ಬಗ್ಗೆ ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ದಾಖಲಿಸಲಾಗಿದೆ, ಮಕ್ಕಳ ಮಾರಾಟ ಜಾಲದ ಬಗ್ಗೆ ಪೊಲೀಸರು ಪತ್ತೆ ಹಚ್ಚಬೇಕಿದೆ. ಏಕೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ ಗೊತ್ತಾಗುತ್ತಿಲ್ಲ,
> –ಗೋವಿಂದರಾಜು, ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ, ಕೆ.ಆರ್.ನಗರ.

ಕೆ.ಆರ್.ನಗರ ಪಟ್ಟಣ ಕಾರ್ಮಿಕ ಇಲಾಖೆಯ ನಿರೀಕ್ಷಕ ತಮ್ಮ ಸಿಬ್ಬಂದಿಗಳೊಡನೆ ಬೆಟ್ಟಹಳ್ಳಿ ಗ್ರಾಮಕ್ಕೆ ತೆರಳಿ ಗ್ರಾಮಸ್ಥರ ಜೊತೆ ಚರ್ಚಿಸಿ, ಬಾಲಕನನ್ನು ಜೀತಕ್ಕೆ ಇಟ್ಟುಕೊಂಡಿದ್ದ ರುಕ್ಮಿಣಿ ಹಾಗೂ ಮಹದೇವಮ್ಮ ಅವರ ವಿರುದ್ಧ ದೂರು ಪಡೆದುಕೊಂಡು ಬಾಲಕ ಬಸವನಗೌಡ ಶರಣಪ್ಪನನ್ನು ರಕ್ಷಿಸಿ, ಸಾಲಿಗ್ರಾಮ ಪೊಲೀಸ್ ಠಾಣೆಗೆ ರುಕ್ಮಿಣಿ ಹಾಗೂ ಮಹದೇವಮ್ಮ ಅವರ ವಿರುದ್ಧ ದೂರು ದಾಖಲಿಸಿದರು. ಸದ್ಯಕ್ಕೆ ಬಾಲಕ ಬಸವನಗೌಡ ಶರಣಪ್ಪನನ್ನು ಮೈಸೂರಿನ ಬಾಲಮಂದಿರಕ್ಕೆ ಬಿಡಲಾಗಿದೆ.

ಪ್ರಕರಣ ದಾಖಲಿಸಿ ಕೊಂಡಿರುವ ಸಾಲಿಗ್ರಾಮ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕೃಷ್ಣರಾಜು ಬಾಲಕನನ್ನು ಹಣ ಕೊಟ್ಟು ಖರೀದಿ ಮಾಡಿರುವ ರುಕ್ಮಿಣಿ ಹಾಗೂ ಮಹದೇವಮ್ಮ ಅವರನ್ನು ಬಂಧಿಸಿ ವಶಕ್ಕೆ ಪಡೆದಿಲ್ಲ ಎಂಬ ಆರೋಪ ಗ್ರಾಮಸ್ಥರಿಂದ ಕೇಳಿ ಬರುತ್ತಿದೆ. ಆ ಇಬ್ಬರು ಮಹಿಳೆಯರು, ಬಾಲಕನ ತಂದೆ ಶರಣಪ್ಪ ಗೌಡರನ್ನು ವಶಕ್ಕೆ ಪಡೆದರು.

ದೇವಸ್ಥಾನಗಳನ್ನು ಸ್ವಚ್ಛಗೊಳಿಸಿದ ಬಿಜೆಪಿ ಮುಖಂಡರು



ತಿನರಸೀಪುರ,ಜ.21– ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಆಲಗೂಡು ಗ್ರಾಮದಲ್ಲಿ ಪ್ರಾಚೀನ ಕಾಲದ ಹಳೆಯ ದೇವಾಲಯ ಮತ್ತು ದೇವಾಲಯದ ಸುತ್ತ ಬಿಜೆಪಿ ಮುಖಂಡರು ಸ್ವಚ್ಛತೆಗೊಳಿಸಿ ಕಂಗೊಳಿಸುವಂತೆ ಮಾಡಿದ್ದಾರೆ. ಜಿಲ್ಲಾ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಮುದ್ದುಕೃಷ್ಣ(ಕಿಟ್ಟಿ) ನೇತೃತ್ವದಲ್ಲಿ ಇಂದು ಬೆಳಗ್ಗೆಯಿಂದ ಗ್ರಾಮ ದೇವತೆ ದೇವಾಲಯದ ಸುತ್ತಲು ಸ್ವಚ್ಛತಾ ಕಾರ್ಯ ನಡೆಸಲಾಯಿತು

ಅಯೋಧ್ಯೆಯಲ್ಲಿ ಶ್ರೀರಾಮನ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಯಾವುದಾದರೂ ಒಂದು ದೇವಾಲಯ ಸ್ವಚ್ಛಗೊಳಿಸಿ ಎಂದು ಸೂಚನೆ ನೀಡಿದ್ದರಿಂದ ಬಿಜೆಪಿ ಮುಖಂಡರು ಇತಿಹಾಸ ಪ್ರಸಿದ್ಧ ದೇವಾಲಯವನ್ನು ಸ್ವಚ್ಛಗೊಳಿಸುವ ಮೂಲಕ ಭಕ್ತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಸಂಕ್ರಾಂತಿ ಹಬ್ಬದಿಂದ ಅಯೋಧ್ಯೆಯಲ್ಲಿ ರಾಮ ಪ್ರತಿಷ್ಠಾಪನ ದಿನವರೆಗೂ ದೇವಾಲಯಗಳ ಸ್ವಚ್ಛತೆ ಮಾಡುತ್ತಿದ್ದೇವೆ. ಕಾರ್ಯಕರ್ತರು ಸಂಪೂರ್ಣವಾಗಿ ಸಹಕರಿಸುತ್ತಿದ್ದಾರೆ ಎಂದು ಮುದ್ದುಕೃಷ್ಣ ತಿಳಿಸಿದರು.

ಶ್ರೀ ಪಟ್ಟಲದಮ್ಮ, ಮಂಟೇಸ್ವಾಮಿ, ಚೆನ್ನಿಗರಾಯ ಸ್ವಾಮಿ, ಮಾರಮ್ಮ, ಸಿದ್ದೇಶ್ವರ ಸೇರಿದಂತೆ 15 ದೇವಸ್ಥಾನಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿದರು. ಯಜಮಾನರಾದ ಎಸ್.ಮಹದೇವ್, ಎಂ.ಕೃಷ್ಣ ರವಿನಾಯಕ, ಕುಮಾರಣ್ಣ ಮಂಜುನಾಯಕ್, ತಿರುಮಲೇಶ್, ದಿನಕರ್ ಸಿದ್ದಪ್ಪ ರಕ್ಷಿತ್ ನಾಯಕ್, ಗಿರಿ ನಾಯಕ, ಕಿರಣ, ಅನಿ, ಮಹಾದೇವನಾಯಕ, ದೇವರಾಜು, ರಾಮ ಲಕ್ಷ್ಮಣ, ಶಂಕರು, ಮಹದೇವ, ವರುಣ, ಶ್ರೇಯಸ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ನೇಮಕ

ಹೆಚ್.ಡಿ.ಕೋಟೆ ಜ.21– ಬಿಜೆಪಿ ಮುಖಂಡ ಕೆ.ಎಂ.ಕೃಷ್ಣನಾಯಕ ಅವರನ್ನು ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಬೆಂಗಳೂರಿನ ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ನೇಮಕಾತಿ ಪತ್ರ ವಿತರಿಸಿ ಮಾತನಾಡಿ, ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ನಮ್ಮ ಪಕ್ಷಕ್ಕೆ ಸೇರ್ಪಡೆಗೊಂಡ ಕೃಷ್ಣನಾಯಕರು ಕೇವಲ ಹದಿನೈದು ದಿನಗಳಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿ 50 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದು ಪಕ್ಷ ಗಟ್ಟಿಯಾಗಿ ನೆಲೆಯೂರಲು ಕಾರಣರಾಗಿದ್ದಾರೆ. ಚುನಾವಣೆಯಲ್ಲಿ ಪರಾಭವಗೊಂಡರು ಕೂಡ ದೃತಿಗೆಡದೆ ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ ಎಂದರು.


ರಾಜ್ಯ ಬಿಜೆಪಿ ಅಧ್ಯಕ್ಷರಿಂದ ನೇಮಕಾತಿ ಪತ್ರ ಸ್ವೀಕರಿಸುತ್ತಿರುವ ಕೃಷ್ಣನಾಯಕ.

ಕೃಷ್ಣನಾಯಕರ ಸೇವೆ ಒಂದು ತಾಲೂಕಿಗೆ ಮಾತ್ರ ಸೀಮಿತಗೊಳಿಸದೆ ಅವರನ್ನು ಇಡೀ ನಾಡಿನಾದ್ಯಂತ ಬಳಸಿಕೊಳ್ಳುವ ಉದ್ದೇಶದಿಂದ ಪಕ್ಷ ಅವರನ್ನು ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿ ಜವಾಬ್ದಾರಿ ನೀಡಿದೆ. ಹಾಗಾಗಿ ಅವರು ಇಡೀ ರಾಜ್ಯವನ್ನು ಸುತ್ತಿ ಪಕ್ಷ ಸಂಘಟನೆ ಮಾಡುವುದರ ಜೊತೆಜೊತೆಯಲಿ ಸಮಾಜ ಕಟ್ಟುವ ಕೆಲಸವನ್ನು ಮಾಡಬೇಕು ಎಂದರು. ಇದೇ ಸಂದರ್ಭದಲ್ಲಿ ಮಾತನಾಡಿದ ಕೆ.ಎಂ.ಕೃಷ್ಣನಾಯಕ, ಬಿಜೆಪಿ ಪಕ್ಷದಲ್ಲಿ ಹಲವಾರು ಹಿರಿಯ ನಾಯಕರು ಇದ್ದರೂ ಕೂಡ ಪಕ್ಷ ನನ್ನನ್ನು ಗುರುತಿಸಿ ಜವಾಬ್ದಾರಿ ನೀಡಿದೆ. ಅದನ್ನು ದುರುಪಯೋಗ ಮಾಡಿಕೊಳ್ಳದೆ ಪಕ್ಷ ಸಂಘಟನೆ ಮಾಡಲು ಬಳಸಿಕೊಳ್ಳುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ರಾಜ್ಯ ಸಂಘಟನ ಕಾರ್ಯದರ್ಶಿ ರಾಜೇಶ್.ಜಿ, ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂ ಜೆಗೌಡ, ಮಾಜಿ ಶಾಸಕ ಕುಡುಚಿ ರಾಜೀವ್ ಇದ್ದರು.

ಮೂಗೂರು ಜಾತ್ರಾ ಮಹೋತ್ಸವಕ್ಕೆ ಸಿದ್ಧತೆ



ಮೂಗೂರು, ಜ.21– ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ನಡೆಯಲಿದ್ದು, ಜ.27 ರಂದು ಮಹಾ ರಥೋತ್ಸವದ ಮೂಲಕ ಅಧಿಕೃತ ಜಾತ್ರಾ ಮಹೋತ್ಸವ ರಂಗು ಪಡೆಯಲಿದೆ.

ಅದ್ಧೂರಿ ಜಾತ್ರಾ ಆಚರಣೆಗೆ ಈಗಾಗಲೇ ಜಾತ್ರಾ ಪೂರ್ವ ಸಿದ್ಧತಾ ಸಭೆ ಹಾಗೂ ಪೊಲೀಸ್ ಇಲಾಖೆಯ ಶಾಂತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ರಾಜ್ಯದ ನಾನಾ ಭಾಗಗಳಿಂದ ಅಪಾರ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದ್ದು ಕ್ಷೇತ್ರ ಸಕಲ ಸಿದ್ಧತೆಗೆ ಅಣಿಯಾಗುತ್ತಿದೆ. ಆದಿಶಕ್ತಿ ಶ್ರೀ ತ್ರಿಪುರ ಸುಂದರಿ ಅಮ್ಮ ತಿಬ್ಬಾದೇವಿ ರಥೋತ್ಸವಕ್ಕೂ ಮುನ್ನ ಒಂದು ವಾರ ಮೊದಲೇ ವಿಶೇಷ ಪೂಜಾ ಕೈಂಕರ್ಯಗಳು ಆರಂಭಗೊಳ್ಳಲಿವೆ.ಜ.14 ರಂದು ಹಸ್ತಾನ ಅಂಕುರಾರ್ಪಣೆ ಮೂಲಕ ಜಾತ್ರಾ ಕಾರ್ಯಕ್ರಮಗಳಿಗೆ ಚಾಲನೆ ದೊರೆತಿದ್ದು ಜ.22 ರಂದು ವಧೆ ಉತ್ಸವ, ರಾತ್ರಿ ಕಣಿಯರ ಮಂಟಪದಲ್ಲಿ ಪೂಜೆ ಉತ್ಸವ, 23 ರಂದು ಶೇಷ, ಪಕ್ಷಿ ವಾಹನೋತ್ಸವ, 24 ರಂದು ಸಿಂಹ ವಾಹನೋತ್ಸವ ಹಾಗೂ ಚಂದ್ರ ಮಂಡಲ ಉತ್ಸವ, 25 ರಂದು (ಮೂಗೂರು ಬಂಡಿ) ರುದ್ರಾಕ್ಷಿ ಮಂಟಪದ ಉತ್ಸವ, 26ರಂದು ಹೂವಿನ ಪಲ್ಲಕ್ಕಿಯಲ್ಲಿ ತೆಪ್ಪೋತ್ಸವ,27 ರಂದು ಶ್ರೀ ಅಮ್ಮನವರ ಮಹಾ ರಥೋತ್ಸವ ನಂತರ ಆನೆವಾಹನೋತ್ಸವ, 28 ರಂದು ಅಮ್ಮ ನವರು ಹೊಸಹಳ್ಳಿಗೆ ದಯಮಾಡಿ ಚಿಗುರು ಕಡಿಯುವುದು. ನಂತರ ಮೂಗೂರಲ್ಲಿ ಕುದುರೆ ಹಾಗೂ ಮಂಟಪದಲ್ಲಿ ಉಯ್ಯಾಲೆ ಉತ್ಸವ 29 ರಂದು ಅಳು ಪಲ್ಲಕ್ಕಿಯಲ್ಲಿ ವೈಮಾಳಿಗೆ ಉತ್ಸವ, ರಾತ್ರಿ ದೇಗುಲದಲ್ಲಿ ಪೂರ್ಣಾಭಿಷೇಕ ವಿಶೇಷ ಪೂಜೆ ಮಹಾ ಮಂಗಳಾರತಿಯೊಂದಿಗೆ ಜಾತ್ರಾ ಧಾರ್ಮಿಕ ಆಚರಣೆಗೆ ತೆರೆ ಬೀಳಲಿದೆ ಎಂದು ದೇವಸ್ಥಾನದ ಮೂಲಗಳು ತಿಳಿಸಿವೆ.

ಶ್ರೀಗಡಿ ವೀರಪ್ಪ ದೇವಾಲಯ ಸ್ವಚ್ಛಗೊಳಿಸಿದ ಹರ್ಷವರ್ಧನ್

ಮಲ್ಲುಂಡಿ, ಜ.21– ದೇಶದ ಸ್ವಚ್ಛತೆಯಿಂದ ಜನರ ಆರೋಗ್ಯ ಶುದ್ಧಿಯಾಗಿರುತ್ತದೆ ಎಂದು ಶಾಸಕ ಬಿ.ಹರ್ಷವರ್ಧನ್ ಹೇಳಿದರು. ಜ.22 ರಂದು ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ಉದ್ಘಾಟನೆಯ ಹಿನ್ನೆಲೆಯಲ್ಲಿ ನರೇಂದ್ರ ಮೋದಿ ಅವರ ಸಂದೇಶದ ಮೇರೆಗೆ ನಂಜನಗೂಡು ತಾಲೂಕಿನ ವಳಗೆರೆ ಗ್ರಾಮದ ಹೊರ ವಲಯದಲ್ಲಿರುವ ಶ್ರೀಗಡಿ ವೀರಪ್ಪ ದೇವಾಲಯದಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ದೇಶಾದ್ಯಂತ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಮೊದಲು ಗ್ರಾಮೀಣ ಪ್ರದೇಶ ಸ್ವಚ್ಛತಾವಾದರೆ ದೇಶ ಸ್ವಚ್ಛತಾವಾಗುತ್ತದೆ ಇದ್ದರಿಂದ ದೇಶದ ಜನರ ಆರೋಗ್ಯ ಉತ್ತಮವಾಗಿರುತ್ತದೆ. ಪ್ರತಿಯೊಬ್ಬರು ತಮ್ಮ ಮನೆಗಳ ಮುಂದೆ ಸ್ವಚ್ಛತೆಯಿಂದ ನೋಡಿಕೊಂಡಾಗ ಮಾತ್ರ ಆರೋಗ್ಯ ಉತ್ತಮವಾಗಿರುತ್ತದೆ ಎಂದರು.

ರೈತರ ಜಮೀನುಗಳ ಸಂಪರ್ಕ ರಸ್ತೆ ಅಭಿವೃದ್ಧಿಗೆ ಶೀಘ್ರ ಅನುದಾನ ಬಿಡುಗಡೆ


ಕೆ.ಆರ್.ನಗರ ತಾಲೂಕಿನ ಕೆಸ್ತೂರುಕೊಪ್ಪಲು ಗೇಟ್‌ನಿಂದ ರೈತರ ಜಮೀನಿಗೆ ಸಂಪರ್ಕ ರಸ್ತೆ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆ.ಆರ್.ನಗರ, ಜ.21– ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಅಗತ್ಯವಿರುವ ಅನುದಾನವನ್ನು ಸರ್ಕಾರದಿಂದ ಕೊಡಿಸುವುದಾಗಿ ಶಾಸಕ ಡಿ.ರವಿಶಂಕರ್ ಭರವಸೆ ನೀಡಿದ್ದಾರೆ.

ತಾಲೂಕಿನ ಕೆಸ್ತೂರುಗೇಟ್‌ನಿಂದ ಕಾವೇರಿ ನದಿ ಪಾತ್ರದ ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಅಧಿಕಾರಿಗಳು ನಿರಂತರವಾಗಿ ಅನ್ನದಾತರ ಸಂಪರ್ಕದಲ್ಲಿದ್ದು ಅವರ ಜಮೀನುಗಳಿಗೆ ನೀರು ಸರಬರಾಜು ಮಾಡುವುದರ ಜತೆಗೆ ರಸ್ತೆ ಸೇರಿದಂತೆ ಇತರ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಮಾಡಿಸಬೇಕೆಂದು ಸೂಚಿಸಿದರು.

ನಾನು ಶಾಸಕನಾಗಿ ಆಯ್ಕೆಯಾದ ನಂತರ ಕೆ.ಆರ್. ನಗರ ತಾಲೂಕು ಕೇಂದ್ರದಲ್ಲಿ ಕ್ಷೇತ್ರವ್ಯಾಪ್ತಿಯ ರೈತ ಮುಖಂಡರ ಸಭೆ ಕರೆದು ಅವರ ಸಮಸ್ಯೆಗಳನ್ನು ಆಲಿಸಿದ್ದು ಮುಂದಿನ ದಿನಗಳಲ್ಲಿ ಆದ್ಯತೆಯ ಮೇರೆಗೆ ಅವುಗಳನ್ನು ಪರಿಹರಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆಂದು ತಿಳಿಸಿದರು.

ಆನಂತರ ಅವರು ಡಿ.ಕೆ.ಕೊಪ್ಪಲು ಗೇಟ್‌ನಿಂದ ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಚಾಲನೆ ನೀಡಿ ರೈತರ ಸಮಸ್ಯೆ ಆಲಿಸಿದರು. ಬ್ಯಾಡರಹಳ್ಳಿ ಗ್ರಾ.ಪಂ. ಅಧ್ಯಕ್ಷ ಈರಯ್ಯ, ತಾಲೂಕು ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ಮುಖಂಡರಾದ ಗೌತಮ್, ಶ್ರೀಕಾಂತ್, ಶ್ರೀಧರ, ಹೆಚ್.ಜೆ.ರಮೇಶ್, ಕಾಡಾ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಹರೀಶ್ ಮತ್ತಿತರರಿದ್ದರು.

ಲೋಕಸಭಾಗೆ ಯತೀಂದ್ರ, ಸುನಿಲ್ ಬೋಸ್‌ಗೆ ಟಿಕೆಟ್ ನೀಡಿ



ತಿ.ನರಸೀಪುರ, ಜ.21– ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯ ಹಾಗೂ ಕೆಡಿಪಿ ಸದಸ್ಯ ಸುನಿಲ್ ಬೋಸ್ ಅವರುಗಳಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿ ಕೊಡುವಂತೆ ಕಾಂಗ್ರೆಸ್ ಪಕ್ಷದ ವರಿಷ್ಠರಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಮಾಜಿ ಕಾರ್ಯದರ್ಶಿ ಹಾಗೂ ಮೈಸೂರು ಚಾಮರಾಜನಗರ ಜಿಲ್ಲಾ ಕೈಗಾರಿಕಾ ಸರಬರಾಜು ಸಹಕಾರ ಮಾರಾಟಗಾರರ ಸಂಘದ ಅಧ್ಯಕ್ಷ ಬನ್ನೂರು ಬಿ.ಪದ್ಮನಾಭ ಒತ್ತಾಯಿಸಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಮೈಸೂರು – ಕೊಡಗು ಲೋಕಸಭಾ ಕ್ಷೇತ್ರದಿಂದ ಮತ್ತು ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪನವರ ಪುತ್ರ ಸುನಿಲ್‌ಬೋಸ್ ಅವರುಗಳನ್ನು ಸ್ಪರ್ಧಿಸಲು ಅವಕಾಶ ಕಲ್ಪಿಸಿ ಕೊಡಬೇಕು. ಈ ಇಬ್ಬರು ಯುವ ನಾಯಕರಾಗಿದ್ದು, ಪಕ್ಷ ಸಂಘಟನೆಯಲ್ಲಿ ಇವರ ಪಾತ್ರ ಅಪಾರವಾಗಿದೆ. ಇವರುಗಳಿಗೆ ಪಕ್ಷ ಗುರುತಿಸಿ ಟಿಕೆಟ್ ನೀಡಿದರೆ ಇವರ ಗೆಲುವು ಸುಲಲಿತವಾಗಲಿದೆ ಎಂದು ಹೇಳಿದರು,

ಎರಡು ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರುಗಳು ಇರುವುದರಿಂದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಈ ಕ್ಷೇತ್ರಗಳಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಅವರು ಹೇಳಿದರು.

ವರುಣ ವಿಧಾನಸಭಾ ಕ್ಷೇತ್ರ ಹಾಗೂ ತಿ.ನರಸೀಪುರ ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಇಬ್ಬರು ಯುವ ನಾಯಕರು ಪಕ್ಷ ಸಂಘಟನೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರುಗಳ ಗೆಲುವಿಗೆ ಶ್ರಮಿಸಿದ್ದಾರೆ ಎಂದು ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು– ಕೊಡಗು ಮತ್ತು ಚಾಮರಾಜನಗರ ಲೋಕಸಭಾ ಕ್ಷೇತ್ರಗಳ ಜನರ ವಿಶ್ವಾಸ ಗಳಿಸಿರುವ ಯುವ ನಾಯಕರಾದ ಡಾ. ಯತಿಂದ್ರ ಸಿದ್ದರಾಮಯ್ಯ ಹಾಗೂ ಸುನಿಲ್ ಬೋಸ್ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನಾಗಿ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ವರಿಷ್ಠರಲ್ಲಿ ಮನವಿ ಮಾಡಿದರು.


ಬನ್ನೂರಿನ ಸಮೀಪದ ಬಿ.ಸೀಹಳ್ಳಿ ಗ್ರಾಮದಲ್ಲಿ ಅಯೋಧ್ಯೆಯಿಂದ ತರಲಾದ ಮಂತ್ರಾಕ್ಷತೆಯನ್ನು ವಿತರಿಸಲಾಯಿತು. ಮಂಜು, ಮಧು, ಮರಯ್ಯಚಾರಿ, ಕಲ್ಯಾಣ್, ದೇವರಾಜು, ಸಿದ್ದರಾಜು ಮೊದಲಾದವರು ಇದ್ದರು.

ವಿಜೃಂಭಣೆಯಿಂದ ನಡೆದ ಮಹದೇವ ತಾತಾ ರಥೋತ್ಸವ



ನಂಜನಗೂಡು: ತಾಲೂಕಿನ ಹುಲ್ಲಹಳ್ಳಿ ಸಮೀಪದಲ್ಲಿರುವ ಸಂಗಮ ಕ್ಷೇತ್ರದಲ್ಲಿ ಸದ್ಗುರು ಶ್ರೀ ಮಹದೇವ ತಾತಾ ಅವರ 36ನೇ ವರ್ಷದ ಸಂಸ್ಮರಣೋತ್ಸವ ಹಾಗೂ ಪ್ರಥಮ ಗಣಾರಾಧನೆ ಅಂಗವಾಗಿ ಭಾನುವಾರ ವಿಜೃಂಭಣೆಯಿಂದ ರಥೋತ್ಸವ ಜರುಗಿತು.

ರಥೋತ್ಸವವನ್ನು ವಿವಿಧ ಬಗೆಯ ಅಲಂಕೃತ ಪುಷ್ಪ ಹಾಗೂ ವರ್ಣಮಯ ಅಲಂಕಾರಿಕ ಬಟ್ಟೆಗಳಿಂದ ಸಿಂಗರಿಸಿದ್ದ ಎರಡು ಜೋಡಿ ರಥಗಳಲ್ಲಿ ಬೆಳ್ಳಿ ಹಾಗೂ ಪಂಚಲೋಹದ ಮಹದೇವ ತಾತಾ ಅವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಧಾರ್ಮಿಕ ವಿಧಾನಗಳನ್ನು ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ದೇವಾಲಯದ ಸುತ್ತಲಿನ ಆವರಣದಲ್ಲಿ ಜೋಡಿ ರಥಗಳು ಸಾಗಿ ಸ್ವಸ್ಥಾನಕ್ಕೆ ಮರಳಿದವು.

ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಭಕ್ತರು ರಥವನ್ನು ಎಳೆಯುವ ಮೂಲಕ ಭಕ್ತಿ ಪರಾಕಾಷ್ಠೆ ಮೆರೆದರು. ಈ ಸಂದರ್ಭ ವೀರಗಾಸೆ, ನಂದಿದ್ವಜ, ಮಂಗಳ ವಾದ್ಯಗೋಷ್ಠಿ, ಪೂಜಾಕುಣಿತ, ವೀರಭದ್ರ ಕುಣಿತ ಪ್ರದರ್ಶನ ರಥೋತ್ಸವದ ಮೆರಗು ಹೆಚ್ಚಿಸಿತು. ಕಂಸಾಳೆ ಜನಪದರು ಹಾಗೂ ಭಜನೆ ತಂಡಗಳು ಮಹದೇವ ತಾತಾ ಸ್ಮರಣೆಯ ಗೀತೆಗಳನ್ನು ಪಠಿಸುತ್ತ ಹೆಜ್ಜೆ ಹಾಕಿದರು.

ಮೈಸೂರು, ಮಂಡ್ಯ, ಚಾಮರಾಜನಗರ, ಗದಗ, ಬಳ್ಳಾರಿ, ಧಾರವಾಡ, ಹುಬ್ಬಳ್ಳಿ, ದಾವಣಗೆರೆ ಸೇರಿದಂತೆ ನಾನಾ ಜಿಲ್ಲೆಗಳಿಂದ ಭಕ್ತರು ಸಂಸ್ಮರಣೋತ್ಸವದಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ಸಂಸ್ಮರಣೋತ್ಸವದಲ್ಲಿ ಭಾಗಿಯಾಗಿದ್ದ 30 ಸಾವಿರಕ್ಕೂ ಹೆಚ್ಚು ಭಕ್ತರಿಗೆ ಮಹದೇವ ತಾತಾ ಭಕ್ತ ಮಂಡಳಿ ವತಿಯಿಂದ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅಹಿತಕರ ಘಟನೆ ಜರುಗದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹನುಮಾನ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಹನುಮಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಹನುಮಾನ್ (ಕ)	4 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಆಯಲನ್ (ತ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದಿನಿಂದ ನಿಲುವಾಗಿಲು ಮಹದೇಶ್ವರ ಸ್ವಾಮಿ ದನಗಳ ಜಾತ್ರಾ ಮಹೋತ್ಸವ

ಸರಗೂರು, ಜ.21– ತುಂಬಸೋಗೆ ಗ್ರಾಮದ ಮಧ್ಯದಲ್ಲಿರುವ ನಿಲುವಾಗಿಲು ಶ್ರೀ ಮಹದೇಶ್ವರಸ್ವಾಮಿ ದನಗಳ ಜಾತ್ರಾ ಮಹೋತ್ಸವ ಜ.22ರಿಂದ ಜ.24 ರವರೆಗೆ ನಡೆಯಲಿದೆ. ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಜಾತ್ರಾ ಮಹೋತ್ಸವವನ್ನು ಉದ್ಘಾಟಿಸಲಿದ್ದು, ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಲಿದ್ದಾರೆ, ಸೋಮವಾರ ಬೆಳಿಗ್ಗೆ 5 ಗಂಟೆಯಿಂದ 7 ಗಂಟೆಯ ಸಲ್ಲುವ ಶುಭ ಲಗ್ನದಲ್ಲಿ ಬಿಡಗಲು ಪಡವಲು ವಿರಕ್ತ ಮಠದ ಮಹದೇವಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಹೋಮ–ಹವನಗಳು, ರುದ್ರಾಭಿಷೇಕ ನಡೆಯಲಿದೆ. ಜ.23ರ ಮಂಗಳವಾರ ಬೆಳಿಗ್ಗೆ 9.30 ಗಂಟೆಗೆ ಮಹದೇಶ್ವರಸ್ವಾಮಿಗೆ ಹಾಲು ಹರವಿ ಸೇವೆ ಹಾಗೂ ಮಹಾ ಕೊಂಡೋತ್ಸವ ನಡೆಯಲಿದೆ. ಇದೇ ದಿನ ರಾತ್ರಿ 9 ಗಂಟೆಗೆ ಶ್ರೀ ಮಾರಮ್ಮನವರ ಕೃಪಾ ಪೋಷಿತ ನಾಟಕ ಮಂಡಳಿ ಇಬ್ಜಾಲ ಅವರಿಂದ ಶ್ರೀ ಶನಿಪ್ರಭಾವ ಅಥವಾ ರಾಜವಿಕ್ರಮ ಎಂಬ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿದೆ.



ಜ.24ರ ಬುಧವಾರ ಬೆಳಿಗ್ಗೆ 9 ಗಂಟೆಗೆ ಮಹದೇಶ್ವರಸ್ವಾಮಿ ರಥೋತ್ಸವ ನಡೆಯಲಿದೆ. ಇದೇ ದಿನ ರಾತ್ರಿ 10 ಗಂಟೆಗೆ ಮೈಸೂರಿನ ಸುಪ್ರಸಿದ್ಧ ದಿ ಯಂಗ್ ಸ್ಟಾರ್ ಮೆಲೋಡಿಸ್ ಇವರಿಂದ ಆರ್ಕೆಸ್ಟ್ರಾ ಏರ್ಪಡಿಸಲಾಗಿದ್ದು, ಗಾಯಕರಾದ ಕದಂಬ ರಂಗಯ್ಯ, ಪುರುಷೋತ್ತಮ್, ಜೋಷಿ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಮನೋಜ್ (ಕೋಳಿ ಕಳ್ಳ) ಮತ್ತು ಡಿ.ಕೆ.ಡಿ. ಡಾನ್ಸರ್‌ಗಳು ಭಾಗವಹಿಸಲಿದ್ದಾರೆ.

ರಾತ್ರಿ ಹೂವಿನ ಪಲ್ಲಕ್ಕಿಯಲ್ಲಿ ಕಪಿಲಾ ನದಿಯಲ್ಲಿ ಮಹದೇಶ್ವರ ಉತ್ಸವ ಮೂರ್ತಿಯ ತೆಪ್ಪೋತ್ಸವ ನಡೆಯಲಿದ್ದು, ಮೂರು ದಿನಗಳು ನಡೆಯುವ ಜಾತ್ರೆಗೆ ಬರುವ ಭಕ್ತರಿಗೆ ಭಕ್ತಾದಿಗಳು ನೀಡಿದ ದೇಣಿಗೆಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಗೌರಮ್ಮ ನಿಧನ



ಬೈಲಕುಪ್ಪೆ: ಮಂಚದೇವನಹಳ್ಳಿ ಗ್ರಾಮದ ದಿವಂಗತ ಬಸವಗೌಡರ ಧರ್ಮಪತ್ನಿ ಗೌರಮ್ಮ(84) ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅವರ ಅಂತ್ಯಸಂಸ್ಕಾರ ಮಂಚದೇವನಹಳ್ಳಿ ಗ್ರಾಮದಲ್ಲಿರುವ ರುದ್ರ ಭೂಮಿಯಲ್ಲಿ ಭಾನುವಾರ ನಡೆಯಿತು.


ಶ್ರೀ ಸುಜಿತ್ ಕುಮಾರ್ ರವರಿಗೆ
ಜನ್ಮದಿನದ ಶುಭಾಶಯಗಳು
ಗಗನದಲಿ ನಕ್ಷತ್ರಗಳು ಸಾವಿರಾರು, ಸಮುದ್ರದಲಿ ಮುತ್ತುಗಳು ಸಾವಿರಾರು
ಸುಜಿತ್ ಕುಮಾರ್
ನಿಮ್ಮನ್ನು ಮನಸ್ಸಿನ ಅಂತರಾಳದಿಂದ ಪ್ರೀತಿಸುವವರು ಸಾವಿರಾರು
ನಿಮ್ಮ ಈ ಹುಟ್ಟು ಸಾರ್ಥಕತೆಯ ಸಾಧನೆಯಾಗಿ ಸಾಹಸವಾಗಿ, ಜಯಶಾಲಿಯಾಗಲಿ ಎಂದು ನಮ್ಮೆಲ್ಲರ ಪ್ರೀತಿಯ ಪ್ರಾರ್ಥನೆ.
ಶುಭಕೋರುವವರು : ಶ್ರೀ ಕೃಷ್ಣ ಎಂಟರ್ ಪ್ರೈಸಸ್
MM 77 PRINTS
7760614743